ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಫೆಬ್ರುವರಿ, ೨೦೧೬ ಸಂಪಾದಕ : ಡಿ.ಎಸ್.ನಾಗಭೂಷಣ ಸಂಪುಟ: ೫ ಸಂಚಿಕೆ: ೭

ಚಂದಾ : ರೂ. ೧೩೫/-(ಫೆಬ್ರುವರಿ-ಆಗಸ್ಟ್, ೨೦೧೬) ಬಿಡಿ ಪ್ರತಿ: ರೂ. ೨೦/- ಪುಟ: ೨೦

ವಿಳಾಸ: ಎಚ್.ಐ.ಜಿ-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

ದೂ: ೦೮೧೮೨-೨೪೮೫೭೪ ಸಂಚಾರಿ: ೯೪೪೯೨ ೪೨೨೮೪ ಈ ಮೇಲ್: dsnagabhushana@gmail.com

ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ಒಂದು ತಿಂಗಳಿಂದ ರಾಷ್ಟ್ರ ರಾಜಕಾರಣ ದೆಹಲಿಯ ಚಳಿಯಂತೆ ತಣ್ಣಗೇ ಉಳಿದಿದೆ. ತಿಂಗಳ ಆರಂಭದಲ್ಲಿ ಪಠಾಣ್‌ಕೋಟ್ ಎಂಬ ಒಂದು ದೊಡ್ಡ ಬಾಂಬು ಮತ್ತು ತಿಂಗಳ ಮಧ್ಯದಲ್ಲಿ ರೋಹಿತ್ ವೇಮುಲ ಎಂಬ ಸಣ್ಣ ಬಾಂಬು ಸಿಡಿಯಿತಾದರೂ ಪ್ರಧಾನಿ ಮೋದಿ ಇದರಿಂದೆಲ್ಲ ಬಹಿರಂಗವಾಗಿ ತಲೆಕೆಡಿಸಿಕೊಳ್ಳುವ ಮತ್ತು ದೇಶದ ತಲೆ ಕೆಡಿಸುವ ರಾಜಕಾರಣ ಪ್ರದರ್ಶಿಸದೆ ತಮ್ಮ ಪಾಡಿಗೆ ತಾವು 'ಸ್ಟಾರ್ಟ್ ಅಪ್'ಗಳೆಂಬ ಹೊಸ ಉದ್ಯಮಿಗಳ ವರ್ಗವೊಂದನ್ನು ಗುರುತಿಸಿ ಅದಕ್ಕೆ ಕರ ರಿಯಾಯ್ತಿ ಇತ್ಯಾದಿ ಪ್ರೋತ್ಸಾಹ ಕ್ರಮಗಳನ್ನು ಪ್ರಕಟಿಸುತ್ತಾ ತಮ್ಮ ಅಭಿಮಾನಿ ವರ್ಗದಿಂದ ಚಪ್ಪಾಳೆ ಗಿಟ್ಟಿಸಿಕೊಳ್ಳುವುದರಲ್ಲಿ ಮುಳುಗಿಹೋಗಿದ್ದಾರೆ. ಇದು ನಿಜವಾಗಿಯೂ ಜಾಣ ರಾಷ್ಟ್ರ ರಾಜಕಾರಣ! ಹಿಂದಿನ ಪ್ರಧಾನಿ ಮನಮೋಹನ ಸಿಂಗ್ ಅವರು ಯಾವುದರ ಬಗ್ಗೆಯೂ ಪ್ರತಿಕ್ರಿಯೆ ನೀಡದೆ ತಮ್ಮ ಪಾಡಿಗೆ ತಮ್ಮದೇ ಶೈಲಿಯಲ್ಲಿ ಆಡಳಿತ ನಡೆಸುತ್ತಿದ್ದಾಗ ಅವರನ್ನು ಮನ-ಮೌನ ಸಿಂಗ್ ಎಂದು ಟೀಕಿಸುತ್ತಿದ್ದ ಮೋದಿ ಮಹಾಶಯರು ಈಗ ಅದೇ ಶೈಲಿಯ ರಾಜಕಾರಣವನ್ನು ಅನುಸರಿಸುತ್ತಿರುವುದು ವಿಚಿತ್ರ ಮತ್ತು ವಿಪರ್ಯಾಸಕರ!

ಪಠಾಣ್‌ಕೋಟ್ ದಾಳಿಯಂತಹ ಗಂಭೀರ ಭದ್ರತೆಯ ವಿಷಯವಾಗಲಿ ಅಥವಾ ದಲಿತ ವಿದ್ಯಾರ್ಥಿ ರೋಹಿತನ ದಾರುಣ ಸಾವಿನ ಹಿಂದೆ ಇದ್ದಂತೆ ತೋರುವ ರಾಜಕಾರಣವಾಗಲಿ, ರಾಷ್ಟ್ರಾಡಳಿತದ ಮುಖ್ಯ ನೆಲೆಗಳಿಗೆ ಸಂಬಂಧಿಸಿದ ವಿದ್ಯಮಾನಗಳೇ ಆಗಿವೆ. ಹಿಂದಿನ ಸರ್ಕಾರದ ನೀತಿಗಳನ್ನು ಕಟುವಾಗಿ ವಿರೋಧಿಸಿ ಅಧಿಕಾರಕ್ಕೆ ಬಂದಿರುವ ಈ ಸರ್ಕಾರದ ಏಕೈಕ ನಾಯಕರಾಗಿ ವಿಜೃಂಭಿಸುತ್ತಿರುವ ಪ್ರಧಾನಿ ಮೋದಿ, ಸರ್ಕಾರ ಕಷ್ಟಕ್ಕೆ ಸಿಕ್ಕಿಕೊಂಡಾಗಲೆಲ್ಲ ಮೌನವಹಿಸುವುದು ಮಾತ್ರ ಜಾಣತನಕ್ಕಿಂತ ಹೆಚ್ಚಾಗಿ ರಕ್ಷಣಾತ್ಮಕ ಪಲಾಯನವಾದವಾಗಿ ಕಾಣುತ್ತದೆ. ಸುಷ್ಮಾ ಸ್ವರಾಜ್, ವಸುಂಧರಾ ರಾಜೇ ಪ್ರಕರಣಗಳಿಂದ ಹಿಡಿದು ಪಠಾಣ್‌ಕೋಟ್ ದಾಳಿ-ರೋಹಿತ್ ಸಾವಿನ ಪ್ರಕರಣಗಳವರೆಗೆ ಅವರು ಒಂದೇ ಒಂದು ಮಾತು ಆಡಿಲ್ಲ. ಅವರ ನೆಚ್ಚಿನ 'ಮನ್ ಕಿ ಬಾತ್'ನಲ್ಲೂ. ಆದರೆ ವಿದೇಶ ಪ್ರವಾಸಗಳ ಸಮಯದಲ್ಲಿ ಮಾತ್ರ ಅವರ ವಾಚಾಳಿತನ ಮೇರೆ ಮೀರಿ ಹರಿಯುತ್ತದೆ. ಏಕೆ?

ಮೋದಿಯವರ ಬಹುಪ್ರಶಂಸಿತ ಸರಣಿ ವಿದೇಶ ಪ್ರವಾಸಗಳ ಪರಿಣಾಮವಾದರೂ ಏನು? ಈ ಮೂಲಕ ಆರಂಭಿಸಿದ ಅವರ ವಿದೇಶಾಂಗ ನೀತಿ ಎಲ್ಲಿಗೆ ಬಂದು ಮುಟ್ಟಿದೆ? ವ್ಯಾಪಾರ ಲಾಭ ಉದ್ದೇಶಗಳುಳ್ಳ ಪಶ್ಚಿಮ ರಾಷ್ಟ್ರಗಳ ಉತ್ಸಾಹ ಅರ್ಥವಾಗುವಂತಹುದು. ಮಿಕ್ಕಂತೆ ಮೋದಿ ಧಾಂಧೂಂನೊಂದಿಗೆ ಆರಂಭಿಸಿದ ಚೀನಾದೊಡನೆಯ ಹೊಸ ಗೆಳೆತನ ಆ ದೇಶದ ಆರ್ಥಿಕ ಕುಸಿತದೊಂದಿಗೆ ನೆಲಕಚ್ಚಿದೆ. ನೇಪಾಳದ ಸಂವಿಧಾನ ರಚನೆಯ ಸಂದರ್ಭದಲ್ಲಿ ಅದನ್ನು ಹಿಂದೂ ರಾಷ್ಟ್ರ ಮಾಡಲು ನಡೆಸಲಾಯಿತೆಂದು ಹೇಳಲಾದ ಗಲಭೆಯ ರಾಜಕಾರಣ ಆ ದೇಶವನ್ನು ಚೀನಾದ ಇನ್ನಷ್ಟು ಸನಿಹಕ್ಕೆ ತಳ್ಳಿದೆ. ಮಿಕ್ಕಂತೆ ಯಾವ ನೆರೆಹೊರೆಯ ದೇಶವೂ ಭಾರತದ ಬಗ್ಗೆ ವಿಶೇಷ ಒಲವು ಬೆಳೆಸಿಕೊಂಡಂತೆ ತೋರುತ್ತಿಲ್ಲ. ಎಲ್ಲಕ್ಕಿಂತ ಮುಖ್ಯವಾಗಿ, ಯುಪಿಎ ಸರ್ಕಾರ ಪಾಕಿಸ್ತಾನದೊಡನೆ ಮಾತುಕತೆಯಾಡುವುದನ್ನು ಒಂದಲ್ಲ ಒಂದು ಕಾರಣದ ಮೇಲೆ ಸದಾ ವಿರೋಧಿಸುತ್ತಿದ್ದ ಬಿಜೆಪಿ ಈಗ ಮೋದಿ ನೇತೃತ್ವದಲ್ಲಿ ಯಾವ ಎಗ್ಗೂ ಇಲ್ಲದೆ ಮಾತುಕತೆಗಳನ್ನು ಆರಂಭಿಸಿ ಪಠಾಣ್‌ಕೋಟ್ ದಾಳಿಯಿಂದ ತತ್ತರಿಸಿದೆ.

ನೆರೆಮನೆಯವ ಮಾಡಿದರೆ ವ್ಯಭಿಚಾರ; ಅದನ್ನೇ ತಾನು ಮಾಡಿದರೆ ರಸಿಕತೆ ಎನ್ನುವಂತೆ ಪಾಕಿಸ್ತಾನದೊಡನೆಯ ಸಂಬಂಧ ಸ್ಥಾಪನೆಯ ವಿಷಯವನ್ನು ವ್ಯಾಖ್ಯಾನಿಸುತ್ತಿರುವ ಮೋದಿ, ಪಠಾಣ್‌ಕೋಟ್ ದಾಳಿಯ ರೂಪದಲ್ಲಿ ಮುಖಭಂಗ ಅನುಭವಿಸಿರುವುದು ಸಹಜವೇ ಆಗಿದೆ. ವಿದೇಶಾಂಗ ವ್ಯವಹಾರಗಳ ಅನುಭವವೇ ಇಲ್ಲದ ಇವರು, ತಮ್ಮ ಅಧಿಕೃತ ವಿದೇಶಾಂಗ ಸಚಿವೆ ಸುಷ್ಮಾ ಸ್ವರಾಜ್‌ರನ್ನು ಕೇವಲ ರಾಜದೂತತ್ವದ ಕೆಲಸಕ್ಕೆ ಸೀಮಿತಗೊಳಿಸಿ ತಮ್ಮ ಅತ್ಯುತ್ಸಾಹಿ ಭದ್ರತಾ ಸಲಹಾಗಾರ ದೋವಲ್ ನೇತೃತ್ವದ ವಿದೇಶ ವ್ಯವಹಾರ ಪಡೆಯೊಂದಿಗೆ ರಹಸ್ಯವಾಗಿ ರೂಪಿಸಿದ ಪಾಕಿಸ್ತಾನ ನೀತಿ ಅವರ ಮುಖಕ್ಕೇ ಸಿಡಿದಿದೆ. ಪಾಕಿಸ್ತಾನದ ಸಂಕೀರ್ಣ ಆಂತರಿಕ ರಾಜಕಾರಣವನ್ನು ನಿರ್ಲಕ್ಷಿಸಿ ಭಾರತ-ಪಾಕಿಸ್ತಾನ ಸಂಬಂಧಗಳಲ್ಲಿ ಕ್ರಾಂತಿಕಾರಕ ಬದಲಾವಣೆ ತಂದು ವಿಶ್ವಭಾಜನರಾಗುವ(ನೋಬೆಲ್ ಶಾಂತಿ ಪುರಸ್ಕಾರದ ಬಯಕೆ?) ಆತುರದಲ್ಲಿ ಮೋದಿ ಇದ್ದಕ್ಕಿದ್ದಂತೆ ಲಾಹೋರ್‌ಗೆ ನಾಟಕೀಯ ಭೇಟಿ ನೀಡಿ ಪಾಕಿಸ್ತಾನದ ಪ್ರಧಾನಿ ನವಾಜ್ ಶರೀಫರ ಹುಟ್ಟು ಹಬ್ಬದ ಚಹಾ ಕೂಟಕ್ಕೆ ಹಾಜರಾಗಿ ತಮ್ಮ ಅಭಿಮಾನಿ ಬಳಗದಿಂದ ರಿವರ್ಸ್ ಗೇರ್‌ನಲ್ಲಿ ಉಘೇ ಉಘೇ ಎನ್ನಿಕೊಳ್ಳುತ್ತಿದ್ದಾಗಲೇ ಗಡಿ ಬಳಿಯ ನಮ್ಮ ಆಯಕಟ್ಟಿನ ವಾಯುನೆಲೆಯನ್ನು ಪಾಕಿಸ್ತಾನಿ ಉಗ್ರರು ಪ್ರವೇಶಿಸಿ ನಮ್ಮ ಸೈನಿಕರ, ಸೇನಾಧಿಕಾರಿಗಳ ಸಾವಿಗೆ ಕಾರಣರಾಗಿ ದೇಶಕ್ಕೆ ಮುಜುಗರ ಉಂಟು ಮಾಡಿದ್ದಾರೆ. ಈ ಸಂಬಂಧ ಭದ್ರತಾ ಲೋಪಗಳ ಬಗ್ಗೆ ದೇಶಕ್ಕೆ ವಿವರಣೆ ನೀಡಬೇಕಾದ ಮೋದಿ ಬಾಯಿಯನ್ನೇ ಬಿಡುತ್ತಿಲ್ಲ. ಅವರ ರಕ್ಷಣಾ ಸಚಿವರು ಬರೀ ವೀರಾವೇಶದ ಮಾತನ್ನಾಡುತ್ತಿದ್ದಾರೆ. ಮೋದಿ ಸರ್ಕಾರ ವಿದೇಶಾಂಗ ವ್ಯವಹಾರಗಳ ವಿಷಯದಲ್ಲಿ ಕಾಂಗ್ರೆಸ್‌ನಿಂದ ಕಲಿಯಬೇಕಾದದ್ದು ಸಾಕಷ್ಟಿದೆ ಎನಿಸುತ್ತದೆ.

ಇನ್ನು ಹೈದರಾಬಾದ್ ಕೇಂದ್ರೀಯ ವಿಶ್ವವಿದ್ಯಾಲಯದ ವಿದ್ಯಾರ್ಥಿ ರೋಹಿತನ ಆತ್ಮಹತ್ಯೆ ಆತ ದಲಿತನೇ ಅಲ್ಲವೇ ಎಂಬ ವಿವಾದವನ್ನು ಮೀರಿದ ರಾಜಕೀಯ ಪ್ರಕರಣವಾಗಿದೆ. ರಾಷ್ಟ್ರೀಯತೆಯ ಪರಿಕಲ್ಪನೆಯನ್ನು ತನ್ನ ಪುರಾತನ ನಂಬಿಕೆಗಳ ಹಿನ್ನೆಲೆಯಲ್ಲಿ ಅತಿ ಸಂಕುಚಿತಗೊಳಿಸುತ್ತಿರುವ ಸಂಘ ಪರಿವಾರದ ದುಷ್ಟ ರಾಜಕಾರಣದ ಫಲವಿದು. ಅಂಬೇಡ್ಕರ್ ಹೆಸರಲ್ಲಿ ವಿದ್ಯಾರ್ಥಿ ಸಂಘವನ್ನು ರಚಿಸಿಕೊಂಡಿರುವುದೇ ಮೊದಲಾಗಿ ಅದಕ್ಕೆ ಅಸಹನೀಯವಾಗಿ ಕಂಡಿದೆ. ನಂತರ ಅದರ ಸದಸ್ಯರಾದ ರೋಹಿತ್ ಮತ್ತು ಆತನ ಸ್ನೇಹಿತರು ಮೆಮೋನ್‌ನನ್ನು ಗಲ್ಲಿಗೇರಿಸಿದ್ದನ್ನು ಪ್ರತಿಭಟಿಸಿದ್ದಂತೂ ಅದಕ್ಕೆ ರಾಷ್ಟ್ರದ್ರೋಹವಾಗಿ ಕಂಡಿದೆ. ಬಂಡಾರು ದತ್ತಾತ್ರೇಯ ಮತ್ತು ಸ್ಮೃತಿ ಇರಾನಿ ಜೋಡಿಗೆ ಆ ವಿದ್ಯಾರ್ಥಿಗಳನ್ನು ವಿಶ್ವವಿದ್ಯಾಲಯದಿಂದ ಹೊರಹಾಕುವಂತೆ ಕುಲಪತಿಯ ಮೇಲೆ ಒತ್ತಡ ಹೇರಲು ಇಷ್ಟೇ ಸಾಕಾಗಿದೆ. ಆ ಕುಲಪತಿಗಳಿಗೂ ಈ ವಿದ್ಯಾರ್ಥಿ ರಾಜಕಾರಣದಿಂದ ತಲೆ ರೋಸಿಹೋಗಿತ್ತೆಂದು ಕಾಣುತ್ತದೆ. ಇವೆರಡರ ಪರಿಣಾಮ ರೋಹಿತ್ ಎಂಬ ಸೂಕ್ಷ್ಮ ಮನಸ್ಸಿನ ಹುಡುಗನ ಅಂತ್ಯಕ್ಕೆ ಕಾರಣವಾಗಿದ್ದಂತೆ ತೋರುತ್ತದೆ. ಮೋದಿಯವರು ಒಂದು ಆಧುನಿಕ ರಾಷ್ಟ್ರದ ಜವಾಬ್ದಾರಿ ನಾಯಕರಾಗಿ ಎಚ್ಚೆತ್ತುಕೊಳ್ಳಲು, ನಿಷ್ಠುರವಾಗಿ ಮಾತಾಡಲು, ದೇಶಭಕ್ತಿ, ರಾಷ್ಟ್ರೀಯತೆಗಳ ಹೆಸರಿನಲ್ಲಿ ತಮ್ಮ ಪರಿವಾರ ನಡೆಸಿಕೊಂಡು ಬರುತ್ತಿರುವ ಸಂಕುಚಿತ ಮತ್ತು ಕುಟಿಲ ರಾಜಕಾರಣಕ್ಕೆ ಇನ್ನೆಷ್ಟು ನರಬಲಿಗಳು ಬೇಕೋ ತಿಳಿಯದಾಗಿದೆ.

ಈ ಮಧ್ಯೆ ದೇಶದ ಆರ್ಥಿಕ ಸ್ಥಿತಿ ಅಷ್ಟೇನೂ ಉತ್ತಮವಾಗಿಲ್ಲ ಎಂಬ ವರದಿಗಳು ಪ್ರಕಟವಾಗುತ್ತಿವೆ. ರಫ್ತು ಕುಸಿದಿದೆ. ಇದರಿಂದಾಗಿ ವಿದೇಶಿ ವಿನಿಮಯ ಸಂಗ್ರಹವೂ ಕುಸಿದಿದೆ. ಇದರ ಹಿಂದಿನ ಕಾರಣಗಳೆಂದರೆ, ಬಹುಪಾಲು ಕ್ಷೇತ್ರಗಳಲ್ಲಿ ದೇಶಿ ಉತ್ಪಾದನೆ ಕುಸಿದಿರುವುದು ಎಂದು ಹೇಳಲಾಗುತ್ತಿದೆ. ಈ ವರ್ಷದ ಜಿಡಿಪಿ ಹೆಮ್ಮೆಯಿಂದ ಮುನ್ನೋಡಿದಂತೆ ಶೇ. ಏಳರ ಹತ್ತಿರವೂ ಬರಲಾರದೆಂಬ ಶಂಕೆ ಇದೆ. ಇದಕ್ಕೆ ಕಾರಣ, ಜಾಗತಿಕ ಆರ್ಥಿಕ ಕುಸಿತವಂತೆ;ಮುಖ್ಯವಾಗಿ ಚೀನಾದ ಮಾರುಕಟ್ಟೆ ಕುಸಿತವಂತೆ. ಕೆಲವೇ ತಿಂಗಳುಗಳ ಹಿಂದೆ ಜಗತ್ತಿನ ಎಲ್ಲ ದೇಶಗಳ ಕಣ್ಣುರಿಸುತ್ತಾ ನಾಗಾಲೋಟದಲ್ಲಿ ಸಾಗುತ್ತಿದೆ ಎಂದು ಹೇಳಲಾಗುತ್ತಿದ್ದ ಚೀನಾದ ಆರ್ಥಿಕತೆ ಹೀಗೆ ದಿಢೀರನೆ ಕುಸಿಯಲು ಕಾರಣವೇನು? ಅರ್ಥಶಾಸ್ತ್ರಜ್ಞರ ಪ್ರಕಾರ ಜಗತ್ತಿನ ಆರ್ಥಿಕತೆಯಲ್ಲಿ ಇಂತಹ ಕುಸಿತ ಸಹಜವಂತೆ! ಇವರ ಮಾತೇ ಯಾರಿಗೂ ಅರ್ಥವಾಗುವುದಿಲ್ಲ. ಕಾರಣ ಇವರ ಅರ್ಥಶಾಸ್ತ್ರ ಜನತೆಗಾಗಿ, ದೇಶಕ್ಕಾಗಿ ಇರುವ ಅರ್ಥಶಾಸ್ತ್ರವಲ್ಲ. ಅದು ಅರ್ಥಶಾಸ್ತ್ರಕ್ಕಾಗಿ, ಅರ್ಥಶಾಸ್ತ್ರಜ್ಞರಿಗಾಗಿ ಇರುವ ಅರ್ಥಶಾಸ್ತ್ರ!! ಒಂದು ಸಮಾಜದ ಅಗತ್ಯಗಳು ಮತ್ತು ಪೂರೈಕೆಯ ನಡುವೆ ಒಂದು ಸತಾರ್ಕಿಕ ಸಂಬಂಧವಿದ್ದರೆ ಯಾವ ಆರ್ಥಿಕತೆಯಾದರೂ ಏಕೆ ಕುಸಿಯಬೇಕು? ಸಮಸ್ಯೆ ಇರುವುದು ಇದು ಅಗತ್ಯ-ಪೂರೈಕೆಗಳ ಅರ್ಥಶಾಸ್ತ್ರವಲ್ಲ ಎಂಬುದು. ಆಸೆಗಳ ಉತ್ಪಾದನೆ ಮತ್ತು ಅವುಗಳ ಈಡೇರಿಕೆಯ ಅರ್ಥಶಾಸ್ತ್ರವಿದು. ಇದು ಸರಕಿನ ಅರ್ಥಶಾಸ್ತ್ರ. ಗಾಂಧಿ ಇದನ್ನು ಮಾನವತೆಯ ಅರ್ಥಶಾಸ್ತ್ರವಾಗಿ ಪರಿವರ್ತಿಸಬೇಕೆಂದಿದ್ದರು. ಅದೇ ಶಾಂತಿ-ಸೌಹಾರ್ದಗಳ ಹೊಸ ಜಗತ್ತಿನ ಅಡಿಗಲ್ಲು ಎಂದಿದ್ದರು. ಆದರೆ ಯಾರಿಗೆ ಬೇಕು ಶಾಂತಿ-ಸೌಹಾರ್ದ? ಅದರಲ್ಲಿ ಏನಿದೆ ಮಜಾ?

ಆದರೆ ನಮ್ಮ ಲೇಖಕ ಭೈರಪ್ಪನವರಿಗೆ ಗಾಂಧಿ ಆಡಿದ್ದೆಲ್ಲವೂ, ಮಾಡಿದ್ದೆಲ್ಲವೂ ಕುತಂತ್ರವಾಗಿ ಕಾಣುತ್ತದೆ. ಏಕೆಂದರೆ ಗಾಂಧಿಯವರ ನಡೆನುಡಿಗಳು ಭೈರಪ್ಪನವರ ಬಹುಪಾಲು ಕಾದಂಬರಿಗಳಂತೆ ಅಗ್ಗದ ಮಜಾ ಕೊಡುವುದಿಲ್ಲ. ನೆಹ್ರೂ ಬದಲಾಗಿ ಪಟೇಲರು ಪ್ರಧಾನಿಯಾಗಿದ್ದರೆ ದೇಶ ತಮ್ಮ ಕಾದಂಬರಿಗಳಂತೆಯೇ ಬೆಳೆದು ತಮಗೆ ಮತ್ತು ತಮ್ಮ ಅಭಿಮಾನಿಗಳಿಗೆ ಸಖತ್ ಮಜಾ ನೀಡುತ್ತಿತ್ತು ಎಂಬುದು ಭೈರಪ್ಪನವರ 'ಮನ್ ಕಿ ಬಾತ್' ಎಂದು ಕಾಣುತ್ತದೆ!

-ಸಂಪಾದಕ

ನಮ್ಮ ಮುಂದಿನ ಸಂಚಿಕೆ: ಮಹಿಳಾ ವಿಶೇಷ ಸಂಚಿಕೆ!

ನಿಮ್ಮ ಪತ್ರ

ಪ್ರಿಯ ಸಂಪಾದಕರೇ,

ಜನವರಿ ಸಂಚಿಕೆಯಲ್ಲಿನ 'ಆಧುನಿಕತೆ, ಪ್ರಗತಿಪರತೆ ಮತ್ತು ಸಾಮಾಜಿಕ ನ್ಯಾಯ' ಎಂಬ ನಿಮ್ಮ ಲೇಖನ ಬಹಳ ಬಹಳ ಚೆನ್ನಾಗಿದೆ. ಅಲ್ಲಿ ಸೂಕ್ಷ್ಮವಾದ ತಿಳುವಳಿಕೆ ಮತ್ತು ಧೈರ್ಯಗಳು ಇವೆ. ಕೊಂಚ ಕ್ಲಿಷ್ಟವೂ ಆಗಿದ್ದು ಓದುಗರು ಗಮನವಿಟ್ಟು ಓದಬೇಕು.

ಇನ್ನು ಬಾಲಗಂಗಾಧರ... ಆತನ ಮಾತು ಅಸಹ್ಯ ಹುಟ್ಟಿಸುತ್ತದೆ.

-ಡಾ. ಎಚ್.ಎಸ್. ರಾಘವೇಂದ್ರ ರಾವ್, ಬೆಂಗಳೂರು

ಬಾಲಗಂಗಾಧರರ ಉದ್ಧಟತನದ ಬಗ್ಗೆ ನೀವು ಬರೆದ ವಿಶೇಷ ಟಿಪ್ಪಣಿಗಳು ಮಾರ್ಮಿಕವಾಗಿವೆ. ಆತನ ಈ ಉದ್ಧಟತನ ಕುರಿತ ಆತನ ಇಲ್ಲಿನ ಶಿಷ್ಯರ ಮೌನವೂ ಅಷ್ಟೇ ಮಾರ್ಮಿಕವಾಗಿದೆ.

-ಎಂ.ರಘುನಾಥ, ಶಿವಮೊಗ್ಗ

ಕಳೆದ ಸಂಚಿಕೆಯಲ್ಲಿ 'ಸಮಕಾಲೀನ'ದಲ್ಲಿ ಮೂಡಿಬಂದ ಅತ್ಯಂತ ಜ್ವಲಂತ ಮತ್ತು ಸೂಕ್ಷ್ಮ ವಿಷಯವಾದ ಸಾಮಾಜಿಕ ನ್ಯಾಯ ರಾಜಕಾರಣದ ಬಗ್ಗೆ ಮೂಡಿದ ಚಿಂತನೆಯು ಸಾಕಷ್ಟು ವಸ್ತು ನಿಷ್ಠತೆ ಮತ್ತು ದಿಟ್ಟತೆಯಿಂದ ಕೂಡಿದೆ. ಬಹುಶಃ ಇಲ್ಲಿಯವರೆಗೆ ಎಲ್ಲಿಯೂ ಈ ವಿಷಯದ ಬಗ್ಗೆ ಇಷ್ಟು ಆಳವಾದ ವಿಮರ್ಶೆ ಮತ್ತು ವಿಶ್ಲೇಷಣೆ, ಅಪಾರವಾದ ಸಾಮಾಜಿಕ ಕಳಕಳಿಯಿಂದ ಮೂಡಿಬಂದ ಲೇಖನವನ್ನು ನಾನು ಕಂಡಿಲ್ಲ. ಸಾಮಾಜಿಕ ಒಳಿತಿಗಾಗಿ ನಾವು ಅಳವಡಿಸಿಕೊಂಡ ಅನೇಕ ನೀತಿ ಮತ್ತು ಕ್ರಮಗಳೆಲ್ಲವೂ ಅಡ್ಡ ಹಾದಿ ಹಿಡಿದು ಇನ್ನೂ ಹೆಚ್ಚು ಸಮಸ್ಯಾತ್ಮಕವಾಗುತ್ತಿರುವುದು ದುರಂತ. ಈಗಿರುವ ಸಂದಿಗ್ಧ ಮತ್ತು ಸಂಕೀರ್ಣ ಸ್ಥಿತಿಯಲ್ಲಿ ನನಗನ್ನಿಸುವುದು ಮೀಸಲಾತಿ ನೀತಿಯನ್ನ ಕಾಲ-ಕಾಲಕ್ಕೆ ಪರಿಷ್ಕೃತಗೊಳಿಸಿ ಮುಂದುವರಿಸುವುದು ಮತ್ತು ಸಮಾನತೆಗೆ ಪೂರಕವಾದ ಸಮಾನ ಶಿಕ್ಷಣ ಪದ್ಧತಿ, ಸಂಪತ್ತಿನ ಸಮಾನ ಹಂಚಿಕೆ ಮುಂತಾದ ಲೇಖನದಲ್ಲಿ ಚರ್ಚಿತವಾದ ಕ್ರಮಗಳನ್ನು ಜಾರಿಗೊಳಿಸುವುದು.

ಡಿ.ಎಸ್.ಎನ್. ಅವರ ಲೇಖನವು ಸಾಕಷ್ಟು ಆಳವಾದ ಮತ್ತು ವ್ಯಾಪಕವಾದ ಚಿಂತನೆಯಿಂದ ಕೂಡಿದ್ದು ವಿಷಯದ ಸಂಕೀರ್ಣತೆಯು ಮನದಟ್ಟಾಗುವಂತಿದೆ. ಜೊತೆಗೆ ಇನ್ನಷ್ಟು ಪ್ರಶ್ನೆಗಳನ್ನು ಹುಟ್ಟುಹಾಕುತ್ತಿದೆ. ಉದಾಹರಣೆಗೆ,

೧) ಇಡೀ ಸಮಾಜವನ್ನು ಶ್ರೇಣೀಕರಣದ ನೆಲೆಯಲ್ಲೇ ಕಟ್ಟಿಕೊಂಡು ಬಹುಸಂಖ್ಯಾತರನ್ನು ಜಾತಿಯ ಕೀಳರಿಮೆಯಲ್ಲಿ ಇಟ್ಟು ಸಾಧಿತವಾಗುವಂತಹ ಸ್ಥಿರತೆಯುಳ್ಳ ಸಮಾಜ ನಿಜಕ್ಕೂ ಆಳದಲ್ಲಿ ಆರೋಗ್ಯವಂತವೇ?

೨) ನಿಜಕ್ಕೂ ಜಾತಿಗಳು ತಮ್ಮ ಕೌಶಲ್ಯಗಳಲ್ಲಿ ಹೆಮ್ಮೆ ಪಟ್ಟುಕೊಂಡಿದ್ದರೂ ಸಾಮಾಜಿಕವಾಗಿ ಅವರು ತಾರತಮ್ಯವನ್ನು ಅನುಭವಿಸುತ್ತಾ ಬಂದಿಲ್ಲವೇ?

೩) ಜಾತಿಯ ನಡುವಿನ ಅನುಸಂಧಾನ ಮತ್ತು ಚಲನೆ ಎಷ್ಟು ವ್ಯಾಪಕವಾಗಿ ನಡೆದಿದೆ ಎಂಬುದು ಅನುಮಾನ. ತಾವು ಎತ್ತಿದ ಪ್ರಶ್ನೆಯ ಉತ್ತರಗಳಿಗೆ ಸಾಮಾಜಿಕ ನ್ಯಾಯದ ಫಲಾನುಭವಿಗಳು ಮಾತ್ರ ಏಕೆ ಬಾಧ್ಯಸ್ಥರಾಗುತ್ತಾರೆ? ಇಡೀ ಸಮಾಜವೇ ಬಾಧ್ಯಸ್ಥವಲ್ಲವೇ?

ವಿಷಯದ ಸಮಗ್ರವಾದ ಪುನರಾವಲೋಕನಕ್ಕೆ ಖಂಡಿತವಾಗಿಯೂ ಇದು ಸಮಯ ಎನ್ನುವುದನ್ನು ಒಪ್ಪುವಂತದ್ದೇ. ಜಾತಿ ಮೀಸಲಾತಿ ಬಗ್ಗೆ ನಡೆಸಿದಂತಹ ಸಮೀಕ್ಷೆ ಕ್ರಮ ನಿಜಕ್ಕೂ ಉತ್ತಮ ಪ್ರಯತ್ನ ಹಾಗೂ ಪತ್ರಿಕೆಯ ಆಳವಾದ ಸಾಮಾಜಿಕ ಪ್ರಜಾ ತಾಂತ್ರಿಕ ಬದ್ಧತೆಯನ್ನು ಎತ್ತಿ ಹಿಡಿದಿದೆ.

ಎನ್.ಎಸ್. ಶಂಕರ್‌ರವರ ಲೇಖನವೂ ಸಂಕ್ಷಿಪ್ತವಾಗಿ ಸರಳವಾಗಿ ಹಾಗೂ ಮಾರ್ಮಿಕವಾಗಿ ಮೂಡಿ ಬಂದಿದೆ.

-ಬಿ.ವಿ.ಸುರೇಂದ್ರ, ಧಾರವಾಡ

ಹೊಸ ಮನುಷ್ಯದ ಈಚಿನ ಸಂಚಿಕೆ ಸುಮಾರಷ್ಟು ಮಹತ್ವಪೂರ್ಣ ವಿಚಾರಗಳನ್ನು ಕುರಿತ ವಿಶ್ಲೇಷಣೆಗಳನ್ನು ಒಳಗೊಂಡಿದೆ. ಸಾಮಾಜಿಕ ನ್ಯಾಯ, ಜಾತಿ ವ್ಯವಸ್ಥೆ, ಮೀಸಲಾತಿ ಕುರಿತ ಬರಹಗಳು ಆ ವಿಷಯಗಳ ನಡುವಣ ಸಂಕೀರ್ಣ ಸಂಬಂಧಗಳನ್ನು ಗ್ರಹಿಸುತ್ತವೆ. ನೈತಿಕ ಪ್ರಜ್ಞೆಯುಳ್ಳ ಯಾರೂ ಮೀಸಲಾತಿಯನ್ನು ವಿರೋಧಿಸುವುದಿಲ್ಲ ಎನ್ನುವುದು ಬಹು ಮಟ್ಟಿಗೆ ನಿಜವಾದರೂ, ಪ್ರಸ್ತುತದಲ್ಲಿ ಅನುಸರಿಸುತ್ತಿರುವ ಮೀಸಲಾತಿ ವ್ಯವಸ್ಥೆಯ ನ್ಯೂನತೆಗಳನ್ನು ಸರಿಪಡಿಸುವ ಅವಶ್ಯಕತೆಯನ್ನು ಒಪ್ಪಿಕೊಳ್ಳುವುದು ಸಹ ಅನಿವಾರ್ಯ. ಒಟ್ಟಿನಲ್ಲಿ ಚಿಂತಿಸಲು ಯೋಗ್ಯವಾದ ಹಲವು ವಿಚಾರಗಳನ್ನು ಈ ಸಂಚಿಕೆ ತೆರೆದಿಟ್ಟಿದೆ.

ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಪರ್ಯಾಯ ವ್ಯವಸ್ಥೆ ಸೃಷ್ಟಿಸುವ ನಿಟ್ಟಿನಲ್ಲಿ ಮಾಡಬೇಕಾದ ಪ್ರಯತ್ನಗಳನ್ನು ಕುರಿತು ಬರೆಯುತ್ತಾ, ಪತ್ರಿಕೆ ಸದ್ಯಕ್ಕೆ ವಿಚಾರಗಳ ಮಟ್ಟದಲ್ಲಾದರೂ ತನ್ನ ಮಿತಿಯಲ್ಲಿ ಅದನ್ನು ಮಾಡುತ್ತಿದೆ (ಸಂಪಾದಕೀಯ) ಎಂಬ ಮಾತನ್ನು ಹೇಳಿದ್ದೀರಿ. ಅದೇನೂ ಕಡಿಮೆ ಕೆಲಸವಲ್ಲ. ಈ ಸಂದರ್ಭದಲ್ಲಿ ಎಲೆನಾರ್ ರೂಸ್‌ವೆಲ್ಟ್ ಹೇಳಿದರೆಂದು ಉದ್ಧರಿಸುವ ಮಾತೊಂದು ನೆನಪಿಗೆ ಬರುತ್ತದೆ: 'ಕತ್ತಲೆ ಎಂದು ಗೊಣಗಾಡುವ ಬದಲು ಒಂದು ಹಣತೆಯನ್ನಾದರೂ ಹಚ್ಚೋಣ.' ನೀವು ಮಾಡುತ್ತಿರುವುದು ಈ ಹಣತೆ ಹಚ್ಚುವ ಕೆಲಸವನ್ನೇ!

-ಡಾ. ಎಚ್.ಎಸ್. ಈಶ್ವರ್, ಬೆಂಗಳೂರು

ಸಾಮಾಜಿಕ ನ್ಯಾಯ ಕುರಿತ ಬರಹಗಳು ತುಂಬ ಚೆನ್ನಾಗಿವೆ. ಮೀಸಲಾತಿಯ ಕುರಿತು ಪತ್ರಿಕೆ ಒಂದು ಆರೋಗ್ಯಕರ ಚರ್ಚೆಯನ್ನು ಹುಟ್ಟು ಹಾಕಿರುವುದು ಸ್ವಾಗತಾರ್ಹ. ಚರ್ಚೆಯ ಉದ್ದೇಶ ಮೀಸಲಾತಿಯ ಸಮರ್ಪಕ ಅನುಷ್ಠಾನಕ್ಕೆ ಒತ್ತಾಯವೇ ಹೊರತು ನಿಲ್ಲಿಸಬೇಕೆಂಬುದಲ್ಲ ಎಂಬುದು ಸ್ಪಷ್ಟ. ಮುಖ್ಯವಾಗಿ ಮೀಸಲಾತಿ ಸೌಲಭ್ಯವಂಚಿತ ಹಿಂದುಳಿದ ಸಮುದಾಯಗಳಿಗೆ ನ್ಯಾಯ ದೊರಕುವಂತಾಗಬೇಕು. ಇದರ ಜೊತೆಗೆ ಒಂದು ನಿರ್ದಿಷ್ಟ ಕಾಲ ಮಿತಿಯಲ್ಲಿ ಮೀಸಲಾತಿ ಕೊನೆಗೊಳ್ಳಬೇಕೆಂಬ ಆಶಯವನ್ನು ಈ ಚರ್ಚೆ ಒಳಗೊಂಡಿದ್ದರೆ ತಪ್ಪೇನಿಲ್ಲ. ಅಂಬೇಡ್ಕರರ ಆಶಯವೂ ಇದೇ ಆಗಿತ್ತು.

ಮೀಸಲಾತಿ ಮರುಪರಿಶೀಲನೆಯಂಥ ವಿಷಯಗಳಲ್ಲಿ ನಿರ್ಧಾರ ತೆಗೆದುಕೊಳ್ಳಲು ರಾಜಕೀಯ ಪಕ್ಷಗಳಿಗೆ ಗಡಸುತನ ಬೇಕು. ಓಟ್

(ಬನೇ ಪುಟಕ್ಕೆ

ನಮ್ಮ ಸಮಾಜವಾದಿಗಳು | ಸಂಪೂರ್ಣ ಕ್ರಾಂತಿಗೆ ಹಂಬಲಿಸಿದ ಜಯಪ್ರಕಾಶ್ ನಾರಾಯಣ



ಕಳೆದ ಶತಮಾನದ ಎಪ್ಪತ್ತರ ದಶಕದ ಮೊದಲರ್ಧ ನಿರುದ್ಯೋಗ, ಬೆಲೆ ಏರಿಕೆ ಮತ್ತು ಭ್ರಷ್ಟಾಚಾರಗಳಿಂದ ರೋಸಿ ಹೋದ ಯುವಜನತೆ ವ್ಯವಸ್ಥೆಯ ವಿರುದ್ಧ ಬಂಡೆದ್ದಾಗ ಅದಕ್ಕೊಂದು ದಿಕ್ಕು ದೆಸೆ ನೀಡಿ ಆ ಬಂಡಾಯವನ್ನು ಒಂದು 'ಸಂಪೂರ್ಣ ಕ್ರಾಂತಿ' ಎಂಬ ರಚನಾತ್ಮಕ ಚಳುವಳಿಯಾಗಿ ರೂಪಿಸಿದವರು ಜೆಪಿ ಎಂದೇ ಪ್ರಸಿದ್ಧರಾಗಿರುವ ಜಯಪ್ರಕಾಶ್ ನಾರಾಯಣರು. ಆ ಚಳುವಳಿಯನ್ನು ಆಗ ದೇಶದ ಪ್ರಧಾನಿಯಾಗಿದ್ದ ಇಂದಿರಾಗಾಂಧಿಯವರ ನೇತೃತ್ವದ ಕಾಂಗ್ರೆಸ್ ಸರ್ಕಾರ ದಮನಮಾಡಲು ತುರ್ತು ಪರಿಸ್ಥಿತಿ ಘೋಷಿಸಿ ಸರ್ವಾಧಿಕಾರಿಯಾದಾಗ ಅದರ ವಿರುದ್ಧ ರಾಷ್ಟ್ರದ ಪ್ರಮುಖ ವಿರೋಧ ಪಕ್ಷಗಳನ್ನು ಒಗ್ಗೂಡಿಸಿ ಕೇಂದ್ರದಲ್ಲಿ ಮೊದಲ ಕಾಂಗ್ರೆಸ್ಸೇತರ ಸರ್ಕಾರ ಆಡಳಿತಕ್ಕೆ ಬರಲು ಕಾರಣರಾದವರೂ ತೊರೆದು ಭೂದಾನ-ಸರ್ವೋದಯ ಚಳುವಳಿಯನ್ನು ಸೇರಿ ವಿನೋಬಾರ ಶಿಷ್ಯರಾಗಿದ್ದರಾದರೂ, ಸ್ವಾತಂತ್ರ್ಯ ಹೋರಾಟದ ವೀರ ಸೇನಾನಿಯೊಬ್ಬರಾಗಿದ್ದ ಅವರು ದೇಶದ ಹಿತದೃಷ್ಟಿಯಿಂದ ಮತ್ತೆ ಪಕ್ಷ ರಾಜಕಾರಣದತ್ತ ಧಾವಿಸಿ ಜನತಾ ಪಕ್ಷವೆಂಬ ಹೊಸ ರಾಜಕೀಯ ಪಕ್ಷವನ್ನು ರೂಪಿಸಿ ಅದಕ್ಕೆ ಗಾಂಧಿ ಸಮಾಜವಾದದ ದೀಕ್ಷೆ ನೀಡುವ ಮೂಲಕ ಸಮಾಜವಾದವನ್ನು ಕುರಿತ ತಮ್ಮ ಬದ್ಧತೆಯನ್ನು ಪುನರುಚ್ಚರಿಸಿದರು.

ಬಿಹಾರದ ಉತ್ತರ ಭಾಗದ ಪುಟ್ಟಗ್ರಾಮ ಸಿತಾಬ್ದಿಯಾರದಲ್ಲಿ ಹರ್ಷದಾಯಾಳ್‌ಬಾಬು ಮತ್ತು ಪೂಲ್‌ರಾಣಿ ದಂಪತಿಗಳ ಮಗುವಾಗಿ ೧೯೦೨ ಆಕ್ಟೋಬರ್ ೧೧ ರಂದು ಜನಿಸಿದ ಜಯಪ್ರಕಾಶ್ ನಾರಾಯಣರು ಪಟ್ನಾದಲ್ಲಿನ ತಮ್ಮ ಪ್ರೌಢ ಶಾಲಾ ಶಿಕ್ಷಣದ ಸಂದರ್ಭದಲ್ಲೇ ಗಾಂಧೀಜಿ ಮತ್ತಿತರ ರಾಷ್ಟ್ರೀಯ ನಾಯಕರ ಭಾಷಣಗಳನ್ನು ಕೇಳಿ ಸ್ವಾತಂತ್ರ್ಯ ಹೋರಾಟದ ಪ್ರಭಾವಕ್ಕೆ ಸಿಲುಕಿದರು. ತಮ್ಮ ಊರಿನ ಆಸುಪಾಸಿನಲ್ಲೇ ನಡೆದ ಚಂಪಾರಣ್ಯ ಸತ್ಯಾಗ್ರಹ ಅವರನ್ನು ಪೂರ್ತಿಯಾಗಿ ಯುವ ಸ್ವಾತಂತ್ರ್ಯಯೋಧರನ್ನಾಗಿ ಪರಿವರ್ತಿಸಿತು. ಜಲಿಯನ್ ವಾಲಾಬಾಗ್ ಹತ್ಯಾಕಾಂಡದ ಪರಿಣಾಮವಾಗಿ ಗಾಂಧೀಜಿ ಕರೆ ನೀಡಿದ್ದ ನಾಗರೀಕ ಅಸಹಕಾರ ಚಳುವಳಿ, ನಂತರದ ಸ್ವದೇಶಿ ಸತ್ಯಾಗ್ರಹಗಳು ಅವರ ಶಿಕ್ಷಣವನ್ನು ಅಸ್ತವ್ಯಸ್ತಗೊಳಿಸಿತಾದರೂ, ಇಂಟರ್ ಪರೀಕ್ಷೆಯ ನಂತರ ಅವರ ಹಿರಿಯರ ಸಲಹೆಯ ಮೇರೆಗೆ ಮುಂದಿನ ವಿದ್ಯಾಭ್ಯಾಸಕ್ಕೆ ದುಡಿಮೆಯ ಮೂಲಕವೇ ಶಿಕ್ಷಣ ಮುಂದುವರಿಸಲು ೧೯೨೨ ಅಕ್ಟೋಬರ್ ೮ ರಂದು ಅಮೇರಿಕಾಕ್ಕೆ ಪ್ರಯಾಣ ಬೆಳೆಸುತ್ತಾರೆ. ಆ ಹೊತ್ತಿಗೆ ಅವರಿಗೆ ಚಂಪಾರಣ್ಯ ಸತ್ಯಾಗ್ರಹದ ಸಂಘಟಕರಲ್ಲೊಬ್ಬರಾಗಿದ್ದ ಬ್ರಿಜ್‌ಕಿಶೋರ್‌ಬಾಬು ಅವರ ಮಗಳು ಪ್ರಭಾವತಿ ದೇವಿಯವರೊಂದಿಗೆ ವಿವಾಹವೂ ಆಗಿರುತ್ತದೆ.

ಅಮೆರಿಕೆಗೆ ಹೋಗಿ ಅಲ್ಲಿ ದುಡಿದು ಓದುವ ಸಂದರ್ಭದಲ್ಲಿ ಪ್ರಖರ ಮಾರ್ಕ್ಸ್‌ವಾದಿಯಾಗಿ ಮಾರ್ಪಟ್ಟು ೧೯೨೯ರಲ್ಲಿ ಸ್ನಾತಕೋತ್ತರ ಪದವೀಧರರಾಗಿ ಭಾರತಕ್ಕೆ ವಾಪಸಾದ ಜಯಪ್ರಕಾಶರು ಕಮ್ಯೂನಿಸ್ಟ್ ಪಕ್ಷ ಸೇರದೆ ಗಾಂಧಿ ಕುರಿತ ಗೌರವದಿಂದಾಗಿ ಕಾಂಗ್ರೆಸ್‌ನೊಳಗೆ ಪ್ರಗತಿಪರ ರಾಜಕಾರಣದಲ್ಲಿ ತೊಡಗಿ ೧೯೩೪ರಲ್ಲಿ ಕಾಂಗ್ರೆಸ್ ಸಮಾಜವಾದಿ ಪಕ್ಷವನ್ನು ಸ್ಥಾಪಿಸಿದ್ದು ಈಗ ಇತಿಹಾಸ. ಕಾಂಗ್ರೆಸ್ ಚಳುವಳಿಗಳಲ್ಲಿ ಭಾಗವಹಿಸುತ್ತಾ ಕಾಂಗ್ರೆಸ್ ಸಮಾಜವಾದಿ ಪಕ್ಷವನ್ನು ಕಟ್ಟತೊಡಗಿರುವಾಗಲೇ ಹಲವು ಬಾರಿ ದೀರ್ಘಕಾಲಿಕ ಮತ್ತು ಕ್ರೂರ ದೈಹಿಕ ಶಿಕ್ಷೆಗಳ ಸೆರೆಮನೆವಾಸಗಳಿಗೆ ತುತ್ತಾದ ಜೆಪಿ, ೧೯೪೨ರಲ್ಲಿ ಗಾಂಧೀಜಿಯ 'ಭಾರತಬಿಟ್ಟು ತೊಲಗಿ' ಚಳುವಳಿಯ 'ಮಾಡು ಇಲ್ಲವೆ ಮಡಿ' ಎಂಬ ಘೋಷಣೆಯ ಸುದ್ದಿ ಕೇಳಿ ಆಗ ತಾವು ಬಂಧಿತರಾಗಿದ್ದ ಹಜಾರಿಬಾಗ್ ಸೆರೆಮನೆಯ ಕೋಟೆಯಿಂದ ತಪ್ಪಿಸಿಕೊಂಡು ಬಂದು ತಮ್ಮ ಸಮಾಜವಾದಿ ಮಿತ್ರರ ಜೊತೆಗೂಡಿ ಬ್ರಿಟಿಷ್ ವಿರೋಧಿ ಭೂಗತ ಚಟುವಟಿಕೆಗಳಲ್ಲಿ ತೊಡಗಿದ ಮತ್ತು ಮತ್ತೆ ಸೆರೆಯಾಗಿ ಲಾಹೋರ್ ಕೋಟೆಯ ಸೆರೆಮನೆಯಲ್ಲಿ ಅನುಭವಿಸಬೇಕಾಗಿ ಬಂದ ಚಿತ್ರಹಿಂಸೆಯ ಕಥಾನಕಗಳು ಅವರನ್ನು ರಾಷ್ಟ್ರದ 'ಯುವ ಕಣ್ಮಣಿ'ಯನ್ನಾಗಿ ಮಾಡಿದವು.

ಎರಡನೇ ಮಹಾಯುದ್ಧ ಕೊನೆಗೊಂಡು ಬ್ರಿಟಿಷರು ಭಾರತಕ್ಕೆ ಸ್ವಾತಂತ್ರ್ಯ ನೀಡುವ ಪ್ರಕ್ರಿಯೆಗಳು ಆರಂಭವಾದಾಗ ಅದರ ಭಾಗವಾಗಿ ಸೆರೆಮನೆಯಿಂದ ಬಿಡುಗಡೆಯಾದ ಜೆಪಿ, ಸೆರೆಮನೆಯಲ್ಲಿ ತಮ್ಮ ಆದರ್ಶ ರಾಜ್ಯವಾಗಿದ್ದ ಸೋವಿಯತ್ ಯೂನಿಯನ್‌ನೊಳಗಿನ ಸರ್ವಾಧಿಕಾರಿ ವಿದ್ಯಮಾನಗಳನ್ನು ಕುರಿತ ಪುಸ್ತಕಗಳನ್ನು ಓದಿ ಮತ್ತು ಆ ಹೊತ್ತಿಗೆ ಆ ದೇಶದ ಪ್ರವಾಸ ಮಾಡಿ ಬಂದಿದ್ದ ಮಿನೂ ಮಸಾನಿಯವರಂತಹ ತಮ್ಮ ಗೆಳೆಯರಿಂದ ಆ ಬಗ್ಗೆ ಕೇಳಿ ಮಾರ್ಕ್ಸ್‌ವಾದದ ಬಗ್ಗೆ ಪುನರಾಲೋಚನೆ ಆರಂಭಿಸಿದ್ದರು. ಗಾಂಧಿ ಮಾರ್ಗವನ್ನು ಕುರಿತ ಅವರ ಭಿನ್ನಮತ ಕ್ರಮೇಣ ಕರಗತೊಡಗಿತ್ತು. ಇತರ ಸಮಾಜವಾದಿಗಳಂತೆಯೇ ಭಾರತ ಸಂಪೂರ್ಣ ಸ್ವಾತಂತ್ರ್ಯಕ್ಕೆ ಇನ್ನೂ ಸಿದ್ಧವಾಗಿಲ್ಲ ಎಂದು ಭಾವಿಸಿದ್ದ ಜೆಪಿ ರಾಷ್ಟ್ರ ವಿಭಜನೆಯ ರಾಜಕಾರಣ ತಮ್ಮ ಈ ಭಾವನೆಯ ಪ್ರತೀಕವೆಂದು ನಂಬಿದ್ದರು. ಹಾಗಾಗಿಯೇ ಅವರು ಗಾಂಧೀಜಿಯ ಆಗ್ರಹದ ಹೊರತಾಗಿಯೂ ಕಾಂಗ್ರೆಸ್ ಸಮಾಜವಾದಿ ಪಕ್ಷವನ್ನು ಮಧ್ಯಂತರ ಸರ್ಕಾರ ಮತ್ತು ಸಂವಿಧಾನ ಸಭೆಯ ರಚನೆಯಲ್ಲಿ ಪಾಲ್ಗೊಳ್ಳದಂತೆ ತಡೆದರು. ಆದರೆ ಈ ಮಧ್ಯೆ ಗಾಂಧಿ ಹತ್ಯೆಯಾದಾಗ ಅವರು ಅನಾಥ ಭಾವನೆಗೆ ಒಳಗಾದರು. ನಂತರದಲ್ಲೇ ಕಾಂಗ್ರೆಸ್ ಸಮಾಜವಾದಿಗಳು ಕಾಂಗ್ರೆಸ್‌ನಿಂದ ಹೊರದೂಡಲ್ಪಡುವ ಸಂದರ್ಭ ಬಂದಾಗ ಧೃತಿಗೆಡದ ಜೆಪಿ ಸಮಾಜವಾದಿ ಪಕ್ಷವನ್ನು ಸ್ವತಂತ್ರವಾಗಿ ಕಟ್ಟುವ ಕೆಲಸದಲ್ಲಿ ತೊಡಗಿದರು.

೧೯೫೨ರ ಮೊದಲ ಮಹಾಚುನಾವಣೆಯಲ್ಲಿ ಪಕ್ಷದ ದೊಡ್ಡ ಸೋಲು ಅದರ ನೇತೃತ್ವ ವಹಿಸಿದ್ದ ಜೆಪಿ ಮತ್ತು ಅವರ ಗೆಳೆಯರನ್ನು ಧೃತಿಗೆಡಿಸಿತೆಂದೇ ಹೇಳಬೇಕು. ನಂತರ ಪಕ್ಷದಲ್ಲಿ ಉಂಟಾದ ಹೊಸ ಬೆಳವಣಿಗೆಗಳು ಮತ್ತು ಹೆಚ್ಚಿದ ತಾತ್ವಿಕ ಮತ್ತು ವೈಯಕ್ತಿಕ ಭಿನ್ನಾಭಿಪ್ರಾಯಗಳ ಮಧ್ಯೆ ಜೆಪಿ ಮಾರ್ಕ್ಸ್‌ವಾದಕ್ಕೆ ಆಧಾರವಾಗಿರುವ 'ದ್ವಂದ್ವಾತ್ಮಕ ಭೌತವಾದದಲ್ಲಿ ಮನುಷ್ಯ ಒಳ್ಳೆಯವನಾಗಲು ಯಾವ ಪ್ರೇರಣೆಯೂ ಇಲ್ಲ' ಎಂದು ಹೇಳಿ ಗಾಂಧಿವಾದದ ದೀಕ್ಷೆ ಪಡೆದರು. ಈ ಮಧ್ಯೆ ಅವರ ಪ್ರಿಯ ಮಿತ್ರ ಡಾ. ರಾಮಮನೋಹರ ಲೋಹಿಯಾ ಪಕ್ಷ ಬಿಟ್ಟು ತಮ್ಮದೇ ಸಮಾಜವಾದಿ ಪಕ್ಷ ಸ್ಥಾಪಿಸಿಕೊಂಡರು. ಇದರ ಮುಂದಿನ ಪರಿಣಾಮವಾಗಿ ಅವರು ನಿಧಾನವಾಗಿ ಪಕ್ಷ ರಾಜಕಾರಣವನ್ನೇ ತೊರೆದು ೧೯೫೪ರ ಹೊತ್ತಿಗೆ ವಿನೋಬಾ ಭಾವೆಯವರ ಭೂದಾನ ಚಳುವಳಿಗೆ ಸೇರಿದರು.

ಇಲ್ಲಿಂದ ಜೆಪಿಯವರ ಬದುಕಿನಲ್ಲಿ ಹೊಸ ಘಟ್ಟವೇ ಆರಂಭವಾಯಿತೆಂದು ಹೇಳಬೇಕು. ವಿನೋಬಾರೊಂದಿಗೆ ಅವರು ರಾಷ್ಟ್ರಾದ್ಯಂತ ಪ್ರವಾಸ ಮಾಡಿ ಭೂ ಒಡೆಯರಿಂದ ಸಾವಿರಾರು ಎಕರೆ ಭೂಮಿಯನ್ನು ದಾನವಾಗಿ ಪಡೆದು ಭೂರಹಿತರಿಗೆ ಹಂಚುವ ಕಾರ್ಯಕ್ರಮಗಳಲ್ಲಿ ತೊಡಗಿಕೊಂಡರು. ವಿನೋಬಾರ 'ಸರ್ವೋದಯ' ಚಳುವಳಿಯ ನೇತಾರರಾಗಿ ಬಿಹಾರದ ಸಖೊದೇವ್ರಾ ಎಂಬಲ್ಲಿ ಆಶ್ರಮವೊಂದನ್ನು ಸ್ಥಾಪಿಸಿ ಗಾಂಧಿಯವರ 'ಗ್ರಾಮ ಸ್ವರಾಜ್ಯ'ದ ಕನಸನ್ನು ನನಸು ಮಾಡುವಂತಹ ಗ್ರಾಮ ಕೈಗಾರಿಕೆ, ಪಂಚಾಯತ್ ರಾಜ್ ಸ್ಥಾಪನೆಯ ಪ್ರಯತ್ನ-ಪ್ರಯೋಗಗಳಲ್ಲಿ ತೊಡಗಿಕೊಂಡರು. ಬಿಹಾರದಲ್ಲಿ ಭೀಕರ ಕ್ಷಾಮ ತಲೆದೋರಿದಾಗ ಅತ್ಯಂತ ವ್ಯವಸ್ಥಿತ ಪರಿಹಾರ ಕಾರ್ಯಕ್ರಮಗಳನ್ನು ಸಂಘಟಿಸಿ ಬಿಹಾರದ ಜನರ ಮನಗೆದ್ದರು. ಹಾಗೇ ಅಂತಾರಾಷ್ಟ್ರೀಯ ವಲಯದಲ್ಲೂ ಅನೇಕ ವಿವಾದ-ಬಿಕ್ಕಟ್ಟುಗಳ ಪರಿಹಾರ ಪ್ರಯತ್ನಗಳಲ್ಲಿ ಪಾತ್ರ ವಹಿಸಿ, ಅದಕ್ಕಾಗಿ

(೫ನೇ ಪುಟಕ್ಕೆ

ಪ್ರೊ. ಬಿ.ಕೃಷ್ಣಪ್ಪ ನೆನಪಿನ ಮಾಲೆ-೪೦

–ಇಂದಿರಾ ಬಿ. ಕೃಷ್ಣಪ್ಪ



ಸಮೂಹ ನೃತ್ಯವೊಂದರಲ್ಲಿ ಕೃಷ್ಣಪ್ಪನವರ ಮಕ್ಕಳು

ಮಕ್ಕಳ ಆಟ–ಪಾಠಗಳು

ಕಾಗದ ನಗರದ ಮಹಿಳಾ ಮಂಡಳಿಯ ಏಕಪಾತ್ರಾಭಿನಯಕ್ಕೆ ನಮ್ಮ ಕಿರು ಮಗಳು ಸೀಮಾ ಹೆಸರು ಕೊಟ್ಟು ಬಂದಿದ್ದಳು. ಕುವೆಂಪುರವರ 'ರಕ್ತಾಕ್ಷಿ' ನಾಟಕದ ಅಂಕ–೫ರ ದೃಶ್ಯ–೨ರಲ್ಲಿನ ಹೊನ್ನಯ್ಯ – ರುದ್ರಾಂಬೆಯರ ನಡುವಿನ ಸಂಭಾಷಣೆಯನ್ನು ಅವಳಿಗೆ ನಾನು ಅಭ್ಯಾಸ ಮಾಡಿಸಿದ್ದೆ. ಅಂತಿಮ ಸಿದ್ಧತೆಯಾಗಿ ಅಪ್ಪಾಜಿ ಎದುರಿಗೆ ಮಾಡು ಅಂತ ಅವಳಿಗೆ ಹೇಳಿದ್ದೆ. ರುದ್ರಾಂಬೆಯ ಮಾತುಗಳು – "ಕಾಳಕೂಟವ ಕುಡಿದ ಶಿವನೇ...". ಎಂದು ಆರಂಭವಾಗಿ, "ಜನ್ಮಜನ್ಮಾಂತರದಿ ಬಸವಯ್ಯನೇ ನನಗೆ ಇನಿಯನಾಗುವ, ಹೊನ್ನಯ್ಯ ನನ್ನಣ್ಣನಾಗೈ ತರುವ ಹರಕೆಯಿರಲಿ.. ನನಗೆ ನೆಚ್ಚುಗೆಡದಿರಲಿ" ಎಂಬ ಮಾತುಗಳು ನೋವು – ಹತಾಶೆ – ದುಃಖದಿಂದ ವಿಲಾಪಿಸುವುದನ್ನು ಸೀಮಾ ಕೃಷ್ಣಪ್ಪನ ಮುಂದೆ ಅಭಿನಯಿಸಲಾರಂಭಿಸಿದಳು. "ಏನಾದ್ರೂ ತಪ್ಪುಗಳಿದ್ದರೆ ಸರಿ ಮಾಡಿಸಿ, ನಾನು ಅಡಿಗೆ ಮನೆಯ ಕೆಲಸ ಮುಗಿಸಿ, ಐದು ನಿಮಿಷದಲ್ಲಿ ಬರ್ತೀನಿ" ಅಂತ ಹೋಗಿದ್ದೆ. ನಾನು ಹೋಗಿ ಬರುವಷ್ಟರಲ್ಲಿ "ದುಃಖ ಪಡದಿರು ತಂಗಿ ನಾನು ಸಂತೋಷದಲಿ ಸಾಯುವೆನು" ಎಂಬ ಹೊನ್ನಯ್ಯನ ಪಾತ್ರದ ಮಾತುಗಳು, ಕೃಷ್ಣಪ್ಪನ ಧ್ವನಿಯಲ್ಲಿ ಎದೆ ಇರಿಯುವಂತೆ ಕೇಳಿಸಿತು. ಇದೇನಪ್ಪ, ಅಂತ ನಾನು ಪಾತ್ರೆಯೊಂದಿಗೆ ಓಡಿಬಂದಿದ್ದೆ. ಕೃಷ್ಣಪ್ಪನೇ ಹೊನ್ನಯ್ಯನಾಗಿದ್ದನ್ನು ಕಂಡೆ. ಅವರು, ಹೊನ್ನಯ್ಯ ಮತ್ತು ರುದ್ರಾಂಬೆಯ ಸಂಭಾಷಣೆಯ ಸಂದರ್ಭವನ್ನು ವಿವರಿಸುತ್ತಾ, ಎರಡೂ ಪಾತ್ರಗಳಿಗೆ ಜೀವ ತುಂಬಿದ ಅಭಿನಯ ಹೇಳಿಕೊಡುತ್ತಿದ್ದರು!.

ಈ ವಿಷಯ ಮರುದಿನ ಮನೆಗೆ ಬಂದ ಮುನೀರ್ ಭಾಷರವರಲ್ಲಿ ಹೇಳಿದಾಗ, "ಇದೇನು ಮಹಾ? ನಾವು ಹಿಂದೆ 'ತರುಣ ಕಲಾವಿದರು' ಅಂತ ನಾಟಕ ತಂಡ ಕಟ್ಟಿದ್ದೆವು. ಕೃಷ್ಣಪ್ಪನವರೇ ಅಧ್ಯಕ್ಷರು. ಮೂರು ಮಂದಿ ನಿರ್ದೇಶಕರಲ್ಲಿ ನಾನು ಒಬ್ಬ. ಐದು ಮಂದಿ ಸಲಹೆಗಾರರು, ಇಬ್ಬರು ಕಾರ್ಯದರ್ಶಿಗಳೂ ಇದ್ದರು. ಎಲ್ಲರೂ ನಾಟಕ ಆಡ್ತಿದ್ವಿ, ಸಾಗರ, ದಾವಣಗೆರೆ, ಮೈಸೂರು, ಶಿವಮೊಗ್ಗ, ಹೊಸನಗರ, ಭಾಳ ಕಡೆ ನಾಟಕ ಆಡಿ, ಬಹುಮಾನಗಳನ್ನು ಪಡೆದಿದ್ವಿ, ಇದೇ 'ರಕ್ತಾಕ್ಷಿ' ನಾಟಕದ ಪ್ರಥಮ ಪ್ರದರ್ಶನದ ದಿನ ನಡೆದ ಒಂದು ಪ್ರಸಂಗ ಹೇಳ್ತೀನಿ ಕೇಳಿ. ಗ್ರೀನ್ ರೂಂ ಒಳಗೆ ಕೃಷ್ಣಪ್ಪನವರು ವೇಷಭೂಷಣಗಳೊಂದಿಗೆ ತಯಾರಾಗಿ, ಗೋಡೆ ಕಡೆ ತಿರುಗಿಕೊಂಡು, "ದುಃಖ ಪಡದಿರು ತಂಗಿ, ನಾನು ಸಂತೋಷದಿಂದ ಸಾಯುವೆನು..." ಎಂದು ನಿಜವಾಗಿ ಗಳಗಳ ಅಳುತ್ತ, ಅಭಿನಯಿಸ್ತಾ ಇದ್ದಾರೆ. ನನ್ನದು ರುದ್ರಾಂಬೆಯ ಪಾತ್ರ. ಬ್ಲೌಸ್ ಬ್ಯಾಕ್ ಬಟನ್, ಎಷ್ಟು ಎಳಕೊಂಡ್ರು ಹಾಕ್ಕೋಳಕ್ಕೆ ಆಗ್ತಾ ಇಲ್ಲ. 'ಸಾರ್ ಸ್ವಲ್ಪ ಹಾಕಿ' ಅಂತ ನಾನು ಹೋದ್ರೆ, ಇವರು ಅಳ್ತಾ ಇದ್ದಾರೆ. "ತಗೊಳ್ಳಿ ಕರ್ಚಿಫ್, ಹಾಗೆ ಸ್ವಲ್ಪ ಬಟನ್ ಹಾಕಿ, ನೀವು ಇಲ್ಲೇ ಎಲ್ಲಾ ಕಣ್ಣೀರು ಖರ್ಚು ಮಾಡಿಬಿಟ್ರೆ, ಸ್ಟೇಜ್ ಮೇಲೆ ಗ್ಲಿಸರಿನ್ ಹಚ್ಚಬೇಕಾಗುತ್ತೆ" ಅಂತ ಹೇಳ್ದೆ" ಅಂತ ವಿವರಿಸಿದ್ದರು. "ಲೋ, ನೀನು ಮೆರುಗು ಕೊಟ್ಟು ಹೇಳ್ಬೇಡ. ಇವಳು, ಅದ್ನೇ ಹಿಡಕೊಂಡು ಲೇವಡಿ ಮಾಡ್ತಿರುತ್ತಾಳೆ" ಎಂದು ನನ್ನ ಕಡೆ ನೋಡಿದರು. ಮುನೀರ್, ಕೃಷ್ಣಪ್ಪನವರ ಗ್ರೀನ್‌ರೂಂ ಪಾತ್ರವನ್ನು ಆಗಾಗ್ಗೆ ಅಭಿನಯಿಸಿ ತೋರಿಸುತ್ತಲೇ ಇರುತ್ತಾರೆ. ಅವರ ನಾಟಕ ತಂಡದ ಲೆಟರ್‌ಹೆಡ್, ಬಹುಮಾನಗಳ ಸರ್ಟಿಫಿಕೇಟ್‌ಗಳು ದಾಖಲೆಗಾಗಿ ನನ್ನಲ್ಲಿವೆ.

ಅಪ್ಪ ಮಕ್ಕಳ ಎಣ್ಣೆ ಸ್ನಾನದಾಟ

ಕೃಷ್ಣಪ್ಪನವರಿಗೆ, ಮಕ್ಕಳಿಗೆ ಎಣ್ಣೆ ಹಚ್ಚಿ, ನೀವಿ, ಬಿಸಿನೀರು ಕಾಯಿಸಿ, ಸ್ನಾನ ಮಾಡಿಸುವುದು ಬಹು ಇಷ್ಟವಾದ ಕೆಲಸ. ಭಾನುವಾರ ಅಥವಾ ಇತರೆ ರಜೆ ದಿನಗಳಲ್ಲಿ, ಬೆಳಿಗ್ಗೆ ಬೇಗ ಎದ್ದು, ಬಚ್ಚಲಿನ ಸೌದೆ ಒಲೆಗೆ ಉರಿಹಾಕಿ ಬಿಡುತ್ತಿದ್ದರು. ನಿತ್ಯ ಕ್ರಿಯೆಗಳನ್ನು ಮುಗಿಸಿಕೊಂಡು, ಎಲ್ಲರನ್ನು ಏಳಿಸಲಿಕ್ಕೆ ಶುರುಹಚ್ಚಿ ಬಿಡುವರು. ಶಾಲು – ಸೀಮಾ ಇಬ್ಬರೂ ಗಲಾಟೆ ಮಾಡಿಕೊಳ್ಳುತ್ತಲೇ ಏಳುವರು. ಮನೆ ಹಿಂದಿನ ಅಂಗಳದಲ್ಲಿ ಬಚ್ಚಲಲ್ಲಿ ಕೊಬ್ಬರಿ ಎಣ್ಣೆ ಇಟ್ಟುಕೊಂಡು ಕುಳಿತು, ತಾವು ತಲೆ, ಮೈ–ಕೈಕಾಲುಗಳಿಗೆ ಎಣ್ಣೆ ಹಚ್ಚಿಕೊಂಡು ನಂತರ ಮಕ್ಕಳನ್ನು ಕರೆಯಲಾರಂಭಿಸುವರು. ಅವರು ಬರಲೊಲ್ಲರು, ಇವರು ಬಿಡಲೊಲ್ಲರು. ಮಕ್ಕಳು ತಪ್ಪಿಸಿಕೊಂಡು ಓಡಿ ಬಿಡುತ್ತಿದ್ದರು. ಹಿಂಬಾಗಿಲು – ಮುಂಬಾಗಿಲುಗಳ ಸುತ್ತಾಟ – ಕೂಗಾಟ – ಎಳೆದಾಟಗಳು, ಅಡಿಗೆ ಮನೆಯಲ್ಲಿರುವ ನಮಗೆ (ನಾನು–ಮೈತ್ರಾ–ತಿಪ್ಪೇಶ) ನಗು ಉಕ್ಕಿಸುತ್ತಿತ್ತು.

ತಿಂಡಿ ತಿನ್ನುವ ವೇಳೆಯಾದರೂ ಇವರ ಎಣ್ಣೆ ಹಚ್ಚುವಾಟ ಮುಗಿಯುತ್ತಿರಲಿಲ್ಲ. ಆಗ ನಾನು "ಉಂಡಾಡಬಹುದು, ಊಟಕೆ ಬಾರೋ ಕೃಷ್ಣಪ್ಪ" ಎಂದು ಕರೆಯುತ್ತಿದ್ದೆ. ಇವರ ಜಗ್ಗಾಟಗಳನ್ನು ನೋಡಲಾರದೆ, ನಾನು–ಮೈತ್ರಾ, ಮುಂಬಾಗಿಲು – ಹಿಂಬಾಗಿಲಲ್ಲಿ ನಿಂತು ಮಕ್ಕಳಿಬ್ಬರನ್ನು ಅಡ್ಡಗಟ್ಟಿ ಕರೆತಂದು ಕೃಷ್ಣಪ್ಪನ ಬಳಿ ಬಿಡುತ್ತಿದ್ದವು. ಮಕ್ಕಳು ಅತ್ತು ಕರೆದು ಮಾಡ್ತಾ, ಎಣ್ಣೆ ಹಚ್ಚಿಸಿಕೊಳ್ಳುತಿದ್ದರು. ಈ ಎಣ್ಣೆ ಬಳಿಯುವುದು ಹೇಗಿರುತ್ತಿತ್ತೆಂದರೆ ತಲೆಯಿಂದ ಎಣ್ಣೆ ಜಿನುಗುತ್ತಿತ್ತು.. ಕಣ್ಣಿನೊಳಗೆ ಎಣ್ಣೆ ಸೇರಿಕೊಂಡು ಕಣ್ಣು ಬಿಡಲಿಕ್ಕೆ ಆಗುತ್ತಿರಲಿಲ್ಲ. ಹಾಗಾಗಿ ಇದಕ್ಕೆ ಮಕ್ಕಳು ಯಾವಾಗಲೂ ಸಿದ್ಧರಿರುತ್ತಿರಲಿಲ್ಲ. ಅವರ ಕೋಪತಾಪ–ಅಳು ನಿಲ್ಲಿಸಲಿಕ್ಕಾಗಿ ಕೃಷ್ಣಪ್ಪ ಅನೇಕ ಕಥೆಗಳನ್ನು ಹೇಳುತ್ತಾ, ಹಾಡನ್ನು ಹೇಳುತ್ತಾ, ಬಟ್ಟಲಿನ ಎಣ್ಣೆ ಖಾಲಿ ಮಾಡಿಬಿಡುತ್ತಿದ್ದರು. ಮೈತುಂಬಾ ಎಣ್ಣೆ ಬಳಿದ ಬಳಿಕವೇ ಅವರಿಗೆ ಸಂತೃಪ್ತ ಭಾವ. 'ಅಭ್ಯಂಜನ'ದ ಯಥಾವತ್ ಚಿತ್ರವನ್ನು ಅಲ್ಲಿ ಕಾಣಬಹುದಾಗಿತ್ತು. ತದನಂತರ ಹಿಂದಿನ ಅಂಗಳ ಅವರ ಕಾರ್ಯ ಕ್ಷೇತ್ರ. ಅವರ ಪ್ರಯಾಣದ ನಿತ್ಯ ಸಂಗಾತಿ 'ಸ್ಕೂಟರ್ ಅಭ್ಯಂಜನ' ಮುಗಿತೂ ಅಂದ್ರೆ, ಅಂಗಳ ತೊಳೆಯೋಕೆ ನಿಂತು ಬಿಡುತ್ತಿದ್ದರು. "ಊಟಕೆ ಬಾರೋ ಕೃಷ್ಣಪ್ಪ, ಉಂಡು ಸ್ಕೂಟರ್ ತೊಳೆಯಬಹುದಪ್ಪ" ಎಂದು ನಾನು ಹಲವು ಬಾರಿ ಹೇಳುತ್ತಿದ್ದೆ. ಕೃಷ್ಣಪ್ಪನವರ ಸ್ವಚ್ಛತಾ ಕಾರ್ಯವನ್ನೇನಾದರೂ ಪ್ರಧಾನ ಮಂತ್ರಿ ಮೋದಿಜೀಯವರೇನಾದರೂ ನೋಡಿದ್ರೆ, ಅವರಿಗೆ ರಾಷ್ಟ್ರೀಯ ಪುರಸ್ಕಾರ ಪ್ರದಾನ ಮಾಡುತ್ತಿದ್ದರು.

ಬೆಳಗಿನ ತಿಂಡಿಯೇ ಇರಲಿ, ಮಧ್ಯಾಹ್ನದ ಊಟವೇ ಇರಲಿ, ಭಾನುವಾರದ ರಜಾ ದಿನಗಳಲ್ಲಿ ಏನಾದರೂ ವಿಶೇಷ ಮಾಡುತ್ತಿದ್ದೆ. ಎಲ್ಲರೂ ಸೇರಿ ಮಧ್ಯಾಹ್ನ ಊಟ ಮಾಡುತ್ತಿದ್ದೆವು. ರೊಟ್ಟಿ, ಎಣ್ಣೆಕಾಯಿ, ಕಾಳಿನ ಪಲ್ಯಗಳು, ಸಿಹಿ ತಿಂಡಿಗಳು, ಸಂಜೆ ಕಾರಮಂಡಕ್ಕಿ, ಬಜ್ಜಿ ಅಥವಾ ವಡೆ ಇತ್ಯಾದಿ ಎಲ್ಲರೂ ಸಂಭ್ರಮದಿಂದ ಸವಿಯುತ್ತಿದ್ದೆವು. ಸಂಜೆಯ ಸವಿ ತಿಂಡಿಯ ಸಮಯದಲ್ಲೇ, ಶಾಲು–ಸೀಮಾ–ಮೈತ್ರಾ–ತಿಪ್ಪೇಶರ ಆಟಪಾಠ – ಓದು ಇತ್ಯಾದಿಗಳ ಚರ್ಚೆ ನಡೆಯುತ್ತಿದ್ದವು. ನನ್ನ ಬಿಡುವಿನ ಮಿತಿಯಿಂದಾಗಿ ಹೇಳಿಕೊಡಲಾಗದ ಪಾಠಗಳನ್ನು, ಕೃಷ್ಣಪ್ಪನವರಿಗೆ ಹೇಳಿಕೊಡಲು ಒಪ್ಪಿಸುತ್ತಿದ್ದೆ. ಅವರು ಮಕ್ಕಳಿಗೆ ಪಾಠ ಹೇಳಿಕೊಟ್ಟದ್ದು ಕಡಿಮೆಯೇ ಎನ್ನಬಹುದು.

ಒಂದು ಪೆನ್ನಿನ ಕಥೆ

ಭದ್ರಾವತಿಯ ಓಲ್ಡ್‌ಟೌನ್‌ನಲ್ಲಿನ ಮನೆಯಲ್ಲಿದ್ದಾಗ, ನಮ್ಮ ಮನೆ ಎದುರುಗಡೆ ಮನೆಯಲ್ಲಿ ಮುಸ್ಲಿಂ ಸಮುದಾಯದವರು ವಾಸಿಸುತ್ತಿದ್ದರು. ನಾವು

ಅವರು ಬಹಳ ಆತ್ಮೀಯವಾಗಿದ್ದೆವು. ನಮ್ಮ ಅನೇಕ ಕಷ್ಟ ಸುಖಗಳಲ್ಲಿ ಅವರು ಭಾಗಿಯಾಗಿದ್ದರು. ಅವರ ಮಕ್ಕಳು ನನ್ನನ್ನು 'ದೀದೀ' ಎಂದು ಕರೆಯುತ್ತಿದ್ದರು. ಅವರ ಮಗ ಕೆಲಸಕ್ಕಾಗಿ ಸೌದಿ ಅರೇಬಿಯಾಕ್ಕೆ ಹೋಗಿದ್ದವನು, ಹಿಂತಿರುಗಿದ್ದ. ಆಗ ನನಗೆಂದು ಫೌಂಟೆನ್ ಪೆನ್ನು, ನೈಲ್ ಕಟ್ಟರ್ ಇತ್ಯಾದಿ ತಂದು ಕೊಟ್ಟಿದ್ದ. ಅವುಗಳನ್ನು ನಾನು ನನ್ನ ಟೇಬಲ್ ಮೇಲೆ ಇಟ್ಟಿರುತ್ತಿದ್ದೆ. ಒಂದು ದಿನ ಒಬ್ಬ ಹುಡುಗ ಅವರ ತಂದೆಯೊಂದಿಗೆ ನಮ್ಮ ಮನೆಗೆ ಬಂದು, 'ಸೀಮಾ ನನ್ನ ಫೌಂಟೆನ್‌ಪೆನ್ ಕದ್ದಿದ್ದಾಳೆಂದೂ, ಅದನ್ನು ಕೊಡಬೇಕು' ಎಂದು ಕೇಳಿದ. ನಾನು "ಇಲ್ಲಪ್ಪ ಅವಳು ಹಾಗೆಲ್ಲ ಕದಿಯುವವಳಲ್ಲ; ನನ್ನ ಹತ್ತಿರ ಇರುವ ಪೆನ್ ಅವಳು ಶಾಲೆಗೆ ತಂದಿದ್ದಾಳೆ, ಅದು ನಮ್ಮದೇ ಪೆನ್ ಎಂದು ಹೇಳಿದೆ. ಸೀಮಾ-ಶಾಲು-ಮೈತ್ರಾ ನಾವೆಲ್ಲ ನಿಂತು ಅವರೊಡನೆ ಮಾತು ಮುಂದುವರೆಸಲಿಕ್ಕೆ ಬಿಡದೆ, ಕೃಷ್ಣಪ್ಪ, ಇದ್ದಕ್ಕಿದ್ದಂತೆ ಟೇಬಲ್ ಮೇಲಿದ್ದ ಪೆನ್ನನ್ನು ತಂದು, ಆ ಹುಡುಗನ ಕೈಗೆ ಕೊಟ್ಟೇಬಿಟ್ಟರು. 'ರೀ, ಅದು ನಮ್ಮ ಎದುರು ಮನೆ ಶಾನು ಅವರಣ್ಣ ಕೊಟ್ಟಿದ್ದು, ಯಾಕ್ರೀ ಕೊಡ್ತಾ ಇದ್ದೀರಾ? ಆತ ಬೇರೆ ಎಲ್ಲೋ ಕಳಕೊಂಡಿರಬಹುದು. ಇವಳ ಹತ್ರ ಇರೋದು ನೋಡಿ ಇವಳೇ ತಕ್ಕೊಂಡಿದ್ದಾಳೆ ಅಂತ ಬಂದಿದ್ದಾರೆ' ಅಂತ ನಾವು ಹೇಳ್ತಾ ಇದ್ರೂ, ಕೃಷ್ಣಪ್ಪ ಆ ತಂದೆ ಮಕ್ಕಳನ್ನು 'ನೀವು ಹೋಗಿ' ಅಂತ ಕಳುಹಿಸಿಬಿಟ್ರು. ನಾವು ಸುಳ್ಳುಗಾರ್ರು ಅಂತ ಮಾಡಿಬಿಟ್ರಲ್ಲ; ಅಂತ ನಾನು ಬೈದಾಡಿದ್ರೆ, ಅವರು 'ಒಂದು ಪೆನ್‌ಗಾಗಿ, ಅವರತ್ರ ಜಗಳಾಡಬೇಕಾಗಿತ್ತೆ? ಆ ಮಗುಗೆ ಆ ಹೊತ್ತಿಗೆ ಪೆನ್ ಸಿಕ್ಕಿದ ಸಂತೋಷ ಇದ್ಯಲ್ಲಾ, ಅದು ಸಾಕು' ಅಂದ್ರು.. ನಾನೂ ಮಾತು ಮುಂದುವರೆಸಲಿಲ್ಲ.


ಶಾಲು-ಸೀಮಾ ವೇಷಧಾರಿಗಳಾಗಿ

ಶಾಲಿನಿ ಏಳನೇ ತರಗತಿಗೆ ಸೀಮಾ ಆರನೇ ತರಗತಿಗೆ ಬಂದರು. ಆದಾಗ ತಾನೆ ಕರ್ನಾಟಕ ಸರ್ಕಾರ ನವೋದಯ ಶಾಲೆಯನ್ನು ತೆರೆಯಲಾರಂಭಿಸಿತ್ತು. ಭದ್ರಾವತಿ ಸಮೀಪದ ಗಾಜನೂರಿನಲ್ಲಿ ಒಂದು ನವೋದಯ ಶಾಲೆ ತೆರೆಯುತ್ತಾರೆಂದು, ಅರ್ಜಿಗಳನ್ನು ಕರೆದ ಪ್ರಕಟಣೆ ಪತ್ರಿಕೆಗಳಲ್ಲಿ ಬಂದಿತ್ತು. ಸೀಮಾಳನ್ನು ಅಲ್ಲಿಗೆ ಸೇರಿಸಬೇಕೆಂದು, ಅರ್ಜಿ ತಂದು ತುಂಬಿಸಿ, ಸಲ್ಲಿಸಿಯೂ ಆಯಿತು. ಕಳುಹಿಸಿದ್ದೂ ಆಯಿತು. ಸಂದರ್ಶನಕ್ಕೆ ಬರಬೇಕೆಂದು ಕರೆಯೂ ಬಂದಿತ್ತು. ನಾವು ಅವಳನ್ನು ಬಿಟ್ಟಿರಲು ಮಾನಸಿಕವಾಗಿ ಸಿದ್ಧರಾದೆವು. ಆದರೆ ಅವಳು ಶತಾಯ-ಗತಾಯ ಒಪ್ಪಲೇ ಇಲ್ಲ. ಬೆಳಗೆದ್ದು ಸಂದರ್ಶನಕ್ಕೆ ಹೋಗಬೇಕು. "ನಾನು ಬರೋಲ್ಲ" ಅಂತಾ ಅಳ್ತಾ ಕೂತು ಬಿಟ್ಟಳು. ತಂದೆ ಕೃಷ್ಣಪ್ಪ, ಅವಳನ್ನು ಕೂರಿಸಿಕೊಂಡು ಪರಿಪರಿಯಾಗಿ ಒಪ್ಪಿಸಿದರೂ ಅವಳು ಜಪ್ಪಯ್ಯಾ ಅನ್ನಲಿಲ್ಲ. ಅಲ್ಲಿಗೆ ನವೋದಯ ಶಾಲೆಯ ವಿಷಯ ಉದಯದಲ್ಲೆ ಅಂತ್ಯ ಕಂಡಿತ್ತು. ಮತ್ತೆ ಯಥಾ ಪ್ರಕಾರ ಪೇಪರ್‌ಟೌನ್ ಮಾಧ್ಯಮಿಕ ಶಾಲೆಗೇ ಭರ್ತಿ ಮಾಡಿಸಲಾಯಿತು.

(ಮುಂದುವರೆಯುವುದು)

(೩ನೇ ಪುಟದಿಂದ)

ಶಾಂತಿಸೇನೆಯೊಂದನ್ನೂ ಸ್ಥಾಪಿಸಿದ ಹೆಗ್ಗಳಿಕೆ ಜೆಪಿಯದ್ದು. ಕಾಶ್ಮೀರ ಸಮಸ್ಯೆ, ನಾಗಾಬಂಡುಕೋರರ ಸಮಸ್ಯೆ, ಟಿಬೆಟ್ ಸಮಸ್ಯೆಗಳನ್ನು ಒಂದು ತಹಬಂದಿಗೆ ತರುವಲ್ಲಿ ಕೇಂದ್ರ ಸರ್ಕಾರದೊಂದಿಗೆ ಸಹಕರಿಸಿದ ಜೆಪಿಯವರ ಬದುಕಿನಲ್ಲಿ ೧೯೭೧ರಲ್ಲಿ ಚಂಬಲ್ ಕಣಿವೆಯ ಡಕಾಯಿತರನ್ನು ತಮಗೆ ಶರಣಾಗತರಾಗುವಂತೆ ಮನಃಪರಿವರ್ತಿಸಿದ್ದು ಗಾಂಧಿ ಮಾರ್ಗದಲ್ಲಿನ ಅವರ ಮಹತ್ಸಾಧನೆ ಎನಿಸಿ, ಅವರು 'ಲೋಕನಾಯಕ'ರೆಂದೇ ಜನಮನ್ನಣೆ ಗಳಿಸಿದರು. ಈ ಹೊತ್ತಿಗೆ ತಮ್ಮ ಪತ್ನಿಯನ್ನು ಕಳೆದುಕೊಂಡಿದ್ದ ಜೆಪಿ ಮುಂದಿನ ತಮ್ಮ ಜೀವನವನ್ನು ಸಂಪೂರ್ಣವಾಗಿ ಸಾರ್ವಜನಿಕ ಉದ್ದೇಶಗಳಿಗೇ ಮುಡಿಪಾಗಿಟ್ಟರು.

ಎಪ್ಪತ್ತರ ದಶಕದ ಆರಂಭದಲ್ಲಿ ರಾಷ್ಟ್ರಾದ್ಯಂತ ಕಂಡುಬಂದ ಸಾರ್ವಜನಿಕ ಅಶಾಂತಿ ಗುಜರಾತ್ ಮತ್ತು ಬಿಹಾರಗಳಲ್ಲಿನ ವಿದ್ಯಾರ್ಥಿ ಚಳುವಳಿಗಳ ಮೂಲಕ ಸ್ಫೋಟಗೊಳ್ಳತೊಡಗಿದಾಗ ಜೆಪಿ, ವಿದ್ಯಾರ್ಥಿಗಳು ಮತ್ತು ಕೇಂದ್ರ ಸರ್ಕಾರದ ನಡುವೆ ಸಂಧಾನಗಳ ಪ್ರಯತ್ನ ಮಾಡಿದರು. ಆದರೆ ಪ್ರಧಾನಿ ಇಂದಿರಾ ಗಾಂಧಿ ತಮ್ಮ ಸರ್ಕಾರದ ದಮನ ನೀತಿ ಮತ್ತು ಭ್ರಷ್ಟಾಚಾರ ಪ್ರಕರಣಗಳನ್ನು ನಿಯಂತ್ರಿಸದಾದಾಗ ಜೆಪಿಯವರೇ ವಿದ್ಯಾರ್ಥಿ ಚಳುವಳಿಯ ಮಾರ್ಗದರ್ಶಕರಾಗಿ ರಾಷ್ಟ್ರಾದ್ಯಂತ ಪ್ರವಾಸ ಕೈಗೊಂಡು ಅದನ್ನೊಂದು ಸಾರ್ವತ್ರಿಕ ಚಳುವಳಿಯನ್ನಾಗಿ ರೂಪಿಸಿದರು. ಜನತೆಗೆ 'ಸಂಪೂರ್ಣ ಕ್ರಾಂತಿಯ ಕರೆ ನೀಡಿದರು. ಸಾರ್ವಜನಿಕ ಜೀವನದ ಎಲ್ಲ ಕ್ಷೇತ್ರಗಳಲ್ಲಿ ಮೌಲ್ಯಪತನವಾಗಿದ್ದು ಆ ಎಲ್ಲ ಕ್ಷೇತ್ರಗಳಲ್ಲೂ-ರಾಜಕಾರಣ, ಧರ್ಮ, ಸಮಾಜ, ಶಿಕ್ಷಣ, ಸಂಸ್ಕೃತಿ ಇತ್ಯಾದಿ-ಗಾಂಧಿಯವರ ಸರ್ವೋದಯ ಪರಿಕಲ್ಪನೆಯನುಸಾರ ಮೂಲಭೂತ ಬದಲಾವಣೆ ಅಗತ್ಯ ಎಂದು ಅವರು ಪ್ರತಿಪಾದಿಸಿದರು.

ತಮ್ಮ ಬದುಕಿನಲ್ಲಿ ಎರಡನೇ ಸಾರ್ವಜನಿಕ ಹೋರಾಟದ ನೇತೃತ್ವ ವಹಿಸಬೇಕಾಗಿ ಬಂದಿದ್ದ ಸ್ವಾತಂತ್ರ್ಯ ಸೇನಾನಿ ಜೆಪಿ, ಈ ಹೋರಾಟದ ಭಾಗವಾಗಿ ಸ್ವತಂತ್ರ ಭಾರತದ ಸರ್ಕಾರದಿಂದಲೇ ೧೯೭೫ರಲ್ಲಿ ಬಂಧಿತರಾಗಿ ಸೆರೆಮನೆ ಸೇರಬೇಕಾಯಿತು. ಇಂದಿರಾ ಗಾಂಧಿಯವರು ಚುನಾವಣಾ ಭ್ರಷ್ಟಾಚಾರದ ಪ್ರಕರಣವೊಂದರಲ್ಲಿ ಅಪರಾಧಿ ಎಂದು ನ್ಯಾಯಾಲಯವೊಂದು ತೀರ್ಪು ನೀಡಿದಾಗ ಜೆಪಿ ಪ್ರಧಾನಿಯ ರಾಜೀನಾಮೆಗೆ ಆಗ್ರಹಿಸಿದ್ದೇ ನೆಪವಾಗಿ ಕೇಂದ್ರ ಸರ್ಕಾರ ತುರ್ತು ಪರಿಸ್ಥಿತಿ ಘೋಷಿಸಿ ಪ್ರಜೆಗಳ ಎಲ್ಲ ಮೂಲಭೂತ ಸ್ವಾತಂತ್ರ್ಯಗಳನ್ನೂ ಅಮಾನತ್ತಿನಲ್ಲಿಟ್ಟು ಸರ್ವಾಧಿಕಾರಿ ಪ್ರಭುತ್ವದ ಸ್ಥಾಪನೆಯಾಯಿತು. ಸೆರೆಮನೆಯಲ್ಲಿ ಜೆಪಿಯವರ ಆರೋಗ್ಯ ಹದಗೆಡಲಾರಂಭಿಸಿದಾಗ ಸರ್ಕಾರ ಅವರನ್ನು ಬಿಡುಗಡೆ ಮಾಡಿತು. ೧೯೭೭ರ ಹೊತ್ತಿಗೆ ಅಂತಾರಾಷ್ಟ್ರೀಯ ಒತ್ತಡಕ್ಕೆ ಸಿಕ್ಕಿ ಇಂದಿರಾ ಗಾಂಧಿಯವರು ತುರ್ತು ಪರಿಸ್ಥಿತಿಯ ಆಜ್ಞೆಯನ್ನು ಭಾಗಶಃ ವಾಪಸ್ ಪಡೆದು ಸಾರ್ವತ್ರಿಕ ಚುನಾವಣೆಗಳನ್ನು ಘೋಷಿಸಿದಾಗ ಜೆಪಿ ರಾಷ್ಟ್ರದ ಪ್ರಮುಖ ವಿರೋಧ ಪಕ್ಷಗಳೆನಿಸಿದ್ದ ಭಾರತೀಯ ಲೋಕದಳ, ಭಾರತೀಯ ಜನಸಂಘ, ಸಮಾಜವಾದಿ ಪಕ್ಷ ಮತ್ತು ಸಂಸ್ಥಾ ಕಾಂಗ್ರೆಸ್‌ಗಳನ್ನು ಒಟ್ಟುಗೂಡಿಸಿ ಗಾಂಧಿ ಸಮಾಜವಾದದ ರಾಜಕೀಯ ಪ್ರಣಾಳಿಕೆಯೊಂದಿಗೆ ಜನತಾ ಪಕ್ಷವೆಂಬ ಹೊಸ ಪಕ್ಷವನ್ನು ಸ್ಥಾಪಿಸಿ ತಮ್ಮ ಹದಗೆಟ್ಟ ಆರೋಗ್ಯದ ನಡುವೆಯೂ ಚುನಾವಣಾ ಪ್ರಚಾರದ ನೇತೃತ್ವವನ್ನು ತಾವೇ ವಹಿಸಿಕೊಂಡು ರಾಷ್ಟ್ರಾದ್ಯಂತ ಬಿರುಗಾಳಿ ಪ್ರವಾಸ ಮಾಡಿದರು.

ಜನತಾ ಪಕ್ಷ ಅಭೂತಪೂರ್ವ ಜಯಗಳಿಸಿತು. ಆದರೆ ಈ ಜಯ ಹುಟ್ಟಿಸಿದ್ದ ಆಸೆ ಬಹಳ ಕಾಲ ಉಳಿಯಲಿಲ್ಲ. ಜನತಾ ಪಕ್ಷ ಸರ್ಕಾರದಲ್ಲಿ ಅಧಿಕಾರ ಕಿತ್ತಾಟಗಳು ಶುರುವಾಗಿ ಅದು ಅನಾರೋಗ್ಯಪೀಡಿತ ಜೆಪಿಯವರ ಹತೋಟಿಯನ್ನು ಮೀರಿ ಬೆಳೆದು ೧೯೭೯ರ ಅಕ್ಟೋಬರ್ ೮ರಂದು ಅವರು ಕೊನೆಯುಸಿರು ಎಳೆಯುವ ವೇಳೆಗೆ ಆ ಸರ್ಕಾರವೂ ಕೊನೆಯುಸಿರೆಳೆಯಲು ಸಿದ್ಧವಾಗಿತ್ತು.

ಜೆಪಿ ನೇತೃತ್ವ ವಹಿಸಿದ್ದ ಎರಡು ಕ್ರಾಂತಿಗಳು ಪರಿಕಲ್ಪನೆಯಲ್ಲಿ ಸಂಪೂರ್ಣವಾಗಿದ್ದರೂ ಅನುಷ್ಠಾನದಲ್ಲಿ ಅಪೂರ್ಣ ಕ್ರಾಂತಿಗಳೇ ಆದುದು ಇತಿಹಾಸದ ಕ್ರೂರ ಸತ್ಯ. ಏಕೆಂದು ಚಿಂತಿಸುವುದು ಇಂದಿನ ತಲೆಮಾರಿನ ಸಮಾಜವಾದಿಗಳ ಜವಾಬ್ದಾರಿಯಾಗಿದೆ.

-ಅಪೂರ್ವ ಡಿ'ಸಿಲ್ವ

(ಆಧಾರ: ಡಿ.ಎಸ್. ನಾಗಭೂಷಣ ಅವರ 'ಜೆಪಿ ಕೈಪಿಡಿ')

ಹೊಸ ಚಂದಾದಾರರಿಗೆ ಸೂಚನೆ

ಪತ್ರಿಕೆಗೆ ಚಂದಾದಾರರಾಗಬಯಸುವವರು (ಫೆಬ್ರುವರಿ-ಆಗಸ್ಟ್, ೨೦೧೬) ತಮ್ಮ ಚಂದಾ ಹಣವನ್ನು (ರೂ. ೧೩೫/-) ಶಿವಮೊಗ್ಗದ ಎಸ್.ಬಿ.ಎಂ.ನ (IFSC ಕೋಡ್: SBMY 0040444) ವಿನೋಬನಗರ ಶಾಖೆಯಲ್ಲಿ 'ಸಂಪಾದಕರು ಹೊಸ ಮನುಷ್ಯ' ಹೆಸರಿನಲ್ಲಿರುವ ಚಾಲ್ತಿ ಖಾತೆ ಸಂಖ್ಯೆ: 64110358330 ಇಲ್ಲಿಗೆ ವರ್ಗಾಯಿಸಿ/ಜಮಾ ಮಾಡಿ 9449242284 -ಈ ಸಂಖ್ಯೆಗೆ ಕರೆ ಮಾಡಿ ತಿಳಿಸಬೇಕು ಅಥವಾ ಸಂದೇಶ ಕಳಿಸಬಹುದು.-ಸಂ.

GATS-WTO ಒಪ್ಪಂದಗಳಿಗೆ ಸಹಿ: ಸಾರ್ಥಕ ಶಿಕ್ಷಣಕ್ಕೆ ತಿಲಾಂಜಲಿ...

ಸಂಗ್ರಹಾನುವಾದ: ಎಂ. ರಾಜು
ಮೂಲ ಲೇಖನ: **ರಮೇಶ್ ಪಟ್ನಾಯಕ್**

ನಮ್ಮ ಜ್ಞಾನ ಮತ್ತು ಶಿಕ್ಷಣದ ಪರಿಕಲ್ಪನೆಗಳನ್ನು ಹೊಸ ವಾಣಿಜ್ಯಕ ಪರಿಭಾಷೆಯಲ್ಲಿ ನಿರೂಪಿಸುತ್ತಾ ಅವೆರಡನ್ನೂ ಜಾಗತಿಕ ವ್ಯಾಪಾರದ ಸರಕುಗಳನ್ನು ಮಾಡ ಹೊರಟಿರುವ ಗ್ಯಾಟ್ಸ್-ಡಬ್ಲ್ಯೂಟಿಒ ಒಪ್ಪಂದಗಳಿಗೆ ಭಾರತ, ಹೊರಗಿನ ಮತ್ತು ಒಳಗಿನ ಪಟ್ಟಭದ್ರ ಹಿತಾಸಕ್ತಿಗಳ ಒತ್ತಡದಲ್ಲಿ ಸಹಿ ಹಾಕುವ ಸನ್ನಾಹದಲ್ಲಿದ್ದು, ಇದನ್ನು ಜನಶಕ್ತಿ ವಿರೋಧಿಸದಿದ್ದರೆ ಉನ್ನತ ಶಿಕ್ಷಣವೆಂಬುದು ಉಳ್ಳವರ ಪಾಲಾಗುವುದು ನಿಶ್ಚಿತ ಎನ್ನುತ್ತೆ ಈ ಲೇಖನ-ಸಂ



೧೯೪೭ರಲ್ಲಿ ಅಸ್ತಿತ್ವಕ್ಕೆ ಬಂದ ಗ್ಯಾಟ್ (General agreement on Trade and Tariff) ಎಂಬ ಬಹುರಾಷ್ಟ್ರೀಯ ಒಪ್ಪಂದವು ಮೂಲತಃ ಸದಸ್ಯ ರಾಷ್ಟ್ರಗಳ ನಡುವಿನ ಕೈಗಾರಿಕಾ ಉತ್ಪನ್ನಗಳ ವ್ಯಾಪಾರ ಮತ್ತು ತೆರಿಗೆಗೆ ಸಂಬಂಧಿಸಿದ್ದು. ಪ್ರಾರಂಭದಲ್ಲಿ ಇಪ್ಪತ್ತೆಂಟು ರಾಷ್ಟ್ರಗಳು ಈ ಒಪ್ಪಂದದ ಸದಸ್ಯರಾಗಿದ್ದವು. ೧೯೪೭ರಿಂದ ೧೯೯೪ರ ನಡುವೆ ಎಂಟು ಸುತ್ತಿನ ಚರ್ಚೆಗಳು ನಡೆದು ಈ ಅವಧಿಯಲ್ಲಿ ಒಪ್ಪಂದದ ನಿಬಂಧನೆಗಳು ಬದಲಾಗುತ್ತಾ ಅಂತಿಮವಾಗಿ ಸಾಪೇಕ್ಷವಾಗಿ ದುರ್ಬಲವಾಗಿದ್ದ ಸದಸ್ಯ ರಾಷ್ಟ್ರಗಳು ತಮ್ಮ ಅರ್ಥ ವ್ಯವಸ್ಥೆಯ ರಕ್ಷಣೆಗಾಗಿ ವಿಧಿಸುತ್ತಿದ್ದ ಆಮದು ಸುಂಕವನ್ನು ರದ್ದು ಮಾಡಬೇಕಾಯಿತು. ಬದಲಾಗುತ್ತಿದ್ದ ಅಂತರರಾಷ್ಟ್ರೀಯ ಪರಿಸ್ಥಿತಿಯಲ್ಲಿ ಈ ಸಂಘಟನೆಯ ಸದಸ್ಯತ್ವವೂ ಸಹ ವೃದ್ಧಿಸತೊಡಗಿತು. ಉರುಗ್ವೇ ಸುತ್ತು ಎಂದು ಕರೆಯಲಾಗುವ ಎಂಟನೆಯ ಸುತ್ತಿನಲ್ಲಿ ಗ್ಯಾಟ್ ಸಂಘಟನೆಯು WTO(World Trade Organisatiuon) ಎಂಬ ಹೆಸರಿನೊಂದಿಗೆ ಹೊಸ ರೂಪವನ್ನೂ ಹೊಸ ವ್ಯಾಪ್ತಿಯನ್ನೂ ಪಡೆದುಕೊಂಡಿತು. ಕೃಷಿ, ಜವಳಿ, ಸೇವೆಗಳು, ಹೂಡಿಕೆಗಳು ಮತ್ತು ಬೌದ್ಧಿಕ ಆಸ್ತಿ ಹಕ್ಕುಗಳನ್ನು ಇದರ ವ್ಯಾಪ್ತಿಗೆ ತರಲಾಯಿತು. ೧-೧-೧೯೯೫ರಲ್ಲಿ WTO ಅಸ್ತಿತ್ವಕ್ಕೆ ಬಂದಾಗ ಅದರ ಸದಸ್ಯ ರಾಷ್ಟ್ರಗಳ ಸಂಖ್ಯೆ ೧೪೮ ಇದ್ದು ೨೦೧೫ರಲ್ಲಿ ಅದು ೧೬೧ಕ್ಕೆ ಏರಿತು. WTO ವ್ಯಾಪ್ತಿಗೆ ಬರುವ ವಾಣಿಜ್ಯ ಚಟುವಟಿಕೆಗಳನ್ನು ವಸ್ತುಗಳು, ಸೇವೆಗಳು, ಬೌದ್ಧಿಕ ಆಸ್ತಿ ಹಕ್ಕು ಎಂಬ ವಿಭಾಗಗಳ ಅಡಿಯಲ್ಲಿ ಗುರುತಿಸಲಾಗುತ್ತದೆ. ಒಂದು ರಾಷ್ಟ್ರವು WTO ಸದಸ್ಯನಾಗಿರುವವರೆಗೆ ತಾನು ಸಹಿ ಮಾಡಿದ ಹಲವಾರು ರೂಪಗಳ ಹಲವಾರು ಒಪ್ಪಂದಗಳಿಗೆ ಬದ್ಧವಾಗಿರಲೇಬೇಕಾಗುತ್ತದೆ.

ಅಂತರರಾಷ್ಟ್ರೀಯ ವ್ಯಾಪಾರವನ್ನು ಮುಕ್ತಗೊಳಿಸುವುದು ಮಾತ್ರವಲ್ಲದೇ ಎಲ್ಲಾ ಮಾನವ ಚಟುವಟಿಕೆಗಳನ್ನೂ ಆರ್ಥಿಕ ವ್ಯವಹಾರದ ವ್ಯಾಪ್ತಿಗೆ ಒಳಪಡುವ ಸೇವೆಗಳನ್ನಾಗಿಸುವುದು (ಮಾನವ ಬದುಕನ್ನೇ ಇಡಿಯಾಗಿ ಆರ್ಥಿಕೀಕರಿಸುವುದು) ಕೂಡ WTOದ ಉದ್ದೇಶವಾಗಿದೆ. ಈ ಒಪ್ಪಂದವು ಮುಂದಿನ ಸುತ್ತುಗಳಲ್ಲಿ ಹೆಚ್ಚು ಹೆಚ್ಚು ಕ್ಷೇತ್ರಗಳಿಗೆ ಅನ್ವಯವಾಗುತ್ತಾ ಹೆಚ್ಚು ಹೆಚ್ಚು ಬಿಗಿಯಾಗುತ್ತಾ ಹೋಗಲಿದೆ. ಈವರೆಗೆ WTO ಒಪ್ಪಂದಗಳು ಬರೀ ಚೌಕಟ್ಟುಗಳನ್ನು ಮಾತ್ರ ಒದಗಿಸುತ್ತಿದ್ದು ಅದನ್ನು ಅನ್ವಯಿಸುವ ವಿಷಯಕ್ಕೆ ಸಂಬಂಧಪಟ್ಟ ಸದಸ್ಯ ರಾಷ್ಟ್ರಗಳು ತಾವು ಯಾವ ವಿಷಯಗಳಲ್ಲಿ ಯಾವ ಮಟ್ಟಕ್ಕೆ ಬದ್ಧರಾಗಿರಲು ಸಿದ್ಧ ಎಂಬ ಬಗ್ಗೆ ಬಿಡಿಯಾಗಿ ಒಪ್ಪಿಗೆ ನೀಡಬೇಕಾಗುತ್ತಿತ್ತು. ಆದರೆ ಈ ಸಲದ ದೋಹಾ ಸುತ್ತಿನ ಮಾತುಕತೆಯಲ್ಲಿ ಕೃಷಿ, ಕೈಗಾರಿಕೆ ಮತ್ತು ಬೌದ್ಧಿಕ ಆಸ್ತಿ ಹಕ್ಕುಗಳಿಗೆ ಸಂಬಂಧಿಸಿದಂತೆ ಸಕಲ ಕ್ಷೇತ್ರಗಳಿಗೂ ಅನ್ವಯವಾಗುವಂಥ ಏಕವಾಗ್ದಾನದ (single undertaking) ವಿಧಾನವನ್ನು ಬಳಸಲಾಗುವುದು.

ಭಾರತವು WTO ಸದಸ್ಯ ರಾಷ್ಟ್ರವಾಗಿದ್ದರೂ ಸಹ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಅದು ವಿದೇಶೀಯರಿಗೆ ಮುಕ್ತವಾಗಿ ಬಾಗಿಲು ತೆರೆದಿರಲಿಲ್ಲ. ಈಗಲೂ ಸಹ ಭಾರತೀಯರು ವಿದೇಶಗಳಲ್ಲಿ ಉನ್ನತ ಶಿಕ್ಷಣ ಪಡೆಯುವ ಅಥವಾ ವಿದೇಶೀಯರು ಶಿಕ್ಷಣಕ್ಕಾಗಿ ಭಾರತಕ್ಕೆ ಬರುವ ಅವಕಾಶಗಳಿದ್ದರೂ ಅದು ಭಾರತ ಸರ್ಕಾರದ ನೀತಿ ನಿಯಮಗಳ ಅನುಸಾರ ನಡೆಯುತ್ತದೆ.

GATS(General Agreement on Trade in Services) ಎಂಬುದು WTO ದ ವ್ಯಾಪ್ತಿಗೆ ಬರುವ, ಸೇವೆಗಳ ವ್ಯಾಪಾರಕ್ಕೆ ಸಂಬಂಧಿಸಿದ ಒಂದು ಬಹುರಾಷ್ಟ್ರೀಯ ಒಪ್ಪಂದ. ಶೈಕ್ಷಣಿಕ ಸೇವೆಗಳ ವ್ಯಾಪಾರವು GATSನ ವ್ಯಾಪ್ತಿಯಲ್ಲಿರುತ್ತದೆ. ಇದು ೧-೧-೧೯೯೫ರಿಂದ ಜಾರಿಯಲ್ಲಿದೆ. ಉನ್ನತ ಶಿಕ್ಷಣದಲ್ಲಿ ಮುಕ್ತ ಮಾರುಕಟ್ಟೆಯ ಪ್ರವೇಶಕ್ಕೆ ಸಂಬಂಧಿಸಿದಂತೆ GATS ನ ವ್ಯಾಪ್ತಿಗೆ ಒಳಪಡುವ CTS (Council of Trade in Services) ಗೆ ಭಾರತ ಸರ್ಕಾರವು ೨೦೦೫ರಲ್ಲೇ ತನ್ನ ಪ್ರಸ್ತಾವನೆಯನ್ನು ಸಲ್ಲಿಸಿದೆಯಾದರೂ ಅದು ಇನ್ನೂ ಜಾರಿಗೆ ಬಂದಿಲ್ಲ. ಆದರೆ ಈ ಸಲದ ದೋಹಾ ಸುತ್ತಿನ ಮಾತುಕತೆಯಲ್ಲಿ ಈ ಪ್ರಸ್ತಾವನೆಯನ್ನು ಹಿಂದಕ್ಕೆ ತೆಗೆದುಕೊಳ್ಳುವ ಅವಕಾಶವಿದ್ದರೂ ಬಹಳ ಪ್ರಬಲವಾದ ಸಾರ್ವಜನಿಕ ಒತ್ತಾಯ ಮಾಡದ ಹೊರತು ಕೇಂದ್ರ ಸರ್ಕಾರ ತನ್ನಷ್ಟಕ್ಕೇ ಹಿಂದಕ್ಕೆ ತೆಗೆದುಕೊಳ್ಳುವುದಿಲ್ಲ. ಹಾಗೆ ಹಿಂತೆಗೆದುಕೊಳ್ಳದೇ ಹೋದಲ್ಲಿ ನಮ್ಮ ದೇಶದ ಉನ್ನತ ಶಿಕ್ಷಣ ವಲಯವು ಜಾಗತಿಕ ವ್ಯಾಪಾರೀ ವ್ಯವಸ್ಥೆಗೆ ಒಳಪಡುತ್ತದೆ. ಆಗ ಶಿಕ್ಷಣವು ಜನರ ಹಕ್ಕಾಗಿ ಉಳಿಯುವುದಿಲ್ಲ. ಶಿಕ್ಷಣವೆಂಬುದು ವಿಮುಕ್ತ, ಸಾರ್ವಭೌಮ, ಪ್ರಜಾಸತ್ತಾತ್ಮಕ ರಾಷ್ಟ್ರವೊಂದರ ನಿರ್ಮಾಣ ಪ್ರಕ್ರಿಯೆಯಾಗಿಯೂ ಉಳಿಯುವುದಿಲ್ಲ.

GATS ನಿಂದ ಅನುಸರಿಸಲ್ಪಟ್ಟ ಕೇಂದ್ರೀಯ ಉತ್ಪನ್ನ ವರ್ಗೀಕರಣ(Central product classification)ದ ಪ್ರಕಾರ ಎಲ್ಲಾ ಸೇವೆಗಳನ್ನೂ ಐದು ಭಾಗಗಳಾಗಿ ವಿಂಗಡಿಸಲಾಗಿದ್ದು ಶಿಕ್ಷಣ ಕ್ಷೇತ್ರವನ್ನು ಪ್ರಾಥಮಿಕ, ಮಾಧ್ಯಮಿಕ, ಉನ್ನತ ಶಿಕ್ಷಣ, ವಯಸ್ಕರ ಶಿಕ್ಷಣ ಮತ್ತು ಇತರೆ ಎಂಬ ಐದು ಗುಂಪುಗಳಾಗಿ ವಿಂಗಡಿಸಲಾಗಿದೆ. ಈ ಒಪ್ಪಂದದ ಪ್ರಕಾರ ಸೇವೆಗಳ ವ್ಯಾಪಾರದಲ್ಲಿ ನಾಲ್ಕು ವಿಧಾನಗಳನ್ನು ಗುರುತಿಸಲಾಗಿದ್ದು ಶಿಕ್ಷಣದ ವ್ಯವಹಾರಕ್ಕೂ ಸಹ ಇದು ಅನ್ವಯವಾಗುತ್ತದೆ. WTO ವ್ಯವಸ್ಥೆಯಲ್ಲಿ ಶಿಕ್ಷಣದ ವ್ಯಾಪಾರ ಎಂಬ ಪದಗುಚ್ಛವು ಬಳಕೆಯಲ್ಲಿದ್ದು ಭಾರತ ಸರ್ಕಾರದ ವಾಣಿಜ್ಯ ಇಲಾಖೆಯು ಮುಂಬರುವ ಮಾತುಕತೆಯ ಸಂದರ್ಭದಲ್ಲಿ ಬಳಸುವ ಸಮಾಲೋಚನಾ ಪತ್ರದಲ್ಲಿ 'ಶೈಕ್ಷಣಿಕ ಸೇವೆಗಳ ವ್ಯಾಪಾರ' ಎಂಬ ಪದಗುಚ್ಛವನ್ನೇ ಬಳಸಿದೆ. ಶಿಕ್ಷಣ ಕ್ಷೇತ್ರವನ್ನು ವ್ಯಾಪಾರೀಕರಣಗೊಳಿಸುತ್ತಿರುವುದನ್ನು ಇದು ಸ್ಪಷ್ಟಪಡಿಸುತ್ತದೆ.

ಸೇವೆಗಳ ವ್ಯಾಪಾರಕ್ಕೆ ಸಂಬಂಧಿಸಿದಂತೆ ನಾಲ್ಕು ವಿಧಾನಗಳಿವೆ, ಈ ನಾಲ್ಕು ವಿಧಾನಗಳು ಶಿಕ್ಷಣ ಕ್ಷೇತ್ರಕ್ಕೂ ಅನ್ವಯವಾಗುತ್ತವೆ ಎಂಬುದನ್ನು ನಾವೀಗಾಗಲೇ ಅರಿತಿದ್ದೇವೆ.

೧. ಸೀಮಾಂತರ ಪೂರೈಕೆ (Cross border supply)

೨. ವಿದೇಶೀ ಅನುಭೋಗ (consumption abroad)

೩. ವಾಣಿಜ್ಯ ಉಪಸ್ಥಿತಿ (commercial presence)

೪. ವ್ಯಕ್ತಿಗಳ ಉಪಸ್ಥಿತಿ (presence of natural persons)

ಎಂಬುದಾಗಿ ಹೆಸರಿಸಲ್ಪಟ್ಟಿರುವ ಈ ನಾಲ್ಕು ವಿಧಾನಗಳಲ್ಲಿ ಒಂದು ದೇಶ ತನಗೆ ಬೇಕಾದ ವಿಧಾನಗಳನ್ನು ಆಯ್ದುಕೊಳ್ಳಬಹುದು.

ಮೊದಲನೆಯ ವಿಧಾನದಲ್ಲಿ ವಿದ್ಯಾರ್ಥಿ(ಅನುಭೋಗಿ) ಅಥವಾ ಶಿಕ್ಷಕ ಅಥವಾ ಸಂಸ್ಥೆ (ಸೇವಾ ಪೂರೈಕೆದಾರ) ತಮ್ಮ ಗಡಿಗಳನ್ನು ದಾಟುವುದಿಲ್ಲ. ಇದೊಂದು ದೂರಶಿಕ್ಷಣ ವಿಧಾನವಾಗಿದ್ದು ಭಾರತ ಈ ವಿಧಾನವನ್ನು ಒಪ್ಪಿಕೊಂಡಿದ್ದೇ ಆದರೆ WTOನ ೧೬೦ ಸದಸ್ಯ ರಾಷ್ಟ್ರಗಳು ದೂರ ಶಿಕ್ಷಣ ವಿಧಾನದ ಮೂಲಕ ಭಾರತಕ್ಕೆ ಶಿಕ್ಷಣವನ್ನು ರಫ್ತು ಮಾಡಬಹುದು.

ಎರಡನೆಯ ವಿಧಾನದಲ್ಲಿ ವಿದ್ಯಾರ್ಥಿ(ಅನುಭೋಗಿ) ದೇಶದಿಂದ ಹೊರಕ್ಕೆ ಹೋಗಿ ಇತರೆ ಸದಸ್ಯ ರಾಷ್ಟ್ರ (ಶಿಕ್ಷಣದ ವಿತರಕ)ದಲ್ಲಿ ಶಿಕ್ಷಣ ಸೇವೆಯನ್ನು ಕೊಂಡುಕೊಳ್ಳಬಹುದು. ಭಾರತ ಈ ವಿಧಾನವನ್ನು ಒಪ್ಪಿಕೊಂಡರೆ, WTOದ ೧೬೦ ಸದಸ್ಯ ರಾಷ್ಟ್ರಗಳು ನಮ್ಮ ದೇಶದ ವಿದ್ಯಾರ್ಥಿಗಳಿಗೆ ತಮ್ಮ ವಿದ್ಯಾ ಸಂಸ್ಥೆಗಳಲ್ಲಿ ಪ್ರವೇಶ ನೀಡಬಹುದು.

ಮೂರನೆಯ ವಿಧಾನದ ಅನ್ವಯ ಒಂದು WTO ಸದಸ್ಯ ರಾಷ್ಟ್ರ ಇತರೆ ಯಾವ ರಾಷ್ಟ್ರದಲ್ಲಾದರೂ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಬಹುದು.

ನಾಲ್ಕನೆಯ ವಿಧಾನದ ಅನ್ವಯ ಒಬ್ಬ ಸದಸ್ಯ ರಾಷ್ಟ್ರದ ಶಿಕ್ಷಕ ಇತರೆ ರಾಷ್ಟ್ರಕ್ಕಾದರೂ ಹೋಗಿ ತನ್ನ ಸೇವೆಯನ್ನು ಒದಗಿಸಬಹುದು. ಅಲ್ಲಿ ಶುಲ್ಕವನ್ನು ಪಡೆಯಬಹುದು.

ಒಮ್ಮೆ ಭಾರತವು ಶಿಕ್ಷಣಕ್ಕೆ ಸಂಬಂಧಿಸಿದಂತೆ WTO ಒಪ್ಪಂದಕ್ಕೆ ಸಹಿ ಮಾಡಿದರೆ ಅದೊಂದು ಶಾಶ್ವತ ನಿರ್ಬಂಧವಾಗಿ, ಅದರಿಂದ ಹೊರಬರುವುದು ಅಸಾಧ್ಯವಾಗುತ್ತದೆ. ಅದು ನಮ್ಮ ಸಾರ್ವಭೌಮತ್ವವನ್ನು ನಾವು ಒತ್ತೆ ಇರಿಸಿದಂತೆ. ವಿದೇಶೀ ವಿಶ್ವವಿದ್ಯಾಲಯಗಳು ಶಿಕ್ಷಣ ಸಂಸ್ಥೆಗಳು ಮುಕ್ತವಾಗಿ ಭಾರತದೊಳಗೆ ಬರಲು ಪ್ರಾರಂಭಿಸಿದರೆ ನಮ್ಮ ಶಿಕ್ಷಣ ಕ್ಷೇತ್ರದ ಚಿತ್ರಣವೇ ಬದಲಾಗಲಿದೆ. ವಿದೇಶೀ ಶಿಕ್ಷಣ ಮಟ್ಟಗಳ ಆಧಾರದ ಏಕಾಯಾಮದ ನೆಲೆಯಲ್ಲಿ ನಮ್ಮ ಶಿಕ್ಷಣ ಮಟ್ಟವು ನಿರ್ಧಾರವಾಗುವುದರಿಂದ ವೈವಿಧ್ಯತೆಗೆ ಅವಕಾಶಗಳು ಇಲ್ಲದಂತಾಗುತ್ತವೆ. ನಮ್ಮ ವಿಶ್ವವಿದ್ಯಾಲಯಗಳು ತೊಂದರೆಗೆ ಸಿಲುಕಲಿದ್ದು ಬಡ ಮಧ್ಯಮ ಹಿಂದುಳಿದ ವರ್ಗಗಳು ಶಿಕ್ಷಣದ ಅವಕಾಶದಿಂದ ವಂಚಿತವಾಗಲಿವೆ. ಶಿಕ್ಷಣದ ಬಗೆಗೆ, ಜೀವನದ ಸಾಂಸ್ಕೃತಿಕ ಅಂಶಗಳ ಬಗೆಗೆ ಕೇವಲ ಒಂದು ಪ್ರಯೋಜನವಾದೀ ನಿಲುವು ಉಂಟಾಗುವುದರಿಂದ ನಿಲುವು ಮತ್ತು ವಿಷಯ–ವಸ್ತುಗಳ ದೃಷ್ಟಿಯಿಂದ ಶಿಕ್ಷಣವು ಸಮಾಜ ವಿಮುಖವಾಗುವುದು. ವಿದೇಶೀ ಶಿಕ್ಷಣ ಸಂಸ್ಥೆಗಳು ನಮ್ಮಲ್ಲಿಗೆ ಬರತೊಡಗಿದಾಗ ತುಲನಾತ್ಮಕ ಗುಣಮಟ್ಟ ನಿರ್ಧರಣಾ ವ್ಯವಸ್ಥೆಯೊಂದರ ಅಗತ್ಯ ಉಂಟಾಗಿ ಇದಕ್ಕೆ ಬೇಕಾಗುವ ಮಾನದಂಡಗಳ ಆಯ್ಕೆಯ ಸಮಸ್ಯೆ ಉಂಟಾಗಲಿದೆ. ಇಂಥ ಸಂದರ್ಭಗಳಲ್ಲಿ ವಿದೇಶೀ ಜ್ಞಾನಮಾದರಿಯೇ ಮಾನದಂಡವಾಗಿ ಸ್ಥಳೀಯ ಜ್ಞಾನಗಳು ಮೌಲ್ಯಹೀನವಾಗುತ್ತವೆ. ಒಟ್ಟಾರೆ ಶಿಕ್ಷಣದ ಅವಕಾಶಗಳು ಹೆಚ್ಚಿದರೂ ಬಡ ಮತ್ತು ಹಿಂದುಳಿದ ವರ್ಗಗಳಿಗೆ ಇದು ಮಾರಕವಾಗಿ ಸಾಮಾಜಿಕ ನ್ಯಾಯದ ಕಲ್ಪನೆಗೆ ಧಕ್ಕೆಯುಂಟಾಗಲಿದೆ. ನಮ್ಮ ಉತ್ತಮ ಶಿಕ್ಷಕರು ಇತರ ದೇಶಗಳಿಗೆ ವಲಸೆ ಹೋಗಬಹುದಾದ್ದರಿಂದ ಅವರ ಸೇವೆ ನಮಗೆ ದೊರಕದೇ ಹೋಗಬಹುದು. ವಿದೇಶೀ ಶಿಕ್ಷಕರ ಸೇವೆ ವಿಪರೀತ ದುಬಾರಿಯಾಗಿ ಅದು ನಮ್ಮ ಕೈಗೆಟುಕದೇ ಹೋಗಬಹುದು. ಇಂದು ಚೀನಾ ದೇಶ ಈ ಸಮಸ್ಯೆಯನ್ನು ಎದುರಿಸುತ್ತಿದೆ.

GATS ಒಪ್ಪಂದದಲ್ಲಿ ಹಲವಾರು ಅಪಾಯಕಾರೀ ಅನುಚ್ಛೇದಗಳಿದ್ದು ಅವನ್ನೆಲ್ಲಾ ಇಲ್ಲಿ ವಿವರವಾಗಿ ಚರ್ಚಿಸುವುದು ಸಾಧ್ಯವಿಲ್ಲ. ಆದ್ದರಿಂದ ಭಾರತದ ಶೈಕ್ಷಣಿಕ ವ್ಯವಸ್ಥೆಗೆ ಇದರಿಂದ ಉಂಟಾಗಬಹುದಾದ ತೊಂದರೆಗಳನ್ನು ನೋಡೋಣ.

ಅತ್ಯಂತ ನೆಚ್ಚಿನ ರಾಷ್ಟ್ರ(most favoured nation) ಎಂಬುದು



ಒಂದು ಒಪ್ಪಂದ ವಿರೋಧಿ ಶೈಕ್ಷಣಿಕ ಸಮ್ಮೇಳನ

GATS ನಲ್ಲಿನ ಒಂದು ಅನುಚ್ಛೇದ. ಸದಸ್ಯರಲ್ಲದ ರಾಷ್ಟ್ರಗಳ ಮೇಲೆ ರಿಯಾಯ್ತಿ–ವಿನಾಯ್ತಿಗಳ ಒತ್ತಡ ಹೇರುವುದು ಮತ್ತು ಪರ್ಯಾಯ ವಾಣಿಜ್ಯ ವ್ಯವಸ್ಥೆಗಳು ರೂಪುಗೊಳ್ಳದಂತೆ ತಡೆಯುವುದು ಇದರ ಉದ್ದೇಶ. ಅಭಿವೃದ್ಧಿಶೀಲ ರಾಷ್ಟ್ರಗಳು ಸಹಕಾರೀ ತತ್ವದ ಆಧಾರದಲ್ಲಿ ಅಭಿವೃದ್ಧಿ ಹೊಂದುವ ಪ್ರಯತ್ನಗಳನ್ನು ಇದು ಯಶಸ್ವಿಯಾಗಿ ತಡೆದಿದೆ.

ತಮ್ಮವರಂತೆಯೇ ನಡೆಸಿಕೊಳ್ಳಬೇಕೆಂಬ(national treatment) ಅನುಚ್ಛೇದ–XVII: ವಿದೇಶೀ ವ್ಯಾಪಾರಿಗಳನ್ನು ಸ್ಥಳೀಯರಂತೆಯೇ ಪರಿಗಣಿಸಬೇಕು ಎಂಬುದು ಇದರ ಅರ್ಥ. ಸ್ಥಳೀಯ ಸಣ್ಣ ಕೈಗಾರಿಕೆಗೆ ಅಥವಾ ಶಿಕ್ಷಣ ಸಂಸ್ಥೆಗೆ ಸರ್ಕಾರವು ಹಣಕಾಸಿನ ನೆರವು, ಏನಾದರೂ ವಿನಾಯಿತಿ ಇತ್ಯಾದಿ ನೀಡಿದರೆ ಅದನ್ನು ವಿದೇಶೀ ಸಂಸ್ಥೆಗಳಿಗೂ ನೀಡಬೇಕಾಗುತ್ತದೆ. ಬಹಳ ಹಿಂದೆ ಲಾಭದ ಉದ್ದೇಶವಿಲ್ಲದೆ ಪ್ರಾರಂಭಿಸಲಾದ ಎಷ್ಟೋ ಖಾಸಗೀ ಶಾಲಾಕಾಲೇಜುಗಳಿಗೆ ಸರ್ಕಾರ ಅನುದಾನ ನೀಡುತ್ತಿದೆ. ಇದನ್ನು ತಮಗೂ ನೀಡಬೇಕೆಂದು ವಿದೇಶೀ ಸಂಸ್ಥೆಗಳು ಕೇಳಬಹುದು. ತಮ್ಮ ದೇಶದ ಜನರಿಗೆ, ಸಂಸ್ಥೆಗಳಿಗೆ ಸರ್ಕಾರಗಳು ನೆರವನ್ನು ನೀಡದಂತೆ ಈ ನಿಯಮವು ನಿರ್ಬಂಧಿಸುತ್ತದೆ.

ಸರ್ಕಾರದ ಸಂಗ್ರಹಣೆ(government procurement) ಅನುಚ್ಛೇದ XIII: ಸರ್ಕಾರವು ಜನರಿಗೆ ಒದಗಿಸುವ ಸೇವೆಗಳಿಗೆ ಸಂಬಂಧಿಸಿದ್ದು. ಸರ್ಕಾರವು ಯಾವುದೇ ಶುಲ್ಕವನ್ನೂ ಪಡೆಯದೆ ಸೇವೆಯನ್ನು ಒದಗಿಸಲು ಇದರ ಅನ್ವಯ ಅವಕಾಶವುಂಟು. ಆದರೆ ಸರ್ಕಾರೀ ಸಂಸ್ಥೆಯೊಂದು ಸಣ್ಣ ಪ್ರಮಾಣದ ಶುಲ್ಕ ಪಡೆದರೂ ಅದನ್ನು ಖಾಸಗೀ ಪೂರೈಕೆದಾರ ಎಂದು ಪರಿಗಣಿಸಲಾಗುವುದು. ಆಗ ಸರ್ಕಾರೀ ಸಂಸ್ಥೆಗಳು ಪಡೆಯುವ ಸವಲತ್ತುಗಳನ್ನು ದೇಶೀಯ, ವಿದೇಶೀ ಖಾಸಗೀ ಸಂಸ್ಥೆಗಳಿಗೂ ನೀಡಬೇಕಾಗಬಹುದು. ಅಥವಾ ಸರ್ಕಾರೀ ಸಂಸ್ಥೆಗಳಿಗೆ ನೀಡುತ್ತಿರುವ ಸಹಾಯವನ್ನು ಪೂರ್ಣವಾಗಿ ಹಿಂತೆಗೆದುಕೊಳ್ಳಬೇಕಾಗಬಹುದು.

ಸ್ಥಳೀಯ ನಿಯಂತ್ರಣ(Domestic regulation) ಅನುಚ್ಛೇದ VI–೪: ಸ್ಥಳೀಯ ನಿಯಂತ್ರಣಗಳು ಸೇವೆಗಳ ವ್ಯಾಪಾರಕ್ಕೆ ಅಡ್ಡಿ ಆತಂಕಗಳನ್ನು ಉಂಟುಮಾಡದಂತೆ ನೋಡಿಕೊಳ್ಳುವ ಉದ್ದೇಶ ಇದರದ್ದು. ಇದರರ್ಥ ಸದಸ್ಯ ರಾಷ್ಟ್ರಗಳಿಗೆ ಅಥವಾ ಸಂಸ್ಥೆಗಳಿಗೆ ಅಗತ್ಯವಾಗುವ ನೀತಿ ನಿಯಮಗಳನ್ನು ಸ್ವತಃ CTS ರೂಪಿಸಿ ಜಾರಿಗೊಳಿಸುತ್ತದೆ. ಅಂದರೆ ಸ್ಥಳೀಯ ಸರ್ಕಾರಗಳಿಗೆ ವಿದೇಶೀ ಸಂಸ್ಥೆಗಳನ್ನು ನಿಯಂತ್ರಿಸುವ ಯಾವ ಅಧಿಕಾರವೂ ಇರುವುದಿಲ್ಲ.

ವ್ಯಾಪಾರ ನೀತಿಗಳ ಪರಿಶೀಲನಾ ವ್ಯವಸ್ಥೆ(The trade policy review mechanism) ಎಂಬುದು WTO ವ್ಯವಸ್ಥೆಯಲ್ಲಿನ ಕಾನೂನು ಸಾಧನ. ಸ್ಥಳೀಯ ಸರ್ಕಾರಗಳ ನೀತಿ ನಿಯಮಗಳನ್ನು ಪರಿಶೀಲಿಸಿ ಅದನ್ನು WTO ನಿಯಮಗಳಿಗೆ ಒಂದು ರೀತಿಯಲ್ಲಿ ಬದಲಾಯಿಸುವ/ಅಳವಡಿಸುವ ವ್ಯವಸ್ಥೆ.

ಪಾರದರ್ಶಕತೆ: (ಅನುಚ್ಛೇದ III) (೩) ಇದರ ಪ್ರಕಾರ ಸದಸ್ಯ ರಾಷ್ಟ್ರಗಳು ಈಗ ಇರುವ ನಿಯಮ, ಕಾನೂನು ಇತ್ಯಾದಿಗಳಲ್ಲಿ ಯಾವುದೇ ಬದಲಾವಣೆಗಳನ್ನು ಮಾಡಿದರೂ ಅದನ್ನು CTS ಗೆ ಕನಿಷ್ಠ ವರ್ಷಕ್ಕೊಮ್ಮೆಯಾದರೂ ವರದಿ ಮಾಡಬೇಕು. ಅಂದರೆ WTO ಗಮನಕ್ಕೆ ಬರದಂತೆ ಸದಸ್ಯ ರಾಷ್ಟ್ರಗಳು ಯಾವ ಕ್ರಮವನ್ನೂ ಕೈಗೊಳ್ಳುವಂತಿರುವುದಿಲ್ಲ. ಇಂದು ಬಹುವಾಗಿ ಸುದ್ದಿಯಲ್ಲಿರುವ ಮಾಹಿತಿ ಹಕ್ಕು ಕಾಯ್ದೆಯನ್ನು ಜಾರಿಗೊಳಿಸಿದ್ದು ಕೂಡ WTO-GATSಗೆ

ಬದ್ಧರಾಗಿರಬೇಕಾದ ಕಾರಣಕ್ಕಾಗಿಯೇ. ಆದರೆ ಎಷ್ಟೋ ಜನ ಅದನ್ನು ಇಂದು ಬೇರೆ ಬೇರೆ ಕಾರಣಗಳಿಗಾಗಿ ಬಳಸುತ್ತಿರುವುದು ಬೇರೆ ಮಾತು. ಸರ್ಕಾರಿ ಮಟ್ಟದಲ್ಲಿ ಏನು ನಡೆಯುತ್ತಿದೆ ಎಂಬುದು ಬಹುರಾಷ್ಟ್ರೀಯ ನಿಗಮಗಳಿಗೆ ತಿಳಿಯುವುದು ಸುಲಭವಾಗಬೇಕು ಎಂಬುದು ಈ ಕಾನೂನಿನ ಹಿಂದಿರುವ ನಿಜವಾದ ಉದ್ದೇಶ. ನೀತಿ ರೂಪುಗೊಳ್ಳುವ ಹಂತದಲ್ಲಿ ಲಂಚ ನೀಡಿ ಅದು ಜಾರಿಯಾಗುವ ಹಂತಗಳಲ್ಲಿ ತಮ್ಮ ಕೆಲಸಗಳು ಅಡೆತಡೆಯಿಲ್ಲದೆ ಸರಾಗವಾಗಿ ನಡೆಯುವಂತೆ ನೋಡಿಕೊಳ್ಳುವುದು. ಅಂದರೆ ಮಂತ್ರಾಲಯ ಮಟ್ಟದಲ್ಲಿ ತಮಗೆ ಅನುಕೂಲವಾಗುವಂಥ ನೀತಿ ರೂಪಿಸಿಕೊಂಡು ಅದನ್ನು ಜಾರಿಗೊಳಿಸುವ ಹಲವಾರು ಹಂತಗಳ ಅಧಿಕಾರಿಗಳನ್ನು ಬೈಪಾಸ್ ಮಾಡುವುದು ಇದರ ಮೂಲ ಉದ್ದೇಶ. ಶಿಕ್ಷಣದ ಹಕ್ಕು ಕಾಯ್ದೆ ಸಹ ಈ ದಿಸೆಯಲ್ಲಿ ಒಂದು ಪ್ರಯತ್ನ. ಶಿಕ್ಷಣ ಸೇವೆ ಒದಗಿಸುವ ಸಂಸ್ಥೆಗಳು ವಸೂಲು ಮಾಡುವ ಶುಲ್ಕವನ್ನು ಈ ಕಾಯ್ದೆ ನಿಯಂತ್ರಿಸುವುದಿಲ್ಲ. ಖಾಸಗೀ ಸಂಸ್ಥೆಗಳು ಎಷ್ಟಾದರೂ ಶುಲ್ಕ ವಸೂಲು ಮಾಡಬಹುದು. ಆದರೆ ಅದನ್ನು ಪಾರದರ್ಶಕವಾಗಿ ಮಾಡಬೇಕೆಂಬುದು ಈ ಕಾನೂನಿನ ಆಶಯ. ಖಾಸಗೀ ಶಾಲೆಗಳು ಶುಲ್ಕ ಹೆಚ್ಚಳದ ಅನುಮತಿಗಾಗಿ ಸರ್ಕಾರಿ ಕಾರ್ಯದರ್ಶಿಗಳಿಗೆ, ಜಿಲ್ಲಾ ಶಿಕ್ಷಣಾಧಿಕಾರಿಗಳಿಗೆ ಲಂಚ ನೀಡಿ ಅವರ ಮರ್ಜಿಗಾಗಿ ಕಾಯುವ ಶ್ರಮವನ್ನು ಈ ಕಾನೂನು ತಪ್ಪಿಸುತ್ತದೆ.

ಇಂದು ವಿದ್ಯುತ್, ವಿಮೆ, ಟೆಲಿಕಾಂ ಮುಂತಾದ ಕ್ಷೇತ್ರಗಳಲ್ಲಿ ಸ್ವತಂತ್ರ ನಿಯಂತ್ರಣ ಸಂಸ್ಥೆಗಳು (IRA-Independent regulatory authority) ಅಸ್ತಿತ್ವದಲ್ಲಿ ಇರುವುದನ್ನು ಕಾಣುತ್ತಿದ್ದೇವೆ. ಈ IRAಗಳು GATSನ ನಿಯಮಗಳನ್ನು ನಾವು ಪಾಲಿಸುವಂತೆ ನೋಡಿಕೊಳ್ಳುವ ವ್ಯವಸ್ಥೆಗಳಷ್ಟೇ ಆಗಿರುತ್ತವೆ. ರಾಜಕೀಯ ಪ್ರಕ್ರಿಯೆಯನ್ನು ನಿರ್ಲಕ್ಷಿಸುವುದಕ್ಕಾಗಿಯೇ ರೂಪುಗೊಂಡಿರುವ ವ್ಯವಸ್ಥೆ ಇದು. ಯಾವುದೇ ಕ್ಷೇತ್ರವು ಸರ್ಕಾರದ ನಿಯಂತ್ರಣದಲ್ಲಿದ್ದಾಗ ಜನ ತಮ್ಮ ಹಿತಕ್ಕಾಗಿ ಸರ್ಕಾರಗಳ ಮೇಲೆ ಒತ್ತಡ ತರಬಹುದು. ಆದರೆ ಒಂದು ಕ್ಷೇತ್ರವು ಸರ್ಕಾರಿ ನಿಯಂತ್ರಣದಿಂದ ದೂರವಿದ್ದಾಗ ಅದು ಕಾರ್ಪೊರೇಟ್ ಸಂಸ್ಥೆಗಳ ಹಿತವನ್ನು ಕಾಯುವ ಸ್ವಾತಂತ್ರ್ಯವನ್ನು ಹೊಂದಿರುತ್ತವೆ.

ಶಿಕ್ಷಣ ಕ್ಷೇತ್ರವನ್ನು ವಿದೇಶೀ ಹೂಡಿಕೆಗೆ ಮುಕ್ತಗೊಳಿಸುವ ಪ್ರಯತ್ನಗಳು UPA ಅಧಿಕಾರಾವಧಿಯಲ್ಲೇ ನಡೆದರೂ ಅದು ಇನ್ನೂ ಕಾರ್ಯಗತಗೊಂಡಿಲ್ಲ. ಪ್ರಸ್ತುತ ಸರ್ಕಾರವು ಜಾರಿಗೆ ತರುತ್ತಿರುವ ಏಕಗವಾಕ್ಷಿ ವ್ಯವಸ್ಥೆ, ನ್ಯಾಯಮಂಡಳಿ ಇತ್ಯಾದಿಗಳು ಉನ್ನತ ಶಿಕ್ಷಣವನ್ನು WTOಗೆ ಒಪ್ಪಿಸಲು ನಮ್ಮ ಸರ್ಕಾರವು ಮಾಡುತ್ತಿರುವ ಪ್ರಯತ್ನಗಳೇ ಆಗಿವೆ.

ಭಾರತ ಸರ್ಕಾರವು CTSಗೆ ತನ್ನ ಪ್ರಸ್ತಾವನೆಯನ್ನು ಈಗಾಗಲೇ ಸಲ್ಲಿಸಿದೆ. ಶಿಕ್ಷಣ ಕ್ಷೇತ್ರವನ್ನು ವಿದೇಶೀ ನೇರ ಹೂಡಿಕೆಗೆ ಮುಕ್ತಗೊಳಿಸಲು ಒಪ್ಪಿಗೆ ನೀಡಿದೆ. ದೋಹಾ ಸುತ್ತಿನಲ್ಲಿ ಅದು ಅಂತಿಮಗೊಳ್ಳಲಿದೆ. GATS ಎಂಬುದು ವಿಶ್ವವಿದ್ಯಾಲಯಗಳೂ ಸಹ ಮನೋರಂಜನೆ, ಮಸಾಜ್ ಪಾರ್ಲರ್‌ಗಳಂತೆ ಸೇವೆ ನೀಡುವ ವ್ಯವಸ್ಥೆ ಮಾತ್ರ ಎಂಬುದಾಗಿ ಪರಿಭಾವಿಸುವ ಒಂದು ವ್ಯಾಪಾರೀ ಒಪ್ಪಂದ. ಸಾಮಾಜಿಕ ನ್ಯಾಯ, ಸಮಾನತೆ, ರಾಷ್ಟ್ರೀಯ ಸಾರ್ವಭೌಮತೆ ಮುಂತಾದ ಮಾನವಪರ ಆಶಯಗಳಿಗೆ ಇದು ತಿಲಾಂಜಲಿ ನೀಡಲಿದೆ.

ಶಿಕ್ಷಣವೂ ಮಾರಾಟದ ವಸ್ತುವಾಗಬೇಕು, ಫ್ರೀಡ್‌ಮನ್ ಬಯಸುವಂತೆ, ಪ್ರಪಂಚವು ಚಪ್ಪಟೆಯಾಗಿದೆ ಎಂದು ನಾವೆಲ್ಲ ನಂಬಬೇಕೆಂದರೆ, GATS, WTO ಎಲ್ಲವೂ ಸರಿಯೇ. ಹಾಗಲ್ಲದೇ ಪ್ರಪಂಚವು ವೈವಿಧ್ಯಮಯವೂ ಅಸಮಾನವೂ ಆಗಿದೆ, ಈ ವೈವಿಧ್ಯತೆಯನ್ನು ಪ್ರಜಾಪ್ರಭುತ್ವೀಕರಿಸುವುದು, ಅಸಮಾನತೆಗಳನ್ನು ಕಡಿಮೆ ಮಾಡುವುದು ಅಗತ್ಯವೆಂದಾದರೆ ಶಿಕ್ಷಣವು ನಾಗರೀಕಗೊಳಿಸುವ ಮಾಧ್ಯಮ, ಮುಂದಿನ ಜನಾಂಗವನ್ನು ರಾಷ್ಟ್ರಕ್ಕಾಗಿ ಸಿದ್ಧಗೊಳಿಸುವ ಪ್ರಕ್ರಿಯೆ, ಆಂತರಿಕವಾಗಿ ಪ್ರಜಾಪ್ರಭುತ್ವವನ್ನು ದೃಢಪಡಿಸುವ ಮತ್ತು ಬಾಹ್ಯ ಶಕ್ತಿಗಳ ಒತ್ತಡದಿಂದ ಬಿಡುಗಡೆಮಾಡುವ ಶಕ್ತಿಯೆಂದು ಭಾವಿಸುವುದಾದರೆ ಶಿಕ್ಷಣವನ್ನು ವ್ಯಾಪಾರೀ ನಿಯಮಗಳಿಗೆ ಅಧೀನಗೊಳಿಸಬಾರದು, ಜಾಗತಿಕ ವ್ಯಾಪಾರೀ ವ್ಯವಸ್ಥೆಗೆ ಒಳಪಡಿಸಬಾರದು. ಬಡವರ ಪಾಲಿಗೆ ಶಿಕ್ಷಣವು ದುಬಾರಿಯಾಗುವುದು ಮಾತ್ರವಲ್ಲ, ಅದನ್ನು ಪಡೆಯಬಲ್ಲವರಿಗೂ ಅದು ಸಾರ್ಥಕವಾದ ಶಿಕ್ಷಣವಾಗಿರುವುದಿಲ್ಲ. ಮಾರುಕಟ್ಟೆ ವಸ್ತುವಾದ ಶಿಕ್ಷಣಕ್ಕೆ ಮಾರುಕಟ್ಟೆಯ ದೃಷ್ಟಿಕೋನ ಮಾತ್ರ ಇರುತ್ತದೆ. ಆಗ ವಿದ್ಯಾರ್ಥಿ ಅಧ್ಯಾಪಕರ ಸಂಬಂಧ, ಸಂಶೋಧನೆಗಳ ದಿಕ್ಕು, ಶಿಕ್ಷಣದ ಉದ್ದೇಶಗಳೆಲ್ಲವೂ ಅಸಭ್ಯವಾಗುತ್ತವೆ. ಸಾಮಾಜಿಕ ಅಸಮಾನತೆ ತೀವ್ರವಾಗುತ್ತದೆ. ಬದುಕಿನ ವೈವಿಧ್ಯತೆ ಮತ್ತು ಸೌಂದರ್ಯಗಳು ನಾಶವಾಗುತ್ತವೆ. ಶಿಕ್ಷಣದ ವ್ಯಾಪಾರವು ಯುವಜನರನ್ನು ಇತಿಹಾಸದಿಂದ, ವ್ಯಕ್ತಿಯನ್ನು ಸಮಾಜದಿಂದ ಬೇರ್ಪಡಿಸಿ ಮನುಷ್ಯರನ್ನು ಅಮಾನವೀಯಗೊಳಿಸುತ್ತದೆ. ಜಗತ್ತಿನಾದ್ಯಂತ ಶೈಕ್ಷಣಿಕ ಸಮುದಾಯಗಳು ಇದನ್ನು ಅರ್ಥಮಾಡಿಕೊಂಡು ಆರೋಗ್ಯ ಮತ್ತು ಶಿಕ್ಷಣವನ್ನು ಮಾರಾಟದ ವಸ್ತುವಾಗಿಸುವುದನ್ನು ವಿರೋಧಿಸುತ್ತಿವೆ. ಆದರೆ ಭಾರತ ಸರ್ಕಾರಕ್ಕೆ ಈ ಬಗ್ಗೆ ಯಾವ ಕಾಳಜಿಯೂ ಇಲ್ಲ. ಶೈಕ್ಷಣಿಕ ವಲಯ ಮತ್ತು ರಾಜಕೀಯ ಕ್ಷೇತ್ರಗಳು ಈ ಕಾಳಜಿಗಳನ್ನು ತೀವ್ರವಾಗಿ ಪರಿಗಣಿಸಿ WTOಗೆ ನೀಡಿರುವ ಪ್ರಸ್ತಾವನೆಯನ್ನು ಹಿಂತೆಗೆದುಕೊಂಡು ಮುಂದಿನ ದಿನಗಳಲ್ಲಿ GATS-WTO ಗೆ ಬದ್ಧವಾಗದಂತೆ ತಡೆಬಲ್ಲವೇ? ಎಂಬುದಷ್ಟೇ ನಮ್ಮೆದುರಿಗಿರುವ ಪ್ರಶ್ನೆ.

(ಕೃಪೆ: ***ಜನತಾ***, ಡಿಸೆಂಬರ್, ೬ ಮತ್ತು ೧೩)

೨ನೇ ಪುಟದಿಂದ)

ಬ್ಯಾಂಕ್ ರಾಜಕಾರಣಕ್ಕೆ ಅಂಟಿಕೊಂಡ ಪಕ್ಷಗಳಿಂದ ಇದು ಸಾಧ್ಯವಿಲ್ಲ. ಇಂಥ ಸಂದರ್ಭದಲ್ಲಿ ಮಾಧ್ಯಮಗಳು, ಬರಹಗಾರರು, ಸಾರ್ವಜನಿಕರು ಒಗ್ಗಟ್ಟಾಗಿ ಒತ್ತಡ ಹೇರುವಂತಾಗಬೇಕು. ಹಾಗೇ, ಮೀಸಲಾತಿಯ ಅನಿವಾರ್ಯತೆಯನ್ನು ಮೇಲ್ವರ್ಗದ ಸಮುದಾಯಗಳಿಗೆ ಮನವರಿಕೆ ಮಾಡಿಕೊಡುವುದೂ ಅಷ್ಟೇ ಮುಖ್ಯ. ಈ ವಿಷಯವಾಗಿ ಹೆಚ್ಚು ಹೆಚ್ಚು ಚರ್ಚೆಗಳು ಮುದ್ರಣ ಮತ್ತು ಟಿ.ವಿ ಮಾಧ್ಯಮಗಳೆರಡರಲ್ಲೂ ನಡೆಯಬೇಕಿದೆ.

–ಎನ್.ಎಂ. ಕುಲಕರ್ಣಿ, ಹೆಗ್ಗೋಡು

ಮೀಸಲಾತಿ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸುತ್ತಾ ತುಮಕೂರಿನ ಡಾ. ನಿತ್ಯಾನಂದ ಶೆಟ್ಟಿಯವರು ಮೀಸಲಾತಿಯನ್ನು ವಿಸರ್ಜಿಸುವ ಮುನ್ನ ಜಾತಿ ವ್ಯವಸ್ಥೆಯನ್ನು ವಿಸರ್ಜಿಸುವ ಎಂದು ಯಾರೂ ಹೇಳುತ್ತಿಲ್ಲ ಎನ್ನುತ್ತಾರೆ. ಮೀಸಲಾತಿಯನ್ನು ಸರ್ಕಾರ ಒಂದು ಸಂವಿಧಾನ ತಿದ್ದುಪಡಿ ಮೂಲಕ ವಿಸರ್ಜಿಸಬಹುದಾದಂತೆ ಜಾತಿ ವ್ಯವಸ್ಥೆಯನ್ನು ವಿಸರ್ಜಿಸಲಾಗುವುದಿಲ್ಲ ಎಂಬುದು ಅವರಿಗೆ ಗೊತ್ತಿರಬೇಕು. ಇನ್ನು ಅವರು ಜಿಲ್ಲಾಧಿಕಾರಿ ಹುದ್ದೆ ಕೊಡುವುದಾದರೆ ಮಾದಿಗರಾಗಲು ಎಷ್ಟು ಜನ ತಯಾರಿದ್ದಾರೆ ಎಂದು ಕೇಳಿದ್ದಾರೆ. ಅವರು ಯಾರನ್ನಾದರೂ ಜಿಲ್ಲಾಧಿಕಾರಿಯನ್ನಾಗಲೀ, ಮಾದಿಗರನ್ನಾಗಲೀ ಮಾಡಲು ಶಕ್ತರಿದ್ದರೆ ಸಾವಿರಾರು ಜನ ಅದಕ್ಕೆ ತಯಾರಿದ್ದಾರೆ. ಇಂತಹ ಹುಚ್ಚು ಕುದುರೆ ಮಾತುಗಳಿಂದ ಮೀಸಲಾತಿ ಜಾರಿಯೂ ನೇರ್ಪಾಗುವುದಿಲ್ಲ, ಜಾತಿಯೂ ಹೋಗುವುದಿಲ್ಲ.

–ಆರ್. ಮಂಜುನಾಥ ಸ್ವಾಮಿ, ಮೈಸೂರು

ಮೀಸಲಾತಿ ಕುರಿತ ನಿಮ್ಮ ಪ್ರಶ್ನೆಗಳಿಗೆ ಓರ್ವ ದಲಿತ ವ್ಯಕ್ತಿಯೂ ಉತ್ತರಿಸಿಲ್ಲ ಎಂಬ ನಿಮ್ಮ ಮಾತು, ಜಾತಿ ಮೀಸಲಾತಿಯು ಇಂದು ಹೇಗೆ ಒಂದು ಪಟ್ಟಭದ್ರ ಹಿತಾಸಕ್ತಿಯಾಗಿದೆ ಎಂಬುದನ್ನಷ್ಟೇ ತೋರಿಸುತ್ತದೆ.

–ಎಂ. ಆರ್. ಜಯಚಂದ್ರ, ಚಿತ್ರದುರ್ಗ

ಪತ್ರಿಕೆಯನ್ನು ನಾನು ತಪ್ಪದೇ ಓದುತ್ತಾ ಇದ್ದೇನೆ. ಲೇಖನಗಳು ಮೌಲಿಕವಾಗಿವೆ. ಪತ್ರಿಕೆಯ ವಿನ್ಯಾಸದಲ್ಲಿ ಬದಲಾವಣೆ ತಂದರೆ ಉತ್ತಮ. ಕೇವಲ ಅಕ್ಷರಗಳು ತುಂಬಿದ ಪುಟಗಳನ್ನು ನೋಡುವಾಗ ಏಕತಾನತೆ ಉಂಟಾಗುತ್ತದೆ.

–ಬಿ.ಸುರೇಶ, ಬೆಂಗಳೂರು

ಚಿಕ್ಕಂದಿನಿಂದ ಸಮಾಜವಾದದ ಬೆನ್ನುಹತ್ತಿ ಈಗ ಮುದುಕನಾಗಿದ್ದೇನೆ. ಆದರೆ ಸಮಾಜವಾದದ ಸುದ್ದಿ ಕೇಳಿದರೆ ಈಗಲೂ ಮನಸ್ಸು ಅಲ್ಲಿಗೆ ಓಡುತ್ತದೆ!

–ಎಂ.ಜಿ. ಹೆಗ್ಡೆ, ಮುಂಬೈ


ಕಳೆದ ಸಂಚಿಕೆಯಲ್ಲಿನ ನನ್ನ ಪತ್ರದಲ್ಲಿ ಸಂತುಲಿತ ಎಂಬ ಶಬ್ದ ಸಂಕುಚಿತ ಎಂದು ಮುದ್ರಿತವಾಗಿಬಿಟ್ಟಿದೆ. ಇದಕ್ಕೆ ನನ್ನ ಗೀಚು ಕೈಬರಹವೇ ಕಾರಣವಿರಬೇಕು!

–ಎಂ. ಪ್ರಭಾಕರ ಜೋಷಿ, ಮಂಗಳೂರು

ಮಲೆನಾಡ ಗಾಂಧಿ ಎಂದೇ ಪ್ರಸಿದ್ಧರಾದ ಮಾಜಿ ಶಿಕ್ಷಣ ಮಂತ್ರಿ ಎಚ್.ಜಿ. ಗೋವಿಂದೇಗೌಡ ಮತ್ತು ಶಿರಹಟ್ಟಿಯ ಪ್ರಯೋಗಶೀಲ ಸಾವಯವ ಕೃಷಿಕ ಡಿ.ಡಿ. ಭರಮಗೌಡರ ನಿಧನಕ್ಕೆ ಪತ್ರಿಕೆ ತನ್ನ ಶ್ರದ್ಧಾಂಜಲಿ ಸಲ್ಲಿಸುತ್ತದೆ–ಸಂ

ಪ್ಯಾರಿಸ್ ಹವಾಮಾನ ಒಪ್ಪಂದ: ಎಷ್ಟು ಸಾಧು? ಎಷ್ಟು ಸಾಧ್ಯ?

–ಡಾ. ಟಿ.ಎಸ್.ಚನ್ನೇಶ್



ಪ್ಯಾರಿಸ್ ಹವಾಮಾನ ಸಮಾವೇಶದಲ್ಲಿ ಹಾಜರಿದ್ದ ಜಾಗತಿಕ ನಾಯಕರು

ನಮ್ಮ ಪರಿಸರ, ಭೂಮಿಯ ಹಿತ ಕುರಿತ ಜಾಗತಿಕ ಮಾತುಕತೆಗಳಿಗೆ ೨೦ ವರ್ಷ ತುಂಬಿವೆ. ೧೯೯೨ರಲ್ಲಿ ಮೊದಲ ಬಾರಿಗೆ ಬ್ರೆಜಿಲ್‌ನ ರಿಯೋ ಡಿ'ಜನೈರೊನಲ್ಲಿ ಮೊದಲ ಸಮಾವೇಶ ಜರುಗಿತ್ತು. ಅಲ್ಲಿಂದ ಇಲ್ಲಿಯವರೆಗೂ ೨೧ ಸಮಾವೇಶಗಳು ನಡೆದಿವೆ. ಹಾಗೆ ನೋಡಿದರೆ ೧೯೭೨ರಲ್ಲಿ ಸ್ವೀಡನ್‌ನ ಸ್ಟಾಕ್‌ಹೋಂನಲ್ಲಿ ನಡೆದ ಮಾತುಕತೆ, ಪರಿಸರ ಮತ್ತು ಅಭಿವೃದ್ಧಿಯ ಸಂಬಂಧ ಕುರಿತ ಚರ್ಚೆಯ ಮೊದಲ ಪ್ರಯತ್ನ ಎನ್ನಬಹುದು. ನಂತರ ಈ ಮಾತುಕತೆ ೯೨ರ ನಂತರ ರಿಯೋ ಡಿ'ಜನೈರೊನಲ್ಲಿ ಆರಂಭವಾದ 'ಹವಾಮಾನ ವೈಪರೀತ್ಯ' ಕುರಿತ ಮಾತುಕತೆಗಳೆಂದೇ ಪ್ರಸಿದ್ಧವಾದ ಜಾಗತಿಕ ಮಾತುಕತೆಗಳಲ್ಲಿ ಮುಂದುವರೆಯಿತು. ಕಳೆದ ನವೆಂಬರ್ ೩೦ ರಿಂದ ಡಿಸೆಂಬರ್ ೧೨ ರವರೆಗೆ ಪ್ಯಾರಿಸ್‌ನಲ್ಲಿ ನಡೆದ ಅಂತಿಮ ಸುತ್ತಿನ ಮಾತುಕತೆ ಫಲಪ್ರದವಾಗಿದೆ ಎಂದು ಮಾಧ್ಯಮಗಳು ವರದಿ ಮಾಡಿದ್ದರೆ, ಪರಿಸರ ಕಾಳಜಿಯುಳ್ಳ ಜಾಗತಿಕ ಸಮೂಹ ಇಲ್ಲಿ ಬರಲಾಗಿರುವ ಒಪ್ಪಂದದ ಮುಖ್ಯಾಂಶಗಳ ಸುಸೂತ್ರತೆಯ ಬಗೆಗೆ ಅನುಮಾನ ವ್ಯಕ್ತಪಡಿಸಿರುವುದೂ ನಿಜ. ಈ ಪ್ಯಾರಿಸ್ ಒಪ್ಪಂದದಲ್ಲಿ ಐದು ಪ್ರಮುಖ ಅಂಶಗಳನ್ನು ಗುರುತಿಸಿ ಈ ಕೆಳಗಿನಂತೆ ವಿವರಿಸಬಹುದಾಗಿದೆ.

೧. ಜಾಗತಿಕ ತಾಪಮಾನದಲ್ಲಿ ಏರಿಕೆಯ ಮಿತಿ ೨° ಸೆಂ. ನಷ್ಟು ಮಾತ್ರ : ಕೈಗಾರಿಕಾ ಕ್ರಾಂತಿಗೂ ಮೊದಲಿನ ಭೂಮಂಡಲದ ತಾಪಮಾನಕ್ಕೆ ಹೋಲಿಸಿದಲ್ಲಿ ಅದಕ್ಕಿಂತಾ ೨ ಸೆ. ಅಷ್ಟೇ ಹೆಚ್ಚಾಗಬಹುದು. ಅದಕ್ಕಿಂತಲೂ ಯಾವುದೇ ಕಾರಣಕ್ಕೂ ಹೆಚ್ಚಾಗದಂತೆ ನೋಡಿಕೊಳ್ಳಬೇಕು. ಅದು ೧.೫ ಸೆ ಇದ್ದರೆ ಇನ್ನೂ ಒಳ್ಳೆಯದು. ನಮ್ಮ ಭೂಮಿಯ ಒಟ್ಟಾರೆ ತಾಪಮಾನದಲ್ಲಿ ೨ ಸೆ. ಹೆಚ್ಚಾದರೆ ಅದು ಜೀವ ಮಾರಕ ಎಂಬುದು ಪ್ರಮುಖ ಅಂಶ. ಇದಕ್ಕೆ ಗಡುವು ೨೦೩೦. ಈಗಾಗಲೆ ಹೆಚ್ಚೂ ಕಡಿಮೆ ೧ ಡಿಗ್ರಿ ಹೆಚ್ಚಾಗಿದ್ದು, ಜೀವ–ಪರಿಸರ ಕುರಿತ ಆತಂಕಗಳು ಸೃಷ್ಟಿಯಾಗಿವೆ.

೨. ಇದು ಮೊಟ್ಟ ಮೊದಲ ಸಾರ್ವತ್ರಿಕ ಹವಾಮಾನ ಒಪ್ಪಂದ : ಈ ಹಿಂದಿನ ಮಾತುಕತೆಗಳಲ್ಲಿ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಇಂಗಾಲದ ಹೊರ ಸೂಸುವಿಕೆಯ ಮಿತಿಯಲ್ಲಿ ವಿನಾಯಿತಿಗಳಿಗೆ ಅವಕಾಶವಿದ್ದರೆ, ಇದು ಎಲ್ಲರನ್ನೂ ಒಳಗೊಂಡ ಒಪ್ಪಂದವಾಗಿದೆ.

೩. ಬಡ ರಾಷ್ಟ್ರಗಳಿಗೆ ಸಹಾಯ ಹಸ್ತ : ಮುಂದುವರಿದ ರಾಷ್ಟ್ರಗಳು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಿಗೆ ವಾರ್ಷಿಕ ಸುಮಾರು ೧೦೦ ಶತಕೋಟಿ ಡಾಲರ್‌ಗಳ ನೆರವು ನೀಡಬೇಕು. ಇದನ್ನು ಆ ರಾಷ್ಟ್ರಗಳು ತಮ್ಮ ಪರಿಸರ ಸ್ನೇಹಿ ತಂತ್ರಜ್ಞಾನಗಳ ಅಭಿವೃದ್ಧಿಗೆ ಬಳಸಬೇಕು.

೪. ಹಸಿರುಮನೆ ಅನಿಲಗಳ ಮಿತಿಗಳ ಪ್ರಕಟಣೆ: ಎಲ್ಲಾ ರಾಷ್ಟ್ರಗಳೂ ತಮ್ಮ ವಾತಾವರಣದ ಹಸಿರು ಮನೆ ಅನಿಲಗಳ ಹೊರಸೂಸುವಿಕೆ ಮತ್ತಿತರ ಸಂಗತಿಗಳ ವಾಸ್ತವಗಳನ್ನು ಕಡ್ಡಾಯವಾಗಿ ಪ್ರಕಟಿಸಬೇಕು. ಇವನ್ನು ೨೦೨೩ರ ನಂತರ ಪ್ರತಿ ಐದು ವರ್ಷಗಳಿಗೊಮ್ಮೆ ವಿಮರ್ಶೆಗೆ ಒಳಪಡಿಸಲಾಗುವುದು.

೫. ೨೦೫೦ರ ವೇಳೆಗೆ ಇಂಗಾಲದ ತಟಸ್ಥೀಕರಣಕ್ಕಾಗಿ ಕ್ರಮಗಳು : ಇದೊಂದು ರೀತಿಯ ಆದರ್ಶ ಕ್ರಮ. ಅಂದರೆ ಅದೆಷ್ಟು ಇಂಗಾಲವು ಮರಗಿಡಗಳ ಮತ್ತು ಸಾಗರಗಳ ಹೀರಿಕೆಯಲ್ಲಿ ಬಳಕೆಯಾಗುವುದೋ ಅಷ್ಟೇ ಇಂಗಾಲವನ್ನು ಉರಿಸುವುದು. ಇಂಗಾಲ ಉತ್ಪಾದನೆ ಮತ್ತು ಬಳಕೆಯಲ್ಲಿ ಸಮತೋಲನವಿರುವಂತೆ ನೋಡಿಕೊಳ್ಳುವುದು.

ಪ್ಯಾರಿಸ್ ಸಮಾವೇಶದಲ್ಲಿ ಭಾಗವಹಿಸಿದ್ದ ಎಲ್ಲಾ ೧೯೩ ರಾಷ್ಟ್ರಗಳೂ ಒಪ್ಪಂದಕ್ಕೆ ಸಹಿ ಹಾಕಿವೆ. ೨೦೩೦ರ ವೇಳೆಗೆ ಎಲ್ಲಾ ಗುರಿಗಳು ತಲುಪಿ ಸಾರ್ವತ್ರಿಕ ಸಾಧನೆಯಾಗುವ ಆಶಯ ಸ್ವಾಗತಾರ್ಹವೇ. ಆದರೆ ೨೦೩೦ರಷ್ಟೊತ್ತಿಗೆ ಅಂದರೆ ಇನ್ನು ೧೪ ವರ್ಷಗಳಲ್ಲಿನ ಒಟ್ಟಾರೆ ಜನಸಂಖ್ಯೆಯ ಬೆಳವಣಿಗೆ, ಹೆಚ್ಚಾಗುವ ವಾಹನಗಳು, ಕೈಗಾರಿಕೆಗಳು ಮತ್ತಿತರ ಇಂಗಾಲ ಬಳಕೆಯ ಮಾರ್ಗಗಳ ತಡೆಗೆ ಉಪಾಯಗಳು ಯಾವುವು ಎಂಬುದು ದೊಡ್ಡ ಪ್ರಶ್ನೆ.


ಇನ್ನು ಈ ಒಪ್ಪಂದದ ಪ್ರಕಾರ ಪ್ರತಿ ದೇಶವೂ ಈ ಒಪ್ಪಂದದ ಗುರಿಸಾಧನೆಗೆ ಅಳವಡಿಸಿಕೊಳ್ಳುವ ಕಾರ್ಯಕ್ರಮಗಳನ್ನು ಇನ್ನೂ ಸಿದ್ಧಪಡಿಸಿ ಕೊಡಬೇಕಿದೆ. ಹಾಗಾಗಿ ಯಾವ ದೇಶ ತನ್ನ ಎಷ್ಟು ಐಷಾರಾಮಿ ಜೀವನಶೈಲಿಯನ್ನು ಬಿಟ್ಟುಕೊಡಲು ತಯಾರಿದೆ ಎಂಬುದನ್ನು ಕಾದು ನೋಡಬೇಕಿದೆ.

ಬಡ ರಾಷ್ಟ್ರಗಳಿಗೆ ಸಹಾಯವನ್ನು ಮುಂದುವರಿದ ರಾಷ್ಟ್ರಗಳು ಕೊಡಬಹುದೇನೋ. ಆದರೆ ಅದನ್ನು ಸ್ವಹಿತಾಸಕ್ತಿಯನ್ನು ಬಿಟ್ಟು ಮಾಡಬಲ್ಲವೇ ಎಂಬುದು ಪ್ರಶ್ನೆ. ಬಡ ರಾಷ್ಟ್ರಗಳಿಗೆ ತಾಂತ್ರಿಕ ನೆರವಿನ ಲೆಕ್ಕದಲ್ಲಿ ಅವುಗಳನ್ನು ತಮ್ಮ ಉತ್ಪಾದನೆಯ ಮಾರುಕಟ್ಟೆಗಳಾಗಿ ಮಾಡಿಕೊಳ್ಳುವ ಹುನ್ನಾರಗಳನ್ನು ನಿರ್ಲಕ್ಷಿಸುವಂತಿಲ್ಲ. ಜೊತೆಗೆ, ನೀಡಲು ಒಪ್ಪಲಾಗಿರುವ ನೂರು ಶತಕೋಟಿ ಡಾಲರ್‌ಗಳ ನಿಧಿಗೆ ಯಾರ್ಯಾರ ಕೊಡುಗೆ ಎಷ್ಟು ಎಂದು ತೀರ್ಮಾನವಾಗಿಲ್ಲ!

ಹಸಿರು ಮನೆಯ ಅನಿಲಗಳ ಹೊರಸೂಸನ್ನು ದಾಖಲು ಮಾಡುತ್ತಾ ಕಾಲ ಕಾಲಕ್ಕೆ ಪ್ರಕಟಿಸುವ ಜವಾಬ್ದಾರಿಯನ್ನು ಪ್ರತಿ ರಾಷ್ಟ್ರಕ್ಕೂ ವಹಿಸಲಾಗಿದೆ. ಇದಕ್ಕೆ ಸಾಕಷ್ಟು ದುಬಾರಿ ಮಾಪಕ ಮುಂತಾದ ಸಾಧನ–ಸಲಕರಣೆಗಳ ಅವಶ್ಯಕತೆಯನ್ನು ಪ್ರಬಲ ರಾಷ್ಟ್ರಗಳು ದುರ್ಬಲ ರಾಷ್ಟ್ರಗಳ ಮೇಲೆ ಹೇರುವ ಒತ್ತಡ ರಾಜಕಾರಣವೂ ಇಲ್ಲಿ ಸಾಧ್ಯ.. ಈಗಾಗಲೆ ನಮ್ಮ ಆರೋಗ್ಯದ ನಿರ್ವಹಣೆಗಾಗಿ ಹೈಟೆಕ್ ಡೈಯಾಗ್ನಾಸ್ಟಿಕ್ ಪದ್ಧತಿಗಳ ಒತ್ತಡಕ್ಕೆ ನಾವು ಸಿಕ್ಕಿಲ್ಲವೆ, ಹಾಗೆ!

ಇನ್ನು ಕೊನೆಯದಾಗಿ ಇಂಗಾಲದ ತಟಸ್ಥೀಕರಣದ ಗುರಿ. ಇದೊಂದು ಪೂರ್ಣ ಭ್ರಮಾತ್ಮಕ ಆದರ್ಶ ಸಂಗತಿ. ಹೇಳುವುದಕ್ಕೆ ಮಾತ್ರವೇ ಹಿತವಾಗಿರುವ ಸಂಗತಿ. ಈಗಿರುವ ಪರಿಸ್ಥಿತಿಯಲ್ಲೇ ಇಷ್ಟೊಂದು ಹೊರಸೂಸು ನಡೆಯುತ್ತಿರುವಾಗ, ೨೦೫೦ಕ್ಕೆ ಅದು ಮತ್ತೂ ಹೆಚ್ಚಾಗಿರುವ ಸಾಧ್ಯತೆಗಳಿವೆ ಎಂಬುದು ಪ್ರಶ್ನೆ! ಆಗಿನ ಹೊರ ಸೂಸನ್ನು ತಡೆಯಲು ಈಗಿರುವುದಕ್ಕಿಂತಲೂ ಹೆಚ್ಚು ಹಸಿರು ನೆಲದ –ಕಾಡಿನ– ಅವಶ್ಯಕತೆ ಖಂಡಿತಾ ಇರುತ್ತದೆ. ಆದರೆ ಈಗಲೇ ನೆಲವನ್ನು ಬರಿದು ಮಾಡುತ್ತಾ ಸಾಗಿರುವ ಅಭಿವೃದ್ಧಿ ಚಟುವಟಿಕೆಗಳ ಹಿನ್ನೆಲೆಯಲ್ಲಿ ಇದನ್ನು ಸಾಧ್ಯ ಮಾಡುವುದು ಹೇಗೆ? ಹಾಗಾಗಿ ಇಂಗಾಲವೇ ಹೊರಸೂಸದ ಶಕ್ತಿ ಮೂಲವಾಗಿ ಪರಮಾಣು ಶಕ್ತಿಯ ಹೇರಿಕೆಯಾಗಬಹುದಾ? ಇದು ಬಹುದೊಡ್ಡ ಮತ್ತು ಆತಂಕಕಾರಿ ಪ್ರಶ್ನೆ!

ಇಷ್ಟೆಲ್ಲ ಪ್ರಶ್ನೆ, ಅನುಮಾನ ಆತಂಕಗಳ ನಡುವೆಯೂ, ಸಂತೋಷದ ಒಂದು ಮುಖ್ಯ ಸಂಗತಿ ಎಂದರೆ ಮಾನವ, ಹವಾಮಾನ ವೈಪರೀತ್ಯಗಳು ಮನುಷ್ಯ ನಿರ್ಮಿತವೆಂದು ಅರಿತು ಅದನ್ನು ಸರಿಪಡಿಸಬೇಕಾದ ಅಗತ್ಯವನ್ನು ಕೊನೆಗೂ ಮನಗಂಡಿದ್ದಾನೆ ಎಂಬುದು.



(ಕೃಷಿ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ ಪಡೆದು, ಮಣ್ಣು ವಿಜ್ಞಾನದಲ್ಲಿ ಸಂಶೋಧನೆಗೈದು ಸ್ವಲ್ಪ ಕಾಲ ಕೃಷಿ ವಿಜ್ಞಾನ ವಿದ್ಯಾಲಯ ಹಾಗೂ ಕೃಷಿ ವಿಜ್ಞಾನ ಸಂಶೋಧನಾ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸಿರುವ ಚನ್ನೇಶ್ ವಿಜ್ಞಾನ ಅಂಕಣಕಾರರೂ ಹೌದು)

ಯುವ ಸಮಾಜವಾದಿ ಚಿಂತನ ವೇದಿಕೆ

ಕಣ್ಣ ಮುಂದಿರುವ ಸಂಕಟಗಳು ಮತ್ತು ಜನಪ್ರಿಯ ಪ್ರತಿಮೆಗಳು

– ಕಿರಣ್ ಮಾರಶೆಟ್ಟಿಹಳ್ಳಿ

ಅನಿಸಿದ್ದನ್ನ ಮಾತಿನ ಮೂಲಕ ಹೇಳುವುದು ಮನುಷ್ಯ ಕಂಡುಕೊಂಡಿರುವ ಒಂದು ಅನನ್ಯ ಅಭಿವ್ಯಕ್ತಿ ಕ್ರಮ. ಬೇರೆ ಪ್ರಾಣಿ ಪ್ರಬೇಧಗಳಿಗೆ ಸಾಧ್ಯವಾಗದ ಮಾತಿನ ಈ ಅಭಿವ್ಯಕ್ತಿಯನ್ನು ಭಾಷೆಯ ಮೂಲಕ ಸಾಕಾರಗೊಳಿಸಿಕೊಂಡಿರುವುದು ಮಾನವ ವಿಕಾಸ ಚರಿತ್ರೆಯಲ್ಲಿ ಬಹುಮುಖ್ಯ ಅಂಶ. ಅನಿಸಿದ್ದನ್ನ ಹೇಳಬೇಕಾದರೆ ಸುಮ್ಮನೆ ಮಾತು ಆಡಲಾಗುವುದಿಲ್ಲ. ನಮ್ಮ ಮುಂದೆ ಒಂದು ಘಟನೆ ಅಥವಾ ವಿದ್ಯಮಾನ ಕಾಣಬೇಕು. ಅದು ಇಂದ್ರಿಯಗಳ ಮೂಲಕ ನಮ್ಮ ಬುದ್ಧಿ–ಭಾವಗಳನ್ನು ಪ್ರವೇಶಿಸಿ ಅಲ್ಲಿ ಮಂಥನಕ್ಕೊಳಪಡಬೇಕು. ಇಷ್ಟೆಲ್ಲ ಪ್ರಕ್ರಿಯೆಗಳನ್ನು ಹಾದು ಅನಿಸಿಕೆಯಾಗಿ ಹೊರಬರಬೇಕಾದ ಮಾತು ಆ ವಿದ್ಯಮಾನ ಘಟಿಸಿದ ಕಾಲಕ್ಕೆ ಅಧೀನವಾಗಿರುತ್ತದೆ. ಬಹಳಷ್ಟು ಸಂದರ್ಭದಲ್ಲಿ ಹೀಗೆ ಅನಿಸಿದ ತಕ್ಷಣ ಹೊರಬೀಳುವ ಮಾತುಗಳು ಕ್ಷಣಿಕವಾಗಿರುತ್ತವೆಯಾದರೂ ಕೆಲವು ವಿಶಿಷ್ಟ ವ್ಯಕ್ತಿಗಳ ಮಾತುಗಳು ನಮ್ಮ ಇತಿಹಾಸ ಮತ್ತು ಪರಂಪರೆಯ ಜ್ಞಾನ–ಮೌಢ್ಯಗಳೆಡೆಗೆ ಬೊಟ್ಟು ಮಾಡಿ ಮುಂದೆ ಸಾಗಬೇಕಾದ ಅರಿವಿನ ಹಾದಿಯನ್ನು ತೋರುವಷ್ಟು ದಾರ್ಶನಿಕವಾಗಿರುತ್ತವೆ. ಇಂಥವರು ದೇಶ–ಧರ್ಮಗಳ ಗಡಿಯನ್ನು ಮೀರಿ ಇಡೀ ಮನುಕುಲದ ಮಾರ್ಗದರ್ಶಕರಾಗುತ್ತಾರೆ. ಆದರೆ ಎಲ್ಲ ಕಾಲದಲ್ಲಿಯೂ ಸಕಾಲಿಕವಲ್ಲದ, ಅಕಾಲಿಕ ಮಾತುಗಳನ್ನೇ ಆಡುತ್ತ ಹಳೆಯ ಕಾಲದ ಗೊಡ್ಡು ಚಿಂತನೆಗಳನ್ನೇ ಪ್ರಚಾರ ಮಾಡುತ್ತ ಜನರ ಬದುಕನ್ನು ಸಂಕಷ್ಟಕ್ಕೀಡುಮಾಡುವ ದೊಡ್ಡ ವರ್ಗವೇ ಕೆಲಸ ಮಾಡುತ್ತಿರುತ್ತದೆ. ಇಂಥ ವರ್ಗಗಳಿಂದ ನಾವು ಬದುಕುವ ಕಾಲಕ್ಕೆ ಅಗತ್ಯವಾದ ಮಾತನ್ನು ಆಡುವವರು ಸದಾ ಪ್ರತಿರೋಧ ಎದುರಿಸುತ್ತಿರಬೇಕಾಗುತ್ತದೆ.

ಮಾತು ಇಲ್ಲಿ ಸಾಂಕೇತಿಕ. ಮಾತಿಗೆ ಹೊರತಾದ ಮೌನ, ಬರಹ, ಚಿತ್ರ, ಪ್ರದರ್ಶನ ಕಲೆಗಳು ಎಲ್ಲವನ್ನೂ ಅಭಿವ್ಯಕ್ತಿಯ ವಿವಿಧ ರೂಪಗಳು ಎಂದು ಪರಿಗಣಿಸುವುದಾದರೆ ಈ ಎಲ್ಲವೂ ಕಾಲಕ್ಕೆ ಅಧೀನವಾದುವುಗಳೇ. ಇವುಗಳಿಗಿರುವ ಸಮಕಾಲೀನತೆಯ ಗುಣವೇ ಇವುಗಳ ಅಂತಃಸತ್ವ. ಬೇರೆ – ಬೇರೆ ಸಂದರ್ಭಗಳಲ್ಲಿ ನಮ್ಮನ್ನು ಇಟ್ಟು ಬದುಕಿನ ಬೆರಗನ್ನು ಮತ್ತು ಸಂಕೀರ್ಣತೆಯನ್ನು ನೋಡಿಕೊಳ್ಳಲು ಅನುಕೂಲವಾಗುವ ಕನ್ನಡಿಗಳು. ಇವತ್ತಿನ ಭಾರತದ ಸಂದರ್ಭದಲ್ಲಿ ಈ ಅಭಿವ್ಯಕ್ತಿ ಮಾಧ್ಯಮಗಳು ಸಂಸ್ಕೃತಿ–ಧರ್ಮ–ನೈತಿಕತೆಯ ನೆಪದಲ್ಲಿ ಇನ್ನಿಲ್ಲದ ಬೆದರಿಕೆಯನ್ನು ಎದುರಿಸುತ್ತಿವೆ. ಗೋವಿಂದ ಪನ್ಸಾರೆ, ನರೇಂದ್ರ ದಾಬೋಲ್ಕರ್, ಡಾ.ಎಂ.ಎಂ. ಕಲಬುರ್ಗಿಯವರ ಹತ್ಯೆ ನಮ್ಮನ್ನು ದಿಗ್ಭ್ರಮೆಗೊಳಪಡಿಸಿವೆ. ಈ ಕಾಲಕ್ಕೆ ಬೇಕಾದ ಮಾತನ್ನಾಡಿದ್ದೇ ಈ ಹುತಾತ್ಮರು ಮಾಡಿದ ತಪ್ಪು. ಕನ್ನಡ ನಾಡಿನ ಬಹುದೊಡ್ಡ ಸಾಮಾಜಿಕ ಕ್ರಾಂತಿಯಾದ ಶರಣ ಚಳುವಳಿಯ ಮುಂದಾಳತ್ವ ವಹಿಸಿದ ಬಸವಣ್ಣ 'ಲಿಂಗೈಕ್ಯ'ರಾಗಿದ್ದನ್ನು ಹಾಗೆಯೇ ಮಹಾ ಮಾನವತಾವಾದಿ ಗಾಂಧೀಜಿಯವರ ಹತ್ಯೆಯನ್ನೂ ಅರಗಿಸಿಕೊಂಡು ಸಾಗಿಬಂದಿರುವ ನಮ್ಮ ಸಮಾಜ ಈ ಮೂವರ ಹತ್ಯೆಯನ್ನು ಕೂಡ ಮೆಲುಕು ಹಾಕಿಕೊಂಡು ಮುಂದೆ ಸಾಗುತ್ತದೆ. ಈ ರೀತಿಯ ಹತ್ಯೆಗಳಿಗೆ ಸಮರ್ಥನೆಗಳು ಆ ಕಾಲದಲ್ಲಿಯೂ ಇತ್ತು, ಮತ್ತೀಗ ಈ ಪರಂಪರೆ ಅಸಹ್ಯ ಹುಟ್ಟಿಸುವ ರೀತಿಯಲ್ಲಿ ಮುಂದುವರೆದಿದೆ. ಸಂವಿಧಾನದ ಆಶಯಗಳನ್ನು ಎತ್ತಿಹಿಡಿಯಬೇಕಾದ ಪ್ರಭುತ್ವವೇ ಹಾಗಾಗಿ ನಾವು ಈಗ ಪ್ರಶ್ನಿಸಿಕೊಳ್ಳಬೇಕಾಗಿರುವುದು ನಮ್ಮ ಕಾಲಕ್ಕೆ ಅಗತ್ಯವಾದ ಮಾತುಗಳನ್ನಾಡುವ ಇನ್ನೆಷ್ಟು ಮಹನೀಯರನ್ನು ಕಳೆದುಕೊಳ್ಳುತ್ತಾ ಹೋಗಬೇಕು ಎಂಬುದರ ಬಗ್ಗೆ..

ಇಂಥ ಪ್ರತಿಗಾಮಿ ಶಕ್ತಿಗಳು ಪದೇ ಪದೇ ಮೇಲುಗೈ ಸಾಧಿಸುತ್ತಿರುವುದು ಅವರು ತಮ್ಮನ್ನು ಸಮಾಜದ ನಡುವೆ ಸ್ಥಾಪಿಸಿಕೊಳ್ಳಲು ಜನರ ನಡುವಿನ ಜನಪ್ರಿಯ ಪ್ರತಿಮೆಗಳನ್ನು ಬಳಸಿಕೊಳ್ಳುತ್ತಿರುವ ಮೂಲಕ. ಜನಪ್ರಿಯ ಪ್ರತಿಮೆಗಳನ್ನು ತಮ್ಮ ಮುಖವಾಣಿಯನ್ನಾಗಿ ಮಾಡಿಕೊಳ್ಳುವ ಮೂಲಕ ಅವರ ಮಾತುಗಳನ್ನೇ ತಿರುಚುವ, ಗೌಣವಾಗಿಸುವ ತಂತ್ರಗಾರಿಕೆಯನ್ನು ಹಿಂದಿನಿಂದಲೂ ಈ ಗುಂಪುಗಳು ಮಾಡಿಕೊಂಡು ಬಂದಿವೆ. ಇದು ಚಿತ್ರದ ಮೂಲಕ ಮನದಲ್ಲಿ ಅಚ್ಚೊತ್ತಿ ಶಾಶ್ವತ ಪರಿಣಾಮ ಬೀರುವ ದೃಶ್ಯ ಮಾಧ್ಯಮದ ರೂಪಕ ಶಕ್ತಿಗೆ ಉದಾಹರಣೆ. ಕೇವಲ ಭಗತ್ ಸಿಂಗ್ ಮತ್ತು ವಿವೇಕಾನಂದರ ಭಾವಚಿತ್ರಗಳನ್ನು ಪೋಸ್ಟರ್‌ಗಳಲ್ಲಿ ಅಂಟಿಸಿಕೊಂಡು ಅವರಿಗೆ ವಿರುದ್ಧವಾದ ವಿಚಾರಗಳನ್ನೇ ಜನರಲ್ಲಿ ಪ್ರಚಾರ ಮಾಡುವಲ್ಲಿ ಯಶಸ್ವಿಯಾಗಿರುವ ಮಾದರಿಗಳು ನಮ್ಮ ಕಣ್ಣ ಮುಂದಿವೆ. ಜನರ ನಂಬಿಕೆಯ ಸಂಕೇತಗಳಾಗಿರುವ ರಾಮ–ಕೃಷ್ಣರು ನಮ್ಮ ಪರಂಪರೆಯಲ್ಲಿ ದೇವರುಗಳಾಗಿ ಒಳ್ಳೆಯದನ್ನು ಮಾಡಿದ್ದಕ್ಕಿಂತ ಹೆಚ್ಚಾಗಿ ವಿಘಟನೆಯನ್ನು ಮಾಡಲು ಬಳಕೆಯಾಗಿದ್ದೇ ಹೆಚ್ಚು. ನಮ್ಮ ಸಂದರ್ಭದಲ್ಲಿ ಶರಣರ ಶಿವ, ಸಂತ ಕಬೀರ ಕಂಡ ರಾಮನ ವ್ಯಕ್ತಿತ್ವದ ನೆಲೆಗಳು ಯಾವುವು ಎಂದು ಹುಡುಕಬೇಕು ಅನ್ನುವ ಮಟ್ಟಿಗೆ ಈಗಾಗಲೇ ಹೈಜಾಕ್ ಮಾಡಲಾಗಿದೆ. ಹಿಂದೂ ಧರ್ಮದಲ್ಲಿನ ಅಸ್ಪೃಶ್ಯತೆಯನ್ನು ಕಡೆವರೆಗು ಟೀಕಿಸಿ, ಬೌದ್ಧ ಧರ್ಮ ಸ್ವೀಕರಿಸಿದ ಅಂಬೇಡ್ಕರ್ ಅವರನ್ನು ಕೂಡ ಹಿಂದುತ್ವವಾದಿ ಎಂದು ಬಿಂಬಿಸುವಲ್ಲಿ ಪ್ರತಿಗಾಮಿ ಶಕ್ತಿಗಳು ಯಶಸ್ವಿಯಾಗುತ್ತಿವೆ.



ಗಾಂಧೀಜಿ ಕಲ್ಬುರ್ಗಿ ದಾಭೋಲ್ಕರ್ ಪನ್ಸಾರೆ

ಪುರಾಣ ಮತ್ತು ಇತಿಹಾಸದ ಕುರಿತು ನಿಖರವಾಗಿ ಅಲ್ಲದಿದ್ದರೂ ಸ್ಥೂಲವಾಗಿ ಅರಿವಿರುವ ಜನರು ಸಮುದಾಯದ ನಡುವೆ ಹೀಗೆ ತಪ್ಪಾಗಿ ಬಳಸಲ್ಪಡುವ ಪ್ರತಿಮೆಗಳನ್ನು ಗುರುತಿಸಿ ನಿರ್ಲಕ್ಷಿಸುತ್ತಾರೆ. ಆದರೆ ಈಗ ತಾನೆ ಜಗತ್ತಿನ ವಿದ್ಯಮಾನಗಳಿಗೆ ಕಣ್ಣು ತೆರೆದುಕೊಳ್ಳುತ್ತಿರುವ ಯುವ ಮನಸ್ಸುಗಳಿಗೆ ಶರಣರು, ಸಂತರು, ಮಾನವತಾವಾದಿಗಳು, ಹೋರಾಟಗಾರರು ಎಂದರೆ ಹೀಗೆ... ಅವರು ಯೋಚಿಸಿದ್ದೇ ಇದು...! ಅಂತ ಹಿಂದೂತ್ವಪರ ಸಂಘಟನೆಗಳು ಪ್ರಚುರಪಡಿಸಿದ್ದೇ ಸತ್ಯವಾಗಿ ತಲುಪಿದರೆ ಧರ್ಮ–ಜಾತಿ–ವರ್ಗ ತಾರತಮ್ಯರಹಿತ ಸಮಾಜ ನಿರ್ಮಿಸುವ ಕನಸು ಕಾಣುತ್ತಿರುವ ಸಮೂಹಕ್ಕೆ ದೊಡ್ಡ ನಷ್ಟ. ಹೀಗಾಗದಂತೆ ನೋಡಿಕೊಳ್ಳಬೇಕಾದ ಜವಾಬ್ದಾರಿ ನಮ್ಮ ಮೇಲಿದೆ. ಹಾಗಾಗಿ ಜೀವವಿರೋಧಿಗಳ ಸ್ವತ್ತಾಗಿಹೋಗಿರುವ ಸಾಂಸ್ಕೃತಿಕ ವ್ಯಕ್ತಿ–ಪ್ರತಿಮೆಗಳನ್ನು ಹೊಸ ರೂಪದಲ್ಲಿ, ಸಮೂಹ ಮಾಧ್ಯಮಗಳ ಮೂಲಕ ಶಕ್ತವಾಗಿ ಮತ್ತು ಸ್ಪಷ್ಟವಾಗಿ ಯುವ ಸಮೂಹದೆದುರು ನಾವು ಮುಂದಿಡಬೇಕಾಗಿದೆ. ಕನ್ನಡದಲ್ಲಿ ಆದಿಕವಿ ಪಂಪನಿಂದ ಹಿಡಿದು ಕುವೆಂಪುವರೆಗೆ ಪುರಾಣವನ್ನು ಚಿಕಿತ್ಸಕ ನೋಟದಿಂದ ಹೊಸದಾಗಿ ಕಟ್ಟಿದ ವಿವೇಕದ ಪರಂಪರೆಯೇ ಇದೆ. ನಮ್ಮ ಹೊಸ ಪೀಳಿಗೆಗೆ ಪುರಾಣವನ್ನು ಕಲಿಸುವುದದಿದ್ದರೆ ಈ ದೃಷ್ಟಿಯಿಂದಲೇ ಕಲಿಸೋಣ. ವಿಶಾಲವಾಗಿ ಚಿಂತಿಸುವ, ವಿವಿಧ ಆಯಾಮಗಳಿಂದ ಬದುಕನ್ನು ನೋಡುವ ಅರಿವು ಹೊಸ ಪೀಳಿಗೆಯದ್ದಾಗಲಿ. ವ್ಯಕ್ತಿ ಸ್ವಾತಂತ್ರ್ಯ, ಕ್ರಿಯಾಶೀಲತೆ, ಮುಕ್ತ ಬದುಕನ್ನು ಎದುರು ನೋಡುತ್ತಿರುವ ಹೊಸ ಪೀಳಿಗೆ ಖಂಡಿತವಾಗಿ ಈ ಪ್ರತಿಮೆಗಳ ಮೂಲಕ ತಲುಪುವ ವಿಚಾರಗಳನ್ನು ಸ್ವೀಕರಿಸುತ್ತದೆ. ಆದರೆ ಹಳೆಯ ಮಾದರಿಗಳಿಗೆ ಕಟ್ಟುಬೀಳದೆ ಹೊಸ ಮಾರ್ಗ–ತಂತ್ರಜ್ಞಾನಗಳ ಮೂಲಕ ಜನಪ್ರಿಯ ಪ್ರತಿಮೆಗಳ ಮೂಲಕ ಸಾಂಸ್ಕೃತಿಕ ವಿವೇಕವನ್ನು ತಲುಪಿಸುವ ಮಾರ್ಗಗಳನ್ನು ನಾವು ಬಳಸಿಕೊಳ್ಳಲು ಮುಂದಾಗಬೇಕು. ಈ ಹೊಸ ಹಾದಿ ಬಳಸುವಾಗ ಅದರ ಅಪಾಯಗಳು, ಸೂಕ್ಷ್ಮಗಳು ಹಾಗೂ ಪರಿಣಾಮಗಳ ಅರಿವು ಇರಬೇಕು. ಇಲ್ಲದಿದ್ದರೆ ನಮ್ಮ ಹಾದಿ ಕೂಡ ದಿಕ್ಕು ತಪ್ಪಬಹುದೆಂಬ ಎಚ್ಚರ ನಮ್ಮದಾಗಬೇಕು.



(ರಂಗಭೂಮಿಯಲ್ಲಿ ಕ್ರಿಯಾಶೀಲರಾಗಿ ಹಲವು ರಂಗತಂಡಗಳಲ್ಲಿ ನಟ, ನಿರ್ದೇಶಕ ಹಾಗೂ ತಂತ್ರಜ್ಞರಾಗಿ ದುಡಿದಿರುವ ಕಿರಣ್ ಚಲಚಿತ್ರ, ಸಾಹಿತ್ಯ ಮತ್ತು ಸಮೂಹ ಮಾಧ್ಯಮ ಕ್ಷೇತ್ರಗಳಲ್ಲೂ ಆಸಕ್ತಿ ಹೊಂದಿದ್ದಾರೆ)

ಸಮಕಾಲೀನ

ಒಂದು ಮಾಧ್ಯಮದ ಸಾವು?

ಕೆಲ ದಿನಗಳ ಹಿಂದೆ ನನ್ನ ತರುಣ ಮಿತ್ರರೊಬ್ಬರು ನನ್ನ ಬಗ್ಗೆ ಕುತೂಹಲದಿಂದ 'ನೀವು ಎಲ್ಲಿ ಸೇವೆ ಸಲ್ಲಿಸುತ್ತಿದ್ದಿರಿ?' ಎಂದು ಕೇಳಿದರು. ನಾನು 'ಆಕಾಶವಾಣಿಗೆ ಮುವ್ವತ್ತು ವರ್ಷ ಮಣ್ಣು ಹೊತ್ತಿದ್ದೇನೆ' ಎಂದೆ. ಆತ 'ಪರವಾ ಇಲ್ಲ ಸರ್, ಟೆಲಿಫೋನ್ ಇಲಾಖೆಯಲ್ಲಿದ್ದೂ ಇಷ್ಟೊಂದು ಸಾಂಸ್ಕೃತಿಕ ಆಸಕ್ತಿ ಬೆಳೆಸಿಕೊಂಡಿದ್ದೀರಲ್ಲ!' ಎಂದು ಆಶ್ಚರ್ಯ ವ್ಯಕ್ತಪಡಿಸಿದಾಗ ಇಮ್ಮಡಿ ಆಶ್ಚರ್ಯಕ್ಕೆ ಒಳಗಾದವನು ನಾನು. ಆತ ಆಕಾಶವಾಣಿ ಎಂದರೆ ದೂರವಾಣಿ ಎಂದು ಅರ್ಥ ಮಾಡಿಕೊಂಡಿದ್ದ.. ಆತನಿಗೆ ನಾನು ಆಕಾಶವಾಣಿ ಎಂದರೆ ರೇಡಿಯೋ ಸ್ಟೇಷನ್ ಎಂದು ಅರ್ಥ ಮಾಡಿಸಲು ಯತ್ನಿಸಿದೆ. ಆಗ ಆತನಿಗೆ ಸ್ವಲ್ಪ ಜ್ಞಾನೋದಯವಾದಂತಾಗಿ, 'ಓ ಅದಾ! ಹಿಂದೆ ನಮ್ಮಪ್ಪ ಒಬ್ಬರೇ ಕೂತು ಕಿವಿಗಿಟ್ಟುಕೊಂಡು ಕೇಳುತ್ತಿದ್ದರು!' ಎಂದು ನನ್ನನ್ನು ಯಾವುದೋ ಪುರಾತನ ಕಾಲದ ವ್ಯಕ್ತಿಯೆಂಬಂತೆ ನೋಡುತ್ತಾ, ಈಗ ತಮ್ಮ ಮನೆಯಲ್ಲಿ ಆ ಸಲಕರಣೆ ಇಲ್ಲವೆಂದೂ, ಬೆಂಗಳೂರಿಗೆ ಹೋದಾಗ ಮೊಬೈಲ್‌ನಲ್ಲಿ ಎಫ್.ಎಂ. ಕೇಳುವುದಾಗಿಯೂ ಹೇಳಿದ. ನಾನು ಆಕಾಶವಾಣಿ ಎಂಬ ಮಹಾಸಂಸ್ಥೆಗೆ ಮುವ್ವತ್ತು ವರ್ಷ ಹೊತ್ತದ್ದು ಮಣ್ಣೇ ಇರಬಹುದೆಂಬ ಅನುಮಾನ ನನ್ನನ್ನು ಕಾಡತೊಡಗಿತು.

ಈ ಅನುಮಾನ ನನ್ನಲ್ಲಿ ಮೂಡಿದ್ದು ಇದೇ ಮೊದಲಲ್ಲ. ತೊಂಬತ್ತರ ದಶಕದಲ್ಲಿಯೇ, ದೂರದರ್ಶನ ಕೇಂದ್ರಗಳು ಎಲ್ಲೆಡೆ ಸ್ಥಾಪಿತವಾಗುತ್ತಾ, ಅಲ್ಲಲ್ಲಿ ಉಪಗ್ರಹ ಟಿವಿ ವಾಹಿನಿಗಳು ಕೆಲ ಪ್ರತಿಷ್ಠಿತರ ಮನೆಗಳನ್ನು ಪ್ರವೇಶಿಸತೊಡಗಿದಾಗಲೇ ಆಕಾಶವಾಣಿ ಇನ್ನೇನು ಸಾವು ಕಾಣಲಿರುವ ಮಾಧ್ಯಮ ಎಂದು ನನಗನ್ನಿಸತೊಡಗಿತ್ತು. ಹಾಗೆ ನನಗನ್ನಿಸಿದ್ದು, ನಾನು ಪ್ರೀತಿ ಇಟ್ಟು ಸೇರಿ ನನ್ನ ಸೃಜನಶೀಲ ಶಕ್ತಿಯನ್ನೆಲ್ಲ ಅದಕ್ಕೇ ಬಹುಪಾಲು ಧಾರೆ ಎರೆದು– ವೃತ್ತಿ ಸಂಬಂಧಿಯಾದ ಹಲವು ಘರ್ಷಣೆಗಳಲ್ಲಿ ತೊಡಗಿ, ಅರ್ಹ ಅವಕಾಶಗಳನ್ನೂ ಕಳೆದುಕೊಂಡೂ– ಆವರೆಗೆ ಸಾರ್ಥಕತೆ ಅನುಭವಿಸಿದ್ದ ಅಭಿಮಾನದ ಹಿನ್ನೆಲೆಯಲ್ಲಿ. ಎಂಬತ್ತರ ದಶಕದಲ್ಲಿ ದೇಶಾದ್ಯಂತ ಬೀಸಿದ ಹಲವು ಕ್ಷೇತ್ರಗಳಲ್ಲಿನ ಬದಲಾವಣೆಯ ಗಾಳಿಗೆ ಸ್ಪಂದಿಸಲಾಗದಷ್ಟು ಸಿದ್ಧ ಎರಕಗಳ ಮಾಧ್ಯಮವು ಮಾದರಿಗಳಲ್ಲಿಯೇ ಹೂತು ಹೋಗಿದ್ದ ಆಕಾಶವಾಣಿ(ಅಂದರೆ ಅದರ ಯಜಮಾನರುಗಳು ಮತ್ತು ಸಿಬ್ಬಂದಿ) ದೂರದರ್ಶನ ಮತ್ತು ಉಪಗ್ರಹ ಟಿವಿ ಮುಂತಾದ ಹೊಸಕಾಲದ ಸಮೂಹ ಮಾಧ್ಯಮಗಳ ಆಗಮನ ಒಡ್ಡಬಹುದಾದ ಸವಾಲುಗಳ ಕಲ್ಪನೆಯೇ ಇಲ್ಲದೆ ತನ್ನ ಹಮ್ಮಿನಲ್ಲಿ ತಾನುಳಿಯಿತು. ಆಗ ನಾನು ಕಿರಿಯ ಅಧಿಕಾರಿಯಾಗಿದ್ದರೂ, ನನ್ನ ಹುಚ್ಚು ಧೈರ್ಯದಲ್ಲಿ ಈ ಕಣ್ಣ ಮುಂದಿನ ಸತ್ಯಗಳನ್ನು ಮತ್ತು ನನ್ನ ಅನ್ನಿಸಿಕೆಗಳನ್ನು ದಾಖಲಿಸಿ ಪತ್ರವೊಂದನ್ನು ಬರೆದಿದ್ದೆ. ಅದನ್ನು ಯಾರೂ ಮೂಸಿ ಸಹ ನೋಡಿರಲಾರರು!

ಆಶ್ಚರ್ಯವೆಂದರೆ, ಹೊಸ ಮಾಧ್ಯಮಗಳನ್ನು ಸಾರ್ವಜನಿಕವಾಗಿ ಪರಿಚಯಿಸತೊಡಗಿದ್ದ ಭಾರತ ಸರ್ಕಾರದ ಸಮಾಚಾರ ಮತ್ತು ಪ್ರಸಾರ ಖಾತೆಯ(ನಂತರದ 'ಪ್ರಸಾರ ಭಾರತಿ ಮಂಡಳಿ'ಯ) ಚಿಂತಕರ ಚಾವಡಿ ಕೂಡ ತನ್ನೀ ಹೊಸ ಪರಿಚಯಗಳಿಂದಾಗಿ ಈಗಾಗಲೇ ಸಾವಿರಾರು ಕೋಟಿ ರೂಪಾಯಿಗಳ ಬಂಡವಾಳ ಹೂಡಿರುವ ಆಕಾಶವಾಣಿ ಎಂಬ ಸಂಸ್ಥೆಯ ಪಾಡೇನಾಗಬಹುದು, ಅದನ್ನು ಹೇಗೆ ಈ ಹೊಸ ಮಾಧ್ಯಮಗಳೆದುರು ಸ್ಪರ್ಧಾತ್ಮಕ ಮಾಡಬಹುದು ಎಂಬ ಬಗ್ಗೆ ಒಂದು ಸಣ್ಣ ಯೋಚನೆ ಮಾಡಿದ ಸೂಚನೆಯೂ ಇಲ್ಲ. ಹಾಗೆ ನೋಡಿದರೆ ಅಲ್ಲಿ ಚಿಂತಕರ ಚಾವಡಿ ಎಂಬುದೇ ಇರಲಿಲ್ಲ! ಆ ಹೊತ್ತಿಗೆ ಆಕಾಶವಾಣಿ ಪೂರ್ಣವಾಗಿ ತಂತ್ರಜ್ಞರ ಲಾಬಿಯ ಕೈವಶವಾಗಿತ್ತು. ಆಕಾಶವಾಣಿ ಕೇಂದ್ರಗಳ ಮುಖ್ಯಸ್ಥರು–ಅದೃಷ್ಟವಶಾತ್ ರಾಜ್ಯಗಳ ರಾಜಧಾನಿ ಕೇಂದ್ರಗಳ ಹೊರತಾಗಿ–ಕಾರ್ಯಕ್ರಮ ರೂಪಿಸುವ ಸಮೂಹದಿಂದ ಬಂದ ನಿರ್ದೇಶಕರೇ ಆಗಬೇಕಿಲ್ಲ; ಇಂಜಿನಿಯರ್‌ಗಳೂ ಆಗಬಹುದೆಂಬ ಆಡಳಿತಾತ್ಮಕ ತೀರ್ಮಾನ ಆಕಾಶವಾಣಿಯ ಕಾರ್ಯನಿಹಣಾ ಶೈಲಿಯನ್ನೇ ನಿರ್ಣಾಯಕವಾಗಿ ಬಲಿಸಿತೆಂದು ಹೇಳಬೇಕು. ಆಕಾಶವಾಣಿ ಎಂದರೆ ಮೂಲತಃ ಒಂದು ಸಾಂಸ್ಕೃತಿಕ ಸಂಸ್ಥೆ ಎಂಬ ಕಲ್ಪನೆಗೆ ಬದಲಾಗಿ ಅದೊಂದು ತಾಂತ್ರಿಕ ಸಂಸ್ಥಾಪನೆ ಎಂಬ ಭಾವನೆ ಸರ್ಕಾರದ ವಲಯಗಳಲ್ಲೇ ಬೆಳೆದಿತ್ತು.

ಇದಕ್ಕೆ ಕಾರಣ ಬರೀ ಸರ್ಕಾರ ಅಥವಾ ಉನ್ನತ ತಾಂತ್ರಿಕ ಸಿಬ್ಬಂದಿಯ ಲಾಬಿಯೊಂದೇ ಕಾರಣವಲ್ಲ. ಆಕಾಶವಾಣಿ ಕೇಂದ್ರಗಳ ಸಂಖ್ಯೆ ಹೆಚ್ಚಿದಂತೆಯೂ, ಅದರ ಜೊತೆಗೆ ಕಾರ್ಯಕ್ರಮ ಸಿಬ್ಬಂದಿಯ ಆಯ್ಕೆಯಲ್ಲಿನ ವೃತ್ತಿಪರತೆ ಕಡಿಮೆಯಾಗುತ್ತಿದ್ದಂತೆಯೂ ಕಾರ್ಯಕ್ರಮ ಸಿಬ್ಬಂದಿಯ ಗುಣಾತ್ಮಕತೆಯೂ ಕುಸಿದುಬಿದ್ದಿತ್ತು. ಆ ಹೊತ್ತಿಗೆ ಬಹಳಷ್ಟು ನಿರ್ದೇಶಕರುಗಳು ಯಾವುದೇ ಸಾಂಸ್ಕೃತಿಕ ಅಸ್ಮಿತೆಗಳಿಲ್ಲದ ಮತ್ತು ಮಾಧ್ಯಮ ಸೂಕ್ಷ್ಮಗಳ ಅರಿವಿಲ್ಲದ ಮಹಾ ಗುಮಾಸ್ತರುಗಳಂತೆ ಕಾಣತೊಡಗಿದ್ದರು. ಇವರಿಂದ ಬಡ್ತಿ ಪಡೆದು ಮೇಲಮೇಲಕ್ಕೆ ಹೋದವರೇ ಆಕಾಶವಾಣಿಯ ಕಾಲಾನುಕಾಲದ ನೀತಿನಿರೂಪಣೆಗೆ ಪ್ರಸ್ತಾವನೆ ಸಿದ್ಧಪಡಿಸುವ ಮಹಾನಿರ್ದೇಶನಾಲಯದ ಸಾರಥ್ಯ ವಹಿಸುತ್ತಿದ್ದರಾದ್ದರಿಂದ, ಪ್ರಸಾರ ಖಾತೆಯ ಹಿರಿಯ ಅಧಿಕಾರಿಗಳಿಗೆ ಮತ್ತು ಸಚಿವರುಗಳಿಗೆ ಈ ಬೆಪ್ಪು ಗುಮಾಸ್ತರುಗಳಿಗಿಂತ ಇಂಜಿನಿಯರ್‌ಗಳೇ ಹೆಚ್ಚು ಭರವಸೆಯ ಬೆಳಕುಗಳಾಗಿ ಕಂಡಿದ್ದರಲ್ಲಿ ಆಶ್ಚರ್ಯವಿಲ್ಲ. ಹಾಗಾಗಿಯೇ ಆಕಾಶವಾಣಿ ಹೊಸ ಕಾಲದ ಕರೆಗಳಿಗೆ ಓಗೊಡುವುದೆಂದರೆ ಕಾರ್ಯಕ್ರಮ ಸ್ವರೂಪದಲ್ಲಿ ಮೂಲಭೂತ ಬದಲಾವಣೆ ಮಾಡುವುದು ಎಂದಾಗದೆ, ಹೊಸ ಹೊಸ ತಂತ್ರಜ್ಞಾನಗಳ ಅತ್ಯಾಧುನಿಕ ಪ್ರಸಾರಕಗಳ ಮತ್ತು ಸಾಧನ–ಸಲಕರಣೆಗಳ ಅಳವಡಿಕೆ ಎಂದೇ ಆಯಿತು.

ಈ ತಾಂತ್ರಿಕ ಆಧುನೀಕರಣ ನೂರಾರು ಕೋಟಿ ರೂಪಾಯಿಗಳ ವ್ಯವಹಾರವೂ ಆದ್ದರಿಂದ ಇದಕ್ಕೆ ಯಾವ ಅಡತಡೆಯೂ ಉಂಟಾಗದೆ ಲಗುಬಗೆಯಿಂದ ಈ ಕೆಲಸ ನಡೆಯಿತು. ಇದರ ಒಂದು ಭಾಗವೇ ಎಲ್ಲೆಡೆ ಸ್ಥಾಪಿತವಾದ ಎಫ್.ಎಂ. ಕೇಂದ್ರಗಳು! ಈ ಲಗುಬಗೆಯ ಅನಾಹುತವೆಂದರೆ ಹಲವೆಡೆ ಈ ಹೊಸ ಪ್ರಸಾರಕಗಳನ್ನು ಯಾವುದೇ ಅಧ್ಯಯನ ಇಲ್ಲದೆ ಮತ್ತು ರಾಜಕೀಯ ವಶೀಲಿಬಾಜಿಯಿಂದಾಗಿ ಸ್ಥಾಪಿಸಿದ್ದರಿಂದ ಅದಕ್ಕೆ ಸಂಬಂಧಪಟ್ಟ ಹಲವು ಆಕಾಶವಾಣಿ ಕೇಂದ್ರಗಳ ಪ್ರಸಾರವ್ಯಾಪ್ತಿಗಳೇ ಊನಗೊಂಡಿವೆ.(ಉದಾ: ನಮ್ಮ ರಾಜ್ಯದ ಚಿತ್ರದುರ್ಗ, ಕಾರವಾರ ಇತ್ಯಾದಿ) ಇನ್ನು ಈ ಸಾಹಸದಲ್ಲಿ ಕಾರ್ಯಕ್ರಮ ವಿಭಾಗದ ಒಂದು ಪಾಲೂ ಇರಲಿ ಎಂಬ ಔಪಚಾರಿಕತೆಗಾಗಿ ಇವುಗಳಲ್ಲಿ ಕೆಲವನ್ನು 'ಸ್ಥಳೀಯ ಕೇಂದ್ರ'ಗಳೆಂದು ಕರೆಯುವ ಪ್ರಹಸನವೂ ನಡೆಯಿತು. ಇದು ಪ್ರಹಸನ ಏಕೆಂದರೆ, ಸ್ಥಳೀಯ ಕೇಂದ್ರ ಎಂದರೇನು ಎಂಬ ನಿರ್ದಿಷ್ಟ ಕಲ್ಪನೆ ಇಲ್ಲದೆ, ಅವುಗಳಿಗೆ ಬೇಕಾದ ಮೂಲಸೌಲಭ್ಯ ಮತ್ತು ವಿಶೇಷ ತರಬೇತಾದ ಸಿಬ್ಬಂದಿ ಇಲ್ಲದೆ ಯಾವನೋ ಸಚಿವ ಅಥವಾ ಹಿರಿಯ ಅಧಿಕಾರಿ ತನ್ನ ಸರ್ಕಾರಿ ವಿದೇಶಿ ಪ್ರವಾಸದ ಸಮಯದಲ್ಲಿ ಕೇಳಿದ 'ಸ್ಥಳೀಯ ಬಾನುಲಿ' ಎಂಬ ಶಬ್ದದ ಸಾಕಾರ ರೂಪ ಮಾತ್ರ ಇವಾಗಿದ್ದವು. ಜೊತೆಗೆ ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿ ಎಫ್.ಎಂ. ರೇಡಿಯೋ ಸೆಟ್ಟುಗಳ ಸಾಂದ್ರತೆ ಎಷ್ಟು, ಅದನ್ನು ಹೆಚ್ಚಿಸಲು ಕ್ರಮ ಕೈಗೊಳ್ಳದೆ ಈ ಹೊಸ ಸಾಹಸಗಳು ವ್ಯರ್ಥವಾಗಬಲ್ಲವು ಎಂಬ ಯಾವ ಪರಿವೆಯೂ ಯಾರಿಗೂ ಇದ್ದಂತಿರಲಿಲ್ಲ.

ಹಾಗೆ ನೋಡಿದರೆ ಆಕಾಶವಾಣಿಯ ಆಧುನೀಕರಣ ಎಂಬ ಯೋಜನೆಯೇ ಪರಿವೆಯೆಂಬುದರ ಸುಳಿವೇ ಇಲ್ಲದ ಬರೀ ವ್ಯವಹಾರದ ವಿದ್ಯಮಾನವಾಗಿತ್ತು. ಈಗಲೂ ಅದು ಸಾವಿರಾರು ರೂಪಾಯಿಗಳ ದುಬಾರಿ ಸೆಟ್‌ಗಳ ಮೂಲಕ ಮಾತ್ರ ಕೇಳಬಲ್ಲ ಮೂರು ನೂರು ಡಿಜಿಟಲ್ ರೇಡಿಯೋ ಕೇಂದ್ರಗಳನ್ನು ಕೋಟ್ಯಾಂತರ ರೂಪಾಯಿಗಳಲ್ಲಿ ಸ್ಥಾಪಿಸುವ ಸನ್ನಾಹ ನಡೆದಿದೆಯಂತೆ! ಆದರೆ ಇವುಗಳಿಗೆ ಜನ ಕೇಳಬಲ್ಲ ಕಾರ್ಯಕ್ರಮಗಳನ್ನು ಒದಗಿಸಬೇಕಾದ ಕಾರ್ಯಕ್ರಮ ಸಿಬ್ಬಂದಿ ಕೆಲ ಪಟ್ಟಭದ್ರ ಹಿತಾಸಕ್ತಿಗಳ ಒತ್ತಡದಲ್ಲಿ ಅಧಿಕಾರಶಾಹಿ ಕೈಗೊಂಡ ಕೆಲ ತಪ್ಪು ಆಡಳಿತಾತ್ಮಕ ನಿರ್ಧಾರಗಳಿಂದಾಗಿ ವರ್ಷಗಟ್ಟಲೆ ಬಡ್ತಿ ಇಲ್ಲದ

ಸೊರಗಿ ಸುಸ್ತಾಗಿ ಕೂತಿದೆ. ಜೊತೆಗೆ ಇದು ಯಾರೂ ಕೇಳದ ಮಾಧ್ಯಮವೆಂಬ ಅನಿಕತೆ ಮನೆ ಮಾಡಿದೆ. ಕಾರ್ಯಕ್ರಮ ಆಡಳಿತದಲ್ಲಿ ಅರಾಜಕತೆ ತಾಂಡವವಾಡುತ್ತಿದೆ. ಇಂತಹ ಸಿಬ್ಬಂದಿಯಿಂದ ಆಕಾಶವಾಣಿಗೆ ಹೊಸ ಚೇತನ ನೀಡುವ ಹೊಸ ಕಲ್ಪನಾಶೀಲತೆಯಾದರೂ ಎಲ್ಲಿಂದ, ಹೇಗೆ ಬಂದೀತು? ಬಂದರೂ ಅದಕ್ಕೆ ಸ್ಪಂದಿಸುವವರಾದರೂ ಯಾರು? ಎಂಬತ್ತು ವರ್ಷಗಳಷ್ಟು ಹಿರಿದಾದ ಈ ಸಮೂಹ ಮಾಧ್ಯಮ ಸಂಸ್ಥೆಯ ಯಾವ ಹಿರಿಯರಿಗೂ ಇದಕ್ಕೊಂದು ಕಾರ್ಯಕ್ರಮ ಸಂಶೋಧನಾ ಘಟಕವೊಂದರ ಅಗತ್ಯವಿದೆ ಎಂದೆನಿಸಿಲ್ಲ ಎಂಬುದೇ ಇದರ ನಿಜವಾದ ದುರಂತವಾಗಿದೆ

ಸಂಸ್ಥೆ ಹೀಗೆ ಆಧುನೀಕರಣವೆಂದರೆ ಹೊಸ ತಂತ್ರಜ್ಞಾನಗಳ ಅಳವಡಿಕೆ ಎಂದೇ (ಸುಳ್ಳಾಗಿ) ನಂಬಿ ತನ್ನ ಕಾರ್ಯಕ್ರಮ ಘಟಕವನ್ನು ಸಂಪೂರ್ಣ ನಿರ್ಲಕ್ಷಿಸುತ್ತಾ ಹೋದ ಪರಿಣಾಮವಾಗಿ ಅದೀಗ ಒಂದು ಬೃಹತ್ ಜಡ ಆಸ್ತಿಯಾಗಿ ಬೆಳೆದಿದೆ. ಒಂದು ಕಾಲದಲ್ಲಿ ನಾಡಿನ ಸಾಹಿತ್ಯ, ಸಂಗೀತಗಳ ಪರಂಪರೆಯ ಸಂರಕ್ಷಣೆ ಮತ್ತು ಪೋಷಣೆಯ ಜವಾಬ್ದಾರಿ ಹೊತ್ತು ಒಂದು ರಾಷ್ಟ್ರೀಯ ಸಾಂಸ್ಕೃತಿಕ ಸಂಪತ್ತೆನಿಸಿದ್ದಲ್ಲದೆ, ರಾಷ್ಟ್ರದ ಅಭಿವೃದ್ಧಿಗೆ ಹಲವು ವಿಸ್ತರಣಾ ಸೌಲಭ್ಯಗಳನ್ನು ಒದಗಿಸಿ ಜನಸಮುದಾಯದ ಎಲ್ಲ ವರ್ಗಗಳ ಮಾಹಿತಿ, ಮನರಂಜನೆ ಮತ್ತು ಶಿಕ್ಷಣದ ಅಗತ್ಯಗಳನ್ನು ಪೂರೈಸಿ ರಾಷ್ಟ್ರಜೀವನದ ಅವಿಭಾಜ್ಯ ಅಂಗವಾಗಿ ಮನೆ ಮಾತಾಗಿದ್ದ ಆಕಾಶವಾಣಿ ಈಗ ಸಾವಿನ ಹಂತ ತಲುಪಿದೆ.

ಈ ಮಾತನ್ನು ಈಗ ಈ ಮಾಧ್ಯಮದಲ್ಲಿರುವ ಬಹಳಷ್ಟು ಜನ ಸಹಜವಾಗಿಯೇ ಒಪ್ಪಲಾರರು. ಅದು ಅವರ ವೃತ್ತಿಜೀವನದ ಸಾರ್ವಜನಿಕ ಸ್ವಾಭಿಮಾನದ ಪ್ರಶ್ನೆ. ಅವರು ತಮ್ಮ ಶ್ರೋತೃ ಸಂಶೋಧನಾ ವಿಭಾಗಗಳ ಸಮೀಕ್ಷೆಗಳ ವರದಿಗಳನ್ನು ತೋರಿಸಿ ಇಷ್ಟು ಲಕ್ಷ ಜನ ಇಷ್ಟು ಹೊತ್ತಿನಲ್ಲಿ ನಮ್ಮ ಕಾರ್ಯಕ್ರಮಗಳನ್ನು ಕೇಳುತ್ತಾರೆ ನೋಡಿ ಎನ್ನಲೂಬಹುದು. ಎಲ್ಲರಿಗೂ ಗೊತ್ತಿದೆ ನಮ್ಮ ಎಲ್ಲ ಸಮೀಕ್ಷೆಗಳೂ ವರದಿಗಳೂ ಒಂದು ನಿರ್ದಿಷ್ಟ ಉದ್ದೇಶಕ್ಕಾಗಿ ತಯಾರಾಗುತ್ತವೆ ಎಂದು. ಈ ಸತ್ಯ ಅವನ್ನು ತಯಾರಿಸುವ ಅಧಿಕಾರಿಗಿಂತ ಹೆಚ್ಚು ಯಾರಿಗೆ ಗೊತ್ತಿರಬಲ್ಲುದು. ಹಾಗಾಗಿಯೇ ನನ್ನ ಸಹೋದ್ಯೋಗಿಯಾಗಿದ್ದ ಹಿರಿಯ ಶ್ರೋತೃ ಸಂಶೋಧನಾ ಅಧಿಕಾರಿಯೊಬ್ಬರು ತಮ್ಮ ನಿವೃತ್ತಿಯ ಮುನ್ನ ಅಸಹಾಯಕ ಪೇಚಿನೊಂದಿಗೆ ಹೀಗೆ ಹೇಳಿದರು: 'ಆಕಾಶವಾಣಿಯ ಜನಪ್ರಿಯತೆಯ ಬಗ್ಗೆ ನನ್ನ ಸಮೀಕ್ಷೆ/ವರದಿಗಳಲ್ಲಿ ಎಷ್ಟೊಂದು ಸುಳ್ಳು ಅಂಕಿ ಅಂಶಗಳನ್ನು ಸೃಷ್ಟಿಸಬೇಕಾಯಿತೆಂದರೆ ನಾನು ನರಕಕ್ಕೇ ಹೋಗುವುದು ನನಗೆ ಗ್ಯಾರಂಟಿಯಾಗಿದೆ!'

ಅದೇನೇ ಇರಲಿ, ಆಕಾಶವಾಣಿಯು ತನ್ನ ಪುರಾತನ ಕಾಲದ ಮಾಧ್ಯಮ ಗುತ್ತೇದಾರಿಕೆಯ ಮಾನಸಿಕತೆಯಿಂದ ಮತ್ತು ತುಕ್ಕು ಹಿಡಿದ ಕಾರ್ಯಕ್ರಮಗಳ ಮಾದರಿಗಳಿಂದ ಹೊರಬಂದು ಹೊಸ ಕಾಲದ ಜನರ ಮಾಹಿತಿ–ಮನರಂಜನೆ–ಶಿಕ್ಷಣದ ಅಗತ್ಯಗಳನ್ನು ಅಭ್ಯಸಿಸಿ ಅದಕ್ಕೆ ತಕ್ಕ ಕಾರ್ಯಕ್ರಮಗಳ ಹೊಸ ರೂಪಗಳನ್ನು ಸಿದ್ಧಪಡಿಸುವ ಹೊಸ ಯೌವ್ವನದ ಹುರುಪು ಪಡೆಯುವುದಾದರೆ ಮಾತ್ರ ಅದಕ್ಕೆ ಉಳಿಗಾಲವಿದ್ದಂತೆ ಕಾಣುತ್ತದೆ.

ಆಕಾಶವಾಣಿಯ ಮಾಜಿ ಮತ್ತು ಹಾಲಿ ಆಡಳಿತಗಾರರು ಹಾಗೂ ಕೇಳುಗರೂ ಈ ಪುಟಗಳಲ್ಲಿ ತಮ್ಮ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ. ಓದಿ, ಬರೆಯಿರಿ.–ಸಂ

ಇನ್ನೂ ಆಕಾಶವಾಣಿಯ ವಿರಾಟ್‌ರೂಪ ದರ್ಶನವಾಗಿಯೇ ಇಲ್ಲ

–ಸಿ.ಯು. ಬೆಳ್ಳಕ್ಕಿ

ಭಾರತದ ಬಾನುಲಿ ಇತಿಹಾಸವೆಂದರೆ ಪ್ರಧಾನವಾಗಿ ಆಕಾಶವಾಣಿಯ ಇತಿಹಾಸವೇ ಆಗಿದೆ. ಆಕಾಶವಾಣಿ ಸಾರ್ವಜನಿಕ ಸೇವಾ ಪ್ರಸಾರಕ್ಕಾಗಿ ಮೀಸಲಾದ ವಿಶ್ವದ ಒಂದು ಅತಿ ದೊಡ್ಡ ಪ್ರಸಾರ ಜಾಲ. ಸ್ವಾತಂತ್ರ್ಯಾನಂತರ ನಮ್ಮ ದೇಶದ ಸಮಗ್ರ ಅಭಿವೃದ್ಧಿ ಚಟುವಟಿಕೆಗಳಿಗೆ ವಿಶೇಷವಾಗಿ ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿಗೆ ಆಕಾಶವಾಣಿಯ ಕೊಡುಗೆ ಗಮನಾರ್ಹ. ೧೯೬೦ – ೭೦ ದಶಕದಲ್ಲಿ ದೇಶದ ಹಸಿರು ಕ್ರಾಂತಿಗೆ ಅಗತ್ಯ ಮಾಧ್ಯಮ ಬೆಂಬಲ ನೀಡುವಲ್ಲಿ ಅದು ಸಾಕಷ್ಟು ಸಫಲವಾಗಿದೆ. ಸಂದಿಗ್ಧ ಸ್ಥಿತಿಯಲ್ಲಿದ್ದ ಶಾಸ್ತ್ರೀಯ ಹಾಗೂ ಜನಪದ ಸಂಗೀತವನ್ನು ಉಳಿಸಿ ಬೆಳೆಸುವಲ್ಲಿ ಆಕಾಶವಾಣಿ ಮಹತ್ತರ ಪಾತ್ರ ವಹಿಸಿದೆ. ಇಂದಿಗೂ ಐವತ್ತು ಸಾವಿರಕ್ಕೂ ಹೆಚ್ಚು ಅನುಮೋದಿತ ಸಂಗೀತ ಕಲಾವಿದರ ಅಭಿವ್ಯಕ್ತಿಗೆ ಬೃಹತ್ ವೇದಿಕೆಯನ್ನು ಕಲ್ಪಿಸಿದ ಹೆಗ್ಗಳಿಕೆ ಆಕಾಶವಾಣಿಯದಾಗಿದೆ. ಇಂದಿಗೂ ಜೀವನಕ್ಕೆ ಅತಿ ಅವಶ್ಯವಾದ ವಿಷಯಗಳನ್ನು ಆಕರ್ಷಕವಾಗಿ ಅರ್ಥವಾಗುವಂತೆ ಪ್ರಸಾರ ಮಾಡಿದಾಗ ಜನ ಆಕಾಶವಾಣಿ ಕೇಳುತ್ತಾರೆ. ಫೋನ್–ಇನ್, ಬಾನುಲಿ ಸರಣಿಗಳಂಥ ದ್ವಿಮುಖ ಸಂವಹನದ ಕಾರ್ಯಕ್ರಮಗಳಿಗೆ ದೊರೆಯುವ ಪ್ರತಿಕ್ರಿಯೆ ಇದಕ್ಕೆ ಒಳ್ಳೆಯ ನಿದರ್ಶನ.



ಹೊಸ ದೆಹಲಿಯಲ್ಲಿನ ಕೇಂದ್ರ ಪ್ರಸಾರ ಭವನ

ನಮ್ಮ ದೇಶದಲ್ಲಿ ಪ್ರಸಾರ ಪ್ರಾರಂಭವಾಗಿ ಎಂಟು ದಶಕಗಳು ಸಂದರೂ ಅದರ ಅಗಾಧ ಶಕ್ತಿಯ ಸಮರ್ಪಕ ಬಳಕೆ ಆಗದೆ ಇರುವುದು, ದುರದೃಷ್ಟಕರ. ಇದುವರೆಗೆ ಆಕಾಶವಾಣಿಯ ವಿರಾಟರೂಪ ದರ್ಶನವಾಗಿಯೇ ಇಲ್ಲ ಎಂದು ಹೇಳಬಹುದು. ಇತ್ತೀಚೆಗೆ ಚೆನ್ನೈನಲ್ಲಿ ಶತಮಾನದ ಭೀಕರ ಮಹಾಪೂರ ಸಂಭವಿಸಿದಾಗ ಆಕಾಶವಾಣಿ ವಿಕೋಪ ನಿರ್ವಹಣೆಯಲ್ಲಿ ಶ್ಲಾಘನೀಯ ಕಾರ್ಯ ನಿರ್ವಹಿಸಿತು. ಸುನಾಮಿ, ಭೂಕಂಪ, ಬಿರುಗಾಳಿ ಇಂತಹ ಯಾವುದೇ ವಿಕೋಪಗಳು ಸಂಭವಿಸಿದಾಗ ಆಕಾಶವಾಣಿ ತನ್ನ ಸಾಮರ್ಥ್ಯವನ್ನು ಪ್ರದರ್ಶಿಸಿದೆ. ವಿಶ್ವದ ಸಣ್ಣ ಪುಟ್ಟ ರಾಷ್ಟ್ರಗಳೂ ಸಹ ಇಂತಹ ಸಂದರ್ಭದಲ್ಲಿ ಬಾನುಲಿಯ ಸಂಪೂರ್ಣ ಪ್ರಯೋಜನ ಪಡೆಯುತ್ತಿವೆ. ಅಂತಹದರಲ್ಲಿ ಆಕಾಶವಾಣಿಗೆ ನಿರ್ದಿಷ್ಟ ವ್ಯವಸ್ಥಿತ ಯೋಜನೆ ನೀತಿ ರೂಪಿತವಾಗದೆ ಇರುವುದು ವಿಷಾದಕರ ಸಂಗತಿ.


೧೯೮೦ರ ದಶಕದಲ್ಲಿ ಟೆಲಿವಿಜನ್ ಸ್ಪರ್ಧೆ ಧುತ್ತೆಂದು ಎದುರಾದಾಗ ಆಕಾಶವಾಣಿಯಲ್ಲಿ ಗಲಿಬಿಲಿ. ಅದುವರೆಗೆ ಪ್ರಸಾರ ಮಾಡಿದ್ದೆಲ್ಲ ಸಾರ್ವಜನಿಕ ಸೇವಾ ಪ್ರಸಾರವೆಂದರೆ ಕಾಲ ಬದಲಾದಾಗ ಸಾರ್ವಜನಿಕ ಪ್ರಸಾರ, ವಾಣಿಜ್ಯ ಪ್ರಸಾರಗಳ ಹೊಂದಾಣಿಕೆಯ ಇನ್ನೊಂದು ಗೊಂದಲ ಎದುರಾಯಿತು. ಸಾರ್ವಜನಿಕ ಸೇವಾ ಪ್ರಸಾರ ಗಹನವಾದ ವಿಷಯ. ಎಲ್ಲ ವರ್ಗದ, ವಯೋಮಿತಿಯ ಕೇಳುಗರ ಗಮನ ಸೆಳೆದು ಮಾಹಿತಿ ಶಿಕ್ಷಣ ಮನರಂಜನೆಯನ್ನು ಅವರಿಗೆ ಅರ್ಥವಾಗುವಂತೆ ಒದಗಿಸುವುದು ಒಂದು ದೊಡ್ಡ ಸವಾಲಾಗಿದೆ. ಸೃಜನಶೀಲ ಪ್ರತಿಭೆ, ಕೇಳುಗರ ಸ್ಪಂದನ, ನಿರ್ಮಾಣ ತಂತ್ರಗಳ ಜ್ಞಾನ ಇವು ಅತಿ ಅವಶ್ಯ. ಇವುಗಳನ್ನು ಅರಿತು, ಒಳ್ಳೆಯ ಕಾರ್ಯಕ್ರಮಗಳ ನಿರ್ಮಾಣ ಮಾಡಿದಾಗ ಮಾತ್ರ ಸಾರ್ವಜನಿಕ ಸೇವಾ ಪ್ರಸಾರ ಸಾರ್ಥಕವಾಗಬಲ್ಲದು.

ಆಕಾಶವಾಣಿಯಲ್ಲಿ ಇಂತಹ ಕೆಲಸ ನಡೆಯುತ್ತಿಲ್ಲ ಅಂತಲ್ಲ, ಆಕಾಶವಾಣಿಯಲ್ಲಿ ಸಾಕಷ್ಟು ಪ್ರತಿಭಾನ್ವಿತರಿದ್ದಾರೆ. ಎಲ್ಲೆಲ್ಲಿ ಆಸಕ್ತಿಯುತ ಪ್ರತಿಭೆ ಏನಾದರೂ ಮಾಡಲೇಬೇಕೆಂಬ ಹಠ, ಕಳಕಳಿ, ಸಮರ್ಪಕ ನೇತೃತ್ವ ಇರುವ ಹಲವಾರು ಕೇಂದ್ರಗಳ ಯಶೋಗಾಥೆಯ ನಿದರ್ಶನಗಳು ನಮ್ಮ ಮುಂದಿವೆ. ಮೇಲ್ಮಟ್ಟದಲ್ಲಾಗಲಿ, ಕೇಂದ್ರಗಳ ಮಟ್ಟದಲ್ಲಾಗಲಿ ನಿಶ್ಚಿತ ಗುರಿ, ಯೋಜನೆ, ಅನುಷ್ಠಾನ, ವೃತ್ತಿಪರತೆ, ನಿರ್ದೇಶನ ಇವುಗಳ ಕೊರತೆ ಎದ್ದುಕಾಣುವಂತಹದಾಗಿದೆ. ಮಾಡಲೇಬೇಕೆಂಬ ಕಟ್ಟಳೆಗಳಿಲ್ಲ. ಮಾಡಿದಾಗ ತಕ್ಷಣ ಗಮನಿಸಿ ಪ್ರೋತ್ಸಾಹಿಸುವ ಮನಸ್ಸುಗಳಿಲ್ಲ. ಈ ದಿಸೆಯಲ್ಲಿ ಗಂಭೀರ ಚರ್ಚೆ, ಪ್ರಯೋಗ, ಸಂಶೋಧನೆಗಳು ಸಾಕಷ್ಟು ನಡೆಯುತ್ತಿಲ್ಲ. ಆಕಾಶವಾಣಿಯಲ್ಲಿ ಕೆಲಸ ಮಾಡಲು ಹೆಚ್ಚಿನ ಸ್ವಾತಂತ್ರ್ಯವಿಲ್ಲ ಎನ್ನುವ ಸಾಮಾನ್ಯ ಭಾವನೆ ಇದೆ. ಆಕಾಶವಾಣಿಯಲ್ಲಿ ಸುದ್ದಿ ಹಾಗೂ ಕಾರ್ಯಕ್ರಮ

ಇವೆರಡು ಪ್ರತ್ಯೇಕ ವಿಭಾಗಗಳು. ಕಾರ್ಯಕ್ರಮ ವಿಭಾಗಕ್ಕೆ ಸಂಬಂಧಿಸಿದ ಹಾಗೆ ಸಾರ್ವಜನಿಕ ಸೇವಾ ಪ್ರಸಾರಕ್ಕೆ ಸಾಕಷ್ಟು ಸ್ವಾತಂತ್ರ್ಯವಿದೆ. ಅಂತಹ ಕಾರ್ಯಕ್ರಮಗಳ ನಿರ್ಮಾಣಕ್ಕೆ ಹೇಳಿಕೊಳ್ಳುವಂಥ ಅಡೆತಡೆಗಳಿಲ್ಲ. ವಿಶೇಷವಾಗಿ ಕೇಂದ್ರ ನಿರ್ದೇಶಕರಿಗೆ ಈ ದಿಶೆಯಲ್ಲಿ ಸಾಕಷ್ಟು ಸ್ವಾತಂತ್ರ್ಯವಿದೆ ಎನ್ನುವುದು ನನ್ನ ಅನುಭವ.

ಇಂತಹ ಪ್ರಭಾವಶಾಲಿ ಜನಮಾಧ್ಯಮವನ್ನು ಪ್ರಸಾರಕರ ವಿವೇಚನೆಗೇ ಬಿಟ್ಟು ಜನ, ಸರಕಾರ ನಿಷ್ಕ್ರಿಯರಾದಂತಿದೆ. ರೇಡಿಯೋ ಯಾರು ಕೇಳುತ್ತಾರೆ? ಹಳ್ಳಿಗಳಲ್ಲಿ ರೇಡಿಯೋ ಕೇಳ್ತಾರೆ, ಕೆಲಸ ಮಾಡುತ್ತ ರೇಡಿಯೊ ಕೇಳಬಹುದು ಎನ್ನುವ ಸಾಂತ್ವನದ ಮಾತುಗಳನ್ನು ಕೆಲವರು ಹೇಳುತ್ತಲೇ ಇದ್ದಾರೆ. ೭೦-೮೦ನೇ ದಶಕಗಳವರೆಗೆ ನಮ್ಮ ದೇಶದಲ್ಲಿ ಲಭ್ಯವಿದ್ದ ಏಕೈಕ ವಿದ್ಯುನ್ಮಾನ ಮಾಧ್ಯಮ ಆಕಾಶವಾಣಿ. ನೂರಾರು ಟಿವಿ ಹಾಗೂ ಖಾಸಗಿ ರೇಡಿಯೊ ವಾಹಿನಿಗಳು ಬಂದಾಗ ಮೊದಲಿನ ಹಾಗೆ ಎಲ್ಲರೂ ಆಕಾಶವಾಣಿಯನ್ನೇ ಕೇಳಬೇಕೆಂಬ ನಿರೀಕ್ಷೆ ಅಸಾಧ್ಯ, ಅಸಹಜ. ಖಾಸಗಿ ಟಿವಿ ರೇಡಿಯೊ ವಾಹಿನಿಗಳ ಬಗ್ಗೆ ತಲೆಕೆಡಿಸಿಕೊಂಡಷ್ಟು ಮಾತನಾಡಿದಷ್ಟು ಸಾರ್ವಜನಿಕ ಸೇವಾ ಪ್ರಸಾರದ ಉದ್ದೇಶ ಹೊಂದಿ, ಜನರ ದುಡ್ಡಿನಿಂದಲೇ ನಡೆಯುವ ಆಕಾಶವಾಣಿಯ ಬಗ್ಗೆ ಸಾಕಷ್ಟು ಗಮನ ಹರಿಸದೇ ಇರುವುದು ಒಂದು ವಿಪರ್ಯಾಸ. ಆಕಾಶವಾಣಿಯಲ್ಲಿ ಕೆಲಸ ಮಾಡುವಾಗ ನಮ್ಮ ಕಾರ್ಯಕ್ರಮಗಳ ಬಗ್ಗೆ, ನಮ್ಮ ಕಾರ್ಯದ ಬಗ್ಗೆ ಯಾವುದೇ ಗಂಭೀರ ಚರ್ಚೆ, ವಿಮರ್ಶೆ ನಡೀತಾ ಇದೆ, ನಮ್ಮನ್ನು ಗಂಭೀರವಾಗಿ ಪರಿಗಣಿಸ್ತಾ ಇದ್ದಾರೆ ಎನ್ನುವ ಭಾವನೆ ಬರಲಿಲ್ಲ.


ಈಗಾಗಲೇ ೨೫೦ಕ್ಕೂ ಹೆಚ್ಚು ಖಾಸಗಿ ರೇಡಿಯೊ ಕೇಂದ್ರಗಳಿದ್ದು ಇನ್ನೂ ೮೦೦ಕ್ಕೂ ಹೆಚ್ಚು ಅಂತಹ ಕೆಂದ್ರಗಳು ಬರಲಿವೆ. ಪ್ರಮುಖವಾಗಿ ಇವು ಮನರಂಜನೆಗೆ ಮೀಸಲಾದ ವಾಣಿಜ್ಯ ಪ್ರಸಾರ ಕೇಂದ್ರಗಳಾಗಿವೆ. ಕೇವಲ ಉಪ್ಪಿನಕಾಯಿ, ಸಿಹಿ ಊಟವಾಗಲಾರದು. ವಿಶಿಷ್ಟವಾದ ನಮ್ಮ ಬೃಹತ್ ದೇಶದ ನೂರಿಪ್ಪತ್ತು ಕೋಟಿ ಜನರ ಮಾಹಿತಿ, ಶಿಕ್ಷಣ, ಮನರಂಜನೆ ನೀಡುವ ಗುರುತರ ಜವಾಬ್ದಾರಿ ಹೊಂದಿರುವ ಆಕಾಶವಾಣಿಗೆ ಇವು ಪರ್ಯಾಯವಾಗಲಾರವು. ವಿಶ್ವದ ಸಣ್ಣಪುಟ್ಟ ದೇಶಗಳಲ್ಲದೆ ಮುಂದುವರೆದ ರಾಷ್ಟ್ರಗಳಲ್ಲಿಯೂ ಸಾರ್ವಜನಿಕ ಸೇವಾ ಪ್ರಸಾರ ಇಂದಿಗೂ ಭದ್ರ ನೆಲೆ ಹೊಂದಿದೆ ಎನ್ನುವ ಅಂಶ ಗಮನಾರ್ಹ. ಮಾಧ್ಯಮ ಸ್ಫೋಟದ ಹಿನ್ನೆಲೆಯಲ್ಲಿ ಎಲ್ಲರಿಗೂ ಎಲ್ಲವೂ ತಿಳಿದಿದೆ ಎಂಬ ತಪ್ಪು ಕಲ್ಪನೆ ಮೂಡಿದೆ. ಆದರೆ ಬಹಳಷ್ಟು ಜನರಿಗೆ ಬಹಳಷ್ಟು ವಿಷಯಗಳು ತಿಳಿದಿಲ್ಲ ಎಂಬುದು ಕಟುಸತ್ಯವಾಗಿದೆ. ಆಕಾಶವಾಣಿ ನಮ್ಮ ದೇಶಕ್ಕೆ ಅನಿವಾರ್ಯವಾಗಿದೆ. ಆಕಾಶವಾಣಿ ಏಕೆ ಬೇಕು ಎನ್ನುವ ಮಾತು ಸಮಂಜಸವಲ್ಲ. ಅದನ್ನು ಉಳಿಸಿ ಅಗತ್ಯತೆಗೆ ಅನುಗುಣವಾಗಿ ಬೆಳೆಸುವ ಕಾರ್ಯವಾಗಬೇಕಿದೆ. ಈ ಜವಾಬ್ದಾರಿ ಯಾರದು? ಸರಕಾರದ್ದೇನೋ ನಿಜ. ಅದಕ್ಕೆ ಮಿಗಿಲಾಗಿ ಇದು ಪ್ರತಿಯೊಬ್ಬ ನಾಗರಿಕನ ಕರ್ತವ್ಯ ಅಷ್ಟೇ ಅಲ್ಲ, ಹಕ್ಕು ಕೂಡ. ಹೀಗಾದಾಗ ಮಾತ್ರ ನಮ್ಮ ದೇಶದಲ್ಲಿ ಆಕಾಶವಾಣಿಯ ಅಗಾಧ ಶಕ್ತಿ, ಸಾಮರ್ಥ್ಯಗಳ ಸಮರ್ಪಕ ಹಾಗೂ ಸಮಗ್ರ ಬಳಕೆಯಾದೀತು.



(ಧಾರವಾಡ ಆಕಾಶವಾಣಿ ಕೇಂದ್ರದ ನಿರ್ದೇಶಕರಾಗಿ ನಿವೃತ್ತಿ ಹೊಂದಿರುವ ಬೆಳ್ಳಕ್ಕಿಯವರು ಕರ್ನಾಟಕ ಸರ್ಕಾರದ ಅಭಿವೃದ್ಧಿ ಪತ್ರಿಕೋದ್ಯಮ ಪ್ರಶಸ್ತಿಗೂ ಪಾತ್ರರಾಗಿದ್ದಾರೆ.)

ಭರವಸೆ ಕಳೆದುಕೊಂಡಿರುವ ಉದ್ಯೋಗಿಗಳು

-ಡಾ. ಬಸವರಾಜ ಸಾದರ್



ಪ್ರಧಾನಿ ಜವಾಹರಲಾಲ್ ನಹ್ರೂರಿಂದ ಆಕಾಶವಾಣಿಯಲ್ಲಿ ಪ್ರಸಾರ ಭಾಷಣ

ಆಕಾಶವಾಣಿ ತನ್ನ ಹಳೆಯ ವೈಭವ ಕಳೆದುಕೊಂಡು ಈಗ ಒಂದು ಸಮೂಹ ಮಾಧ್ಯಮವಾಗಿ ತೆವಳುತ್ತಿರುವುದು ಒಂದು ವಾಸ್ತವ. ಇದಕ್ಕೆ ಏನು ಕಾರಣ? ಆಕಾಶವಾಣಿಯಲ್ಲಿ ಮುವ್ವತ್ತು ವರ್ಷಗಳಿಗೂ ಹೆಚ್ಚು ಕಾಲ ವಿವಿಧ ಹುದ್ದೆಗಳನ್ನು ನಿರ್ವಹಿಸಿರುವ ನನಗೆ ಅನ್ನಿಸುವುದು ಹೀಗೆ:

ಆಕಾಶವಾಣಿಯ ಆಡಳಿತ ಮೊದಲು ಕೇವಲ ಅದರ "ಮಹಾನಿರ್ದೇಶನಾಲಯ"ದಿಂದಲೇ ನಡೆಯುತ್ತಿತ್ತು. ಇಡೀ ದೇಶದ ಎಲ್ಲ ಕೇಂದ್ರಗಳ ಕಾರ್ಯಕ್ರಮ, ತಾಂತ್ರಿಕ, ಆರ್ಥಿಕ ಮತ್ತು ಆಡಳಿತಾತ್ಮಕ ನಿರ್ವಹಣೆಯನ್ನು ಮಹಾನಿರ್ದೇಶನಾಲಯವೊಂದೇ ಅತ್ಯಂತ ಸಮರ್ಥವಾಗಿ ನಿರ್ವಹಿಸುತ್ತಿತ್ತು. ಸರಕಾರದ ಇಲಾಖೆಯಾಗಿದ್ದ ಕಾರಣ ಅದರ ಆರ್ಥಿಕ ನಿರ್ವಹಣೆ ಕೂಡ ಸರಕಾರದಿಂದಲೇ ನಡೆಯುತ್ತಿತ್ತು. ಹೀಗಿದ್ದ ಸಂದರ್ಭದಲ್ಲಿ 'ಸ್ವಾಯತ್ತತೆ ಮತ್ತು ಸ್ವಾತಂತ್ರ್ಯ'ದ ಹೆಸರಿನಲ್ಲಿ ಅದನ್ನು "ಪ್ರಸಾರಭಾರತಿ" ಎಂಬ ಕಾರ್ಪೋರೇಶನ್‌ನ್ನಾಗಿ ಮಾಡಿ, ಸರಕಾರದ ನೇರ ನಿರ್ವಹಣೆಯಿಂದ ಬಿಡಿಸಿ ಮಂಡಳಿಗೆ ಹಸ್ತಾಂತರಿಸಲಾಯ್ತು. ಆದರೆ ಆದದ್ದೇನು? ನೇರ ಸರಕಾರದ ಬದಲಾಗಿ, ಸರಕಾರವೇ ನಿಯಮಿಸಿದ ಮಂಡಳಿಯು, ಸರಕಾರವೇ ಕೊಡಮಾಡುವ ಹಣಕಾಸಿನಿಂದ ಆಡಳಿತ ನಡೆಸುವ ವ್ಯವಸ್ಥೆ ಬಂತು. ಮಂಡಳಿಯ ಸಿಇಓ, ಸಿಇಓ ಜೊತೆಗೆ ಮಂಡಳಿಯ ವಿವಿಧ ಸದಸ್ಯರು, ಅವರೆಲ್ಲರ ಮೇಲೆ ಪ್ರಸಾರಭಾರತಿಯ ಅಧ್ಯಕ್ಷರು-ಇವರೆಲ್ಲರನ್ನೂ ನಿರ್ವಹಿಸುವ ಮಂತ್ರಾಲಯ, ಅದಕ್ಕೂ ಮೇಲೆ ಸರಕಾರ-ಹೀಗೆ ಒಂದು ದೊಡ್ಡ ಸರಪಣಿಯೇ ನಿರ್ಮಾಣವಾಗಿ, ಕೇವಲ ಮಹಾನಿರ್ದೇಶಕರಿಂದ ಅತ್ಯಂತ ಸುಸೂತ್ರ ಮತ್ತು ವ್ಯವಸ್ಥಿತವಾಗಿ ನಡೆಯುತ್ತಿದ್ದ ಆಡಳಿತವು ಚಿಂದಿ ಚಿತ್ರಾನ್ನವಾಗಿ ಹೋಯಿತು!

ಅಚ್ಚರಿಯೆಂದರೆ, ಈ ಎಲ್ಲ ಕಥೆ ನಡೆಯುತ್ತಿರುವಾಗಲೂ ಆಕಾಶವಾಣಿಯ ಅಂದಿನ ಉದ್ಯೋಗಿಗಳು ತಮ್ಮ ಆಸಕ್ತಿಯನ್ನು ಎಳ್ಳಷ್ಟೂ ಕಳೆದುಕೊಳ್ಳದೇ ನಿಜವಾದ ಸಾಮಾಜಿಕ ಕಾಳಜಿ ಮತ್ತು ಮಾಧ್ಯಮ ಪ್ರಜ್ಞೆಯಿಂದಲೇ ಕೆಲಸ ಮಾಡುತ್ತಿದ್ದರು. ಅದಕ್ಕೆ ಮುಖ್ಯ ಕಾರಣ ಅವರಲ್ಲಿದ್ದ ಬದ್ಧತೆ ಮತ್ತು ಕೆಲಸದಲ್ಲಿನ ಪ್ರೀತಿಯಾಗಿತ್ತು. ಅವರಲ್ಲಿದ್ದ ಸೃಜನಶೀಲ ಮತ್ತು ಕ್ರಿಯಾತ್ಮಕ ಕಾಳಜಿಗಳು ಅವರನ್ನು ಕೆಲಸದಿಂದ ವಿಮುಖ ಮಾಡಿರಲಿಲ್ಲ. ಆದರೆ, ಬದಲಾದ ಹೊಸ ವ್ಯವಸ್ಥೆಯ ಎಲ್ಲ ಹಂತಗಳಲ್ಲೂ ಸ್ಪಷ್ಟವಾಗಿ ಕಂಡದ್ದು ಕಾರ್ಯಕ್ರಮ ಸಿಬ್ಬಂದಿಯ ಹಿತ ಕಾಯುವಲ್ಲಿನ ನಿರ್ಲಕ್ಷ್ಯ. ಇದರ ಪರಿಣಾಮವೆಂದರೆ ಇಪ್ಪತ್ತೈದು-ಮೂವತ್ತು ವರ್ಷ ಕಳೆದರೂ ಆಕಾಶವಾಣಿಯ ಹೆಚ್ಚಿನ ಸಿಬ್ಬಂದಿಗೆ, ಅದರಲ್ಲೂ ಕಾರ್ಯಕ್ರಮ ಸಿಬ್ಬಂದಿಗೆ ಸಿಗಬೇಕಾದ ಬಡತಿ ಸಿಗಲಿಲ್ಲ. ಇದರ ಬಗೆಗೆ ಉದ್ಯೋಗಿಗಳು ಮೇಲಿನವರಿಗೆ ಮಾಡಿಕೊಂಡ ನೂರು-ಸಾವಿರ ವಿನಂತಿಗಳು, ಕೋರಿಕೆಗಳು ನಿಷ್ಫಲವಾದವು. ಹೀಗಾಗಿ ಸೇವಾವಿಷಯಕವಾದ ಸಾವಿರಾರು ಪ್ರಕರಣಗಳು ಹತ್ತಾರು ವರ್ಷಗಳಿಂದ ವಿವಿಧ ಕೋರ್ಟುಗಳಲ್ಲಿ ನಡೆಯುತ್ತಲೇ ಇವೆ. ಹೀಗೆ, ನಿರಂತರ ಶೋಷಣೆಗೊಳಗಾಗುತ್ತಿರುವ ಈ ಉದ್ಯೋಗಿಗಳು ಮುಂದಿನ ಭರವಸೆಯನ್ನೇ ಕಳೆದುಕೊಂಡಿರುವುದು ಆಶ್ಚರ್ಯವೇನಲ್ಲ. ಇದರ ಪರಿಣಾಮವೇ 'ಏನಾದರೂ' ಕಾರ್ಯಕ್ರಮ ನಿರ್ಮಿಸುವ ಹಾಗೂ 'ತಟ್ಟೆ -ಅಂದರೆ ಹಳೇ ಧ್ವನಿ ಮುದ್ರಿಕೆ- ತಿರುಗಿಸುವ' ಕೆಲಸ. ಇದು ಅಪೇಕ್ಷಣೀಯವಲ್ಲವಾದರೂ ಅನಿವಾರ್ಯವಾಗಿ ನಡೆಯುತ್ತಿರುವ ವಾಸ್ತವ ಸ್ಥಿತಿ. ಇದಕ್ಕೆ ಯಾರು ಹೊಣೆ?

ಸ್ವಾಯತ್ತತೆಯನ್ನು ಕೊಟ್ಟಿರುವ ಸರಕಾರ, ಇದನ್ನು ಉಪಯೋಗಿಸಿಕೊಂಡು ಆರ್ಥಿಕವಾಗಿ ನಿಮ್ಮನ್ನು ನೀವೇ ನಿರ್ವಹಿಸಿಕೊಳ್ಳುವ ವ್ಯವಸ್ಥೆ ಮಾಡಿಕೊಳ್ಳಿ ಎಂದು ಹೇಳಿತು. ಅಷ್ಟೇ ಅಲ್ಲ, ೨೦೧೭ರವರೆಗೆ ಮಾತ್ರ ಸರಕಾರದ ಅನುದಾನ, ಆನಂತರ ಅದು ನಿಲ್ಲುತ್ತದೆಯೆಂದೂ ಹೇಳಿತು. ಇಲ್ಲಿಂದಲೇ ಆರಂಭವಾದದ್ದು

ವಾಣಿಜ್ಯಾದಾಯದ ಒತ್ತಡ. ಈ ಒತ್ತಡವನ್ನು ನೇರವಾಗಿ ಹಾಕಿದ್ದು ಕೇವಲ ಕಾರ್ಯಕ್ರಮ ವಿಭಾಗದ ಸಿಬ್ಬಂದಿಯ ಮೇಲೆ. ಒಂದು ಕಡೆ "ಸಾರ್ವಜನಿಕ ಪ್ರಸಾರ ಸೇವೆ" ಎಂದು ಘೋಷಿಸಿಕೊಂಡಿರುವ ಈ ವ್ಯವಸ್ಥೆಯು ಮತ್ತೊಂದು ಕಡೆ ರೆವಿನ್ಯೂ ಇಲಾಖೆಯಂತೆ ಆದಾಯವನ್ನು ಗಳಿಸಿಕೊಡಬೇಕಾದ ಜವಾಬ್ದಾರಿಯನ್ನೂ ನಿಭಾಯಿಸಬೇಕಾಗಿದೆ!! ಇದನ್ನೂ ಒಪ್ಪಿಕೊಂಡು ಕೋಟಿಗಟ್ಟಲೆ ಹಣವನ್ನೂ ಸಂಪಾದಿಸುತ್ತಿದೆ ಕಾರ್ಯಕ್ರಮ ಸಿಬ್ಬಂದಿ. ಹೀಗೆ ತಮ್ಮ ಸ್ವಸಾಮರ್ಥ್ಯದಿಂದ ಹಣ ಗಳಿಸುವ ಮತ್ತು ಕಾರ್ಯಕ್ರಮಗಳನ್ನು ನಿರ್ಮಿಸುವ– ಎರಡೂ ಜವಾಬ್ದಾರಿ ನಿರ್ವಹಿಸುತ್ತಿರುವ ಉದ್ಯೋಗಿಗಳು ಈ ಎರಡರಲ್ಲಿ ಯಾವುದು ಮುಖ್ಯ, ಯಾವುದು ಅಮುಖ್ಯ ಎಂದು ನಿರ್ಧರಿಸಲಾಗದೇ ಅಂತೂ ಎರಡನ್ನೂ ಮಾಡುತ್ತಿದ್ದಾರೆ. ಇನ್ನು 'ಕೆಲವರು' ಈ ಎರಡೂ ಕಾರಣಗಳನ್ನು ಮುಂದೆ ಮಾಡಿಕೊಂಡು, ಎರಡನ್ನೂ ಮಾಡದೇ 'ಏನಾದರೂ' ಕಾರ್ಯಕ್ರಮ ನಿರ್ಮಿಸುವ ಹಾಗೂ 'ತಟ್ಟೆ ತಿರುಗಿಸುವ' ಕೆಲಸದಲ್ಲಿ ತೊಡಗಿದ್ದಾರೆ. ಇದು ಯಾವ ಸ್ಥಿತಿ ಮುಟ್ಟಿದೆಯೆಂದರೆ, ಮೂವತ್ತು ನಲವತ್ತು ವರ್ಷಗಳ ಹಿಂದೆ ನಿರ್ಮಾಣವಾದ ಕಾರ್ಯಕ್ರಮಗಳ ಮರುಪ್ರಸಾರ ಯಾವುದೇ ದೇಶ–ಕಾಲಗಳ ಪರಿಷ್ಕರಣೆಯೂ ಇಲ್ಲದೆ ಎಗ್ಗಿಲ್ಲದೆ ನಡೆದಿದೆ.

ತಾಂತ್ರಿಕವಾಗಿಯೂ ಅಷ್ಟೇ. ಆಕಾಶವಾಣಿಯ ಮುಖ್ಯವಾಹಿನಿಯ ಬಹುತೇಕ ಕಾರ್ಯಕ್ರಮಗಳು ಮಧ್ಯಮ(ಎಮ್ ಡಬ್ಲು) ತರಂಗಾಂತರಗಳಿಂದ ಪ್ರಸಾರವಾಗುತ್ತವೆ. ಇದು ಓಬೀರಾಯನ ಕಾಲದ ತಾಂತ್ರಿಕತೆ. ಈ ತರಂಗಾಂತರಗಳಿಂದ ಪ್ರಸಾರವಾಗುವ ಕಾರ್ಯಕ್ರಮಗಳನ್ನು ಕೇಳಲು ಈಗ ಎಮ್.ಡಬ್ಲು ತರಂಗಾಂತರಗಳನ್ನು ಹಿಡಿದುಕೊಡುವ ರೇಡಿಯೋ ಸೆಟ್‌ಗಳೇ ಮಾರುಕಟ್ಟೆಯಲ್ಲಿ ಸಿಗುವುದಿಲ್ಲ. 'ಯಾರಪ್ಪಾ ಈಗ ರೇಡಿಯೋ ಕೇಳ್ತಾರೆ?' ಎಂಬ ಪ್ರಶ್ನೆ ಈ ಕಾರಣಕ್ಕಾಗಿಯೂ ಕೇಳಿದ್ದಾಗಿರಬೇಕೆನಿಸುತ್ತದೆ. ಈಗ ಏನಿದ್ದರೂ ಎಫ್.ಎಮ್. ಯುಗ. ಆಕಾಶವಾಣಿಯ ಕಾರ್ಯಕ್ರಮಗಳೇನಾದರೂ ನಿಜಕ್ಕೂ ಜನರಿಗೆ ತಲುಪಬೇಕೆಂಬ ಖಚಿತ ಉದ್ದೇಶ ಇದ್ದರೆ, ಈ ತಕ್ಷಣಕ್ಕೆ ಮಧ್ಯಮ ತರಂಗಾಂತರದ ಎಲ್ಲ ಪ್ರಸಾರಕಗಳನ್ನೂ ಮೊದಲು ಎಫ್.ಎಮ್. ತರಂಗಾಂತರಕ್ಕೆ ಪರಿವರ್ತಿಸಬೇಕು. ಇದರ ಬಗ್ಗೆ ಹಲವಾರು ಸಭೆಗಳಲ್ಲಿ ಚರ್ಚೆಗಳು ನಡೆದಿದ್ದರೂ, ಇನ್ನೂ ಈ ಬದಲಾವಣೆ ಸಾಧ್ಯವಾಗಿಲ್ಲ. ಇಂಥ ಸ್ಥಿತಿಯಲ್ಲೂ ಅಲ್ಲಲ್ಲಿ ಅದರಲ್ಲೂ ಮುಖ್ಯವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಉಳಿದಿರುವ ಹಳೆಯ ರೇಡಿಯೋ ಸೆಟ್‌ಗಳ ಮೂಲಕವೇ ಆಕಾಶವಾಣಿ ಇನ್ನೂ ಕೆಲವಾದರೂ ಕೇಳುಗರನ್ನು ಉಳಿಸಿಕೊಂಡಿರುವುದು ಅದರ ಅಗತ್ಯ ಮತ್ತು ಮಹತ್ವವನ್ನು ತೋರಿಸುತ್ತದೆ.

ಈ ಎಲ್ಲ ಬೆಳವಣಿಗೆಗಳಿಗೆ ಯಾರು ಹೊಣೆ? ಯಾರು ಕಾರಣರು? ಎಂಬ ಪ್ರಶ್ನೆಗಳಿಗೀಗ ಉತ್ತರ ಹುಡುಕುವ ಜರೂರು ತುಂಬ ಇದೆ. ಮುಖ್ಯವಾಗಿ ಆಕಾಶವಾಣಿ ಮಹಾನಿರ್ದೇಶನಾಲಯ ತನ್ನ ಸಿಬ್ಬಂದಿಯ ಸ್ಥಗಿತ ಸೇವಾಸ್ಥಿತಿಯ ಬಗೆಗೆ ಮತ್ತು ಅದಕ್ಕೆ ನ್ಯಾಯಬದ್ಧವಾಗಿ ಸಿಗಬೇಕಾಗಿರುವ ಸವಲತ್ತುಗಳ ಬಗೆಗೆ ಯೋಚಿಸಿ ತುರ್ತಾಗಿ ಅಗತ್ಯ ಕ್ರಮಗಳನ್ನು ಕೈಕೊಳ್ಳಬೇಕು. ಹೀಗಾದರೆ ಮಾತ್ರ ದೀರ್ಘಕಾಲದಿಂದ ನೊಂದಿರುವ ಮತ್ತು ಆಕ್ರೋಶಗೊಂಡಿರುವ ಮನಸ್ಸುಗಳು ಹೊಸ ಹುರುಪಿನಿಂದ ಕೆಲಸ ಮಾಡಲು ಸಾಧ್ಯ. ಮಹಾನಿರ್ದೇಶನಾಲಯಕ್ಕೆ ಇದು ಕಷ್ಟಕರ ಕೆಲಸವೇನಲ್ಲ. ಏಕೆಂದರೆ ಇದರಲ್ಲಿ ಜಟಿಲವಾದ ಯಾವ ಕಾನೂನಿನ ತೊಡಕುಗಳೂ ಇಲ್ಲ. ಇರಬೇಕಾದದ್ದು ಒಳ್ಳೆಯದನ್ನು ಮಾಡಬೇಕೆಂಬ ಮನಸ್ಸು ಮತ್ತು ಅದಕ್ಕನುಗುಣವಾದ ಆಡಳಿತಾತ್ಮಕ ಕಾರ್ಯತತ್ಪರತೆ.



(ಬೆಂಗಳೂರು ಆಕಾಶವಾಣಿಯ ನಿರ್ದೇಶಕರಾಗಿ ನಿವೃತ್ತರಾಗಿರುವ ಬಸವರಾಜ ಸಾದರ ಅವರು, ಕನ್ನಡದ ಹಿರಿಯ ಲೇಖಕರೂ ಹೌದು)

ಸಾರ್ವಜನಿಕ ಸೇವೆಯೋ, ವಾಣಿಜ್ಯ ಉದ್ದೇಶವೋ ಎಂಬ ದ್ವಂದ್ವದಲ್ಲಿ...

–ಡಾ. ವಸಂತಕುಮಾರ್ ಪೆರ್ಲ



ಆಕಾಶವಾಣಿ ಕೇಂದ್ರವೊಂದರ ಪ್ರಸಾರ ಕೊಠಡಿ

೧. ಆಕಾಶವಾಣಿ ಒಂದು ಸಮೂಹ ಮಾಧ್ಯಮವಾಗಿ ಇಂದು ಎದುರಿಸುತ್ತಿರುವ ಬಿಕ್ಕಟ್ಟುಗಳು ಯಾವುವು? ಎಂತಹವು?

ಇದೊಂದು ಸಾರ್ವಜನಿಕ ಸೇವೆಯೇ ಅಥವಾ ವಾಣಿಜ್ಯ ಉದ್ದೇಶದ ಪ್ರಸಾರವೇ ಎಂಬ ದ್ವಂದ್ವವೇ ಸಮೂಹ ಮಾಧ್ಯಮವಾಗಿರುವ ಆಕಾಶವಾಣಿಯ ಮುಂದೆ ಸಾಂಸ್ಥಿಕವಾಗಿ ಕಾಣಿಸಿಕೊಂಡಿರುವ ಬಹುದೊಡ್ಡ ಬಿಕ್ಕಟ್ಟು ಅನ್ನಿಸುತ್ತದೆ.

೨. ಈ ಬಿಕ್ಕಟ್ಟುಗಳಿಗೆ ಕಾರಣಗಳು ಏನಿರಬಹುದೆಂದು ನೀವು ಗುರುತಿಸುತ್ತೀರಿ?

ಕಳೆದ ಎರಡೂವರೆ ದಶಕಗಳ ಹಿಂದೆ ಸರಕಾರವು ತೆಗೆದುಕೊಂಡ ಆರ್ಥಿಕ ಉದಾರೀಕರಣ, ಖಾಸಗೀಕರಣ ಮತ್ತು ವಾಣಿಜ್ಯೀಕರಣ ಎಂಬ ಐತಿಹಾಸಿಕ ನಿರ್ಧಾರದಿಂದಾಗಿ, ಸರಕಾರದ ಹಲವು ಇಲಾಖೆಗಳು ಇಂದು ಸಂಕಷ್ಟವನ್ನು ಎದುರಿಸುವಂತಾಗಿದೆ. ಆಕಾಶವಾಣಿ ಕೂಡ ಇದಕ್ಕೆ ಹೊರತಾಗಿಲ್ಲ. ಕಳೆದ ಎರಡೂವರೆ ದಶಕಗಳಿಂದ ನಿಧನಿಧಾನವಾಗಿ ಆಕಾಶವಾಣಿಗೆ ಆರ್ಥಿಕ ಸಂಪನ್ಮೂಲ ಹಾಗೂ ಮಾನವ ಸಂಪನ್ಮೂಲದ ಕೊರತೆ ಕಾಡಹತ್ತಿ, ಅದೀಗ ಉತ್ತುಂಗಕ್ಕೆ ತಲುಪಿದೆ. ಉಳಿದೆಲ್ಲ ಬಿಕ್ಕಟ್ಟುಗಳು ಇವನ್ನು ಆಧರಿಸಿ ಹುಟ್ಟಿದವು..


೩. ಈ ಬಿಕ್ಕಟ್ಟುಗಳು ಪರಿಹಾರವಾಗುವಂತಹವೇ? ಹಾಗಿದ್ದಲ್ಲಿ ಅವುಗಳ ಪರಿಹಾರ ಹೇಗೆ ಎಂದು ನೀವು ಭಾವಿಸುತ್ತೀರಿ?

ಈ ಬಿಕ್ಕಟ್ಟುಗಳು ಸದ್ಯದ ಪರಿಸ್ಥಿತಿಯಲ್ಲಿ ಪರಿಹಾರವಾಗುವ ಲಕ್ಷಣಗಳು ಕಾಣಿಸುತ್ತಿಲ್ಲ. ಪರಿಹಾರಕ್ಕೆ ಎರಡು ಹಾದಿಗಳು ನನಗೆ ತೋರುತ್ತವೆ:

ಅ). ಆಕಾಶವಾಣಿ ಎಂಬ ಸಂಸ್ಥೆಯನ್ನು ಸಂಪೂರ್ಣವಾಗಿ ಸರಕಾರವೇ ನಿರ್ವಹಿಸುವುದು ಆ). ಅಥವಾ ಸಂಪೂರ್ಣವಾಗಿ ಖಾಸಗಿಯವರಿಗೆ ಹಸ್ತಾಂತರಿಸಿಬಿಡುವುದು. ಅಂತಹ ಸಂದರ್ಭದಲ್ಲಿ ಸರಕಾರವು ಸ್ಪಷ್ಟವಾದ ನೀತಿನಿರೂಪಣೆ ಮಾಡಿ (Policy ತಯಾರಿಸಿ), ಚೌಕಟ್ಟನ್ನು ಹಾಕಿಕೊಡಬೇಕು. ಖಾಸಗಿ ಆಡಳಿತ ವ್ಯವಸ್ಥೆಯಲ್ಲಿ – ಹೊಸ ತಲೆಮಾರಿನ ತರುಣರ ಕೈಯಲ್ಲಿ – ತೀರಾ ಹೊಸತನದಿಂದ ಈ ಮಾಧ್ಯಮವನ್ನು ಮುಂದುವರಿಸಬಹುದು.

೪. ಖಾಸಗಿ ರೇಡಿಯೋ ಕೇಂದ್ರಗಳ ಸ್ಪರ್ಧೆ ಉಂಟುಮಾಡಿರುವ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಆಕಾಶವಾಣಿಯ ಸಾಂಸ್ಕೃತಿಕತೆಯನ್ನು ಉಳಿಸಿಕೊಂಡೂ ಅದನ್ನು ಎದುರಿಸುವ ಬಗೆ ಹೇಗೆ?

ಆಕಾಶವಾಣಿಗೆ ಮಾಹಿತಿ, ಶಿಕ್ಷಣ ಮತ್ತು ಮನರಂಜನೆ ಎಂಬ ಮೂರು ಮಜಲುಗಳಿದ್ದರೆ ಖಾಸಗಿ ಎಫ್.ಎಂ. ಕೇಂದ್ರಗಳಿಗೆ ಮನರಂಜನೆ ಎಂಬ ಒಂದು ಮಜಲು ಮಾತ್ರ ಇದೆ. ಇವುಗಳ ಮೂಲ ಆಶಯದಲ್ಲಿಯೇ ವ್ಯತ್ಯಾಸ ಇರುವುದರಿಂದ 'ಸ್ಪರ್ಧೆ' ಎಂಬ ಮಾತಿಗೆ ಆಸ್ಪದವಿಲ್ಲ. ಅಂತಹ ಸ್ಪರ್ಧೆಯ ಸಂದರ್ಭದಲ್ಲಿ ಅದನ್ನು ಹೀಗೆ ಎದುರಿಸಬಹುದು: ಆಕಾಶವಾಣಿಯ ಪ್ರತಿಯೊಂದು ಕೇಂದ್ರದಲ್ಲಿ ಎರಡು ವಾಹಿನಿಗಳನ್ನು ಆರಂಭಿಸಬಹುದು. ಒಂದನ್ನು 'ಜನಸೇವೆ'ಗಾಗಿ ಮೀಸಲಿಟ್ಟು, ಇನ್ನೊಂದನ್ನು 'ಮನರಂಜನೆ'ಗೆ ಮೀಸಲಿಟ್ಟರೆ ಎರಡು ಉದ್ದೇಶಗಳೂ ಈಡೇರುತ್ತವೆ ಎಂದು ನನಗೆ ತೋರುತ್ತದೆ.



(ಮಂಗಳೂರು ಆಕಾಶವಾಣಿಯ ಸಹಾಯಕ ನಿರ್ದೇಶಕರಾಗಿರುವ ಪೆರ್ಲ ಅವರು ಕನ್ನಡ ಮತ್ತು ತುಳು ಎರಡೂ ಭಾಷೆಗಳ ಲೇಖಕರು)

ನಾನು ಈಗಲೂ ಆಕಾಶವಾಣಿ ಕೇಳುತ್ತೇನೆ. ಆದರೆ...

–ಎಚ್.ಎಂ. ಪ್ರಭಾವತಿ



ಆಕಾಶವಾಣಿಯಲ್ಲಿ ಪಂ. ಬಸವರಾಜ ರಾಜಗುರು ಅವರ ಸಂಗೀತ ಕಛೇರಿ

ನಾನು ಎಂಟನೇ ತರಗತಿಯಲ್ಲಿದ್ದಾಗ ನಮ್ಮ ಮನೆಗೆ ರೇಡಿಯೋ ಬಂತು. ಅಂದಿನಿಂದಲೂ, ಈಗಲೂ ನನಗೆ ರೇಡಿಯೋ ಸಂಗಾತಿಯಾಗಿದೆ. ಬೆಳಗಿನ ಆರು ಘಂಟೆಯಿಂದ ಒಂಭತ್ತು ಘಂಟೆವರೆಗೆ, ಮನೆಕೆಲಸ ಮಾಡುತ್ತಾ ರೇಡಿಯೋ ಆಲಿಸುತ್ತಾ ಇರುತ್ತೇನೆ. ಚಿಕ್ಕಂದಿನಲ್ಲಿ ಶನಿವಾರ ಬೆಳಗಿನ ಶಾಲೆಗೆ ಹೋಗುವಾಗ ರೇಡಿಯೋದಲ್ಲಿ ಬರುತ್ತಿದ್ದ ಎಂ.ಎಸ್.ಸುಬ್ಬಲಕ್ಷ್ಮಿಯವರ ವೆಂಕಟೇಶ ಸುಪ್ರಭಾತವನ್ನು ಬೀದಿಯುದ್ದಕ್ಕೂ ಆಲಿಸುತ್ತಾ ಶಾಲೆ ಸೇರುತ್ತಿದ್ದೆವು. ನಂತರ ಸಂಸಾರ, ವೃತ್ತಿಯ ನಡುವೆಯೂ ಬೆಳಗಿನ ಮತ್ತು ಸಂಜೆಯ ಸಂಗೀತ, ಸಾಹಿತ್ಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಕೇಳುವುದು ಹವ್ಯಾಸವಾಗಿದೆ.

ಹೀಗೆ ರೇಡಿಯೋ ಶಾಸ್ತ್ರೀಯ ಸಂಗೀತ, ನಾಟಕ, ಸಾಹಿತ್ಯಿಕ ಕಾರ್ಯಕ್ರಮಗಳೊಂದಿಗೆ ಬೆಳೆದುಬಂದವಳು ನಾನು. ಪ್ರತಿ ಶನಿವಾರ ಭಾನುವಾರ ರಾತ್ರಿ ದೆಹಲಿ ಕೇಂದ್ರದಿಂದ ಪ್ರಸಾರವಾಗುವ ರಾಷ್ಟ್ರೀಯ/ಪ್ರಾದೇಶಿಕ ಶಾಸ್ತ್ರೀಯ ಸಂಗೀತ ಕಾರ್ಯಕ್ರಮಗಳನ್ನು ತಪ್ಪದೇ ಇಂದೂ ಕೇಳುತ್ತೇನೆ. ಹೀಗೆ ರೇಡಿಯೋ ಮನೆ ಮನೆಗಳಿಗೆ ಸಂಸ್ಕೃತಿ ಪ್ರಸಾರದ ಸಾಧನವಾಗಿ, ಮನರಂಜನೆಯನ್ನು ಕೊಡುತ್ತಾ, ತಿಳುವಳಿಕೆಯನ್ನು ಹೆಚ್ಚಿಸುತ್ತಾ/ತಿದ್ದುತ್ತಾ ಒಂದು ಸಾಂಸ್ಕೃತಿಕ ಸಂಸ್ಥೆಯಾಗಿತ್ತು ಎಂಬುದು ಮಹತ್ವದ ಸಂಗತಿ.

ಎಷ್ಟೋ ನಮ್ಮ ಸ್ನೇಹಿತರ ಮನೆಗಳಲ್ಲಿ ರೇಡಿಯೋ ಮಾಯವಾಗಿ ಟಿವೀ ಅರಚುತ್ತಿರುವುದನ್ನು ಕೇಳಿಸಿಕೊಂಡಾಗ, ರೇಡಿಯೋ ಮಾಧ್ಯಮದ ದುರ್ದೆಸೆಗೆ ದೂರದರ್ಶನ ಎಷ್ಟು ಕಾರಣ? ಆಕಾಶವಾಣಿ ಕಾರ್ಯಕ್ರಮಗಳು ಹೇಗೆ ಕಾರಣ? ರೇಡಿಯೋ ಕಾರ್ಯಕ್ರಮಗಳೂ ಗುಣಮಟ್ಟವನ್ನು ಕಳೆದುಕೊಂಡಿವೆಯೇ? ಎಂಬ ಪ್ರಶ್ನೆಗಳು ನನ್ನಲ್ಲಿ ಎದ್ದಿವೆ. ಇಂಥ ಸಂದರ್ಭದಲ್ಲಿ ಇನ್ನೂ ರೇಡಿಯೋ ವ್ಯಾಮೋಹಿಯಾಗಿರುವ ನನ್ನಂಥವಳಿಗೆ ರೇಡಿಯೋ ಕಾರ್ಯಕ್ರಮದ ಗುಣಮಟ್ಟ ಕುಸಿಯುತ್ತಿರುವುದು ಅನುಭವಕ್ಕೆ ಬರುತ್ತಿದೆ.

ಸಾಂಸ್ಕೃತಿಕವಾಗಿದ್ದ ರೇಡಿಯೋ ಕಮರ್ಷಿಯಲ್ ಆಗಿ ಅಭಿರುಚಿಯನ್ನು ಸರಳವಾಗಿಸಿ ಕೆಳಮಟ್ಟಕ್ಕಿಳಿಸುತ್ತಿರುವುದು ವಿಷಾದನೀಯ: ಸಂಗೀತ, ನ್ಯೂಸ್, ಎಲ್ಲ ಕಾರ್ಯಕ್ರಮದ ಮಧ್ಯದಲ್ಲಿಯೂ ತೂರಿಬರುತ್ತಿರುವ ಸರ್ಕಾರಿ ಯೋಜನೆಗಳ ಪ್ರಚಾರ. ಕೊಳ್ಳುಬಾಕ ಮನಸ್ಸುಗಳನ್ನು ಪ್ರಚೋದಿಸಲೆಂದೇ ನುಸುಳಿಬರುವ ವಸ್ತು ವಿಷಯಗಳ ಪ್ರಚಾರಗಳಿಂದ ನನ್ನಂಥವರಿಗೆ ರೇಡಿಯೋ ಕೇಳುವುದು ಕಿರಿಕಿರಿಯಾಗುತ್ತಿದೆ. ೨೦ ನಿಮಿಷದ ಗೀತಾರಾಧನ ಕಾರ್ಯಕ್ರಮದಲ್ಲಿ ಮೂರು ಸಲ ಸರ್ಕಾರದ ಪ್ರಚಾರ ಕೇಳುವುದು ಹೇಗೆ?

ಕೇವಲ ರಂಜನೆಗೆ, ಮಾಹಿತಿ ಪ್ರಸಾರಕ್ಕೆ, ಸಂಪನ್ಮೂಲ ವ್ಯಕ್ತಿಗಳ ಒತ್ತಡಕ್ಕೋ, ಸರ್ಕಾರದ ತುತ್ತೂರಿಯಾಗಿಯೋ ರೂಪಿಸುವ ಕಾರ್ಯಕ್ರಮಗಳು ಸಂಸ್ಕೃತಿ ಸಂವರ್ಧನೆಯನ್ನು ಖಂಡಿತ ಮಾಡಲಾರವು. ಕೇಳುಗರ ಅಭಿರುಚಿಯನ್ನು ನಾಶಪಡಿಸಿ ಉದ್ರೇಕ ರಂಜನೆಯ, ಮಾರುಕಟ್ಟೆ ಮನಸ್ಸುಗಳನ್ನು ಬೆಳಸುವ ಕ್ರಮ, ಸುಸಂಸ್ಕೃತಿಯ ಹಿತವನ್ನು ಸಾಧಿಸಲಾರದು. ಇಂಥವುಗಳನ್ನು ಕೊಡವಿಹಾಕಿ, ಸದಭಿರುಚಿಯನ್ನು ಬೆಳಸುವ, ಸಂಸ್ಕೃತಿಯ ಮಹತ್ವವನ್ನು ಸಂವರ್ಧಿಸುವ ಕಾರ್ಯಕ್ರಮಗಳನ್ನು ರೂಪಿಸುವ ಕೆಲಸವಾಗಬೇಕಿದೆ. ಮಾಡುವವರು ಯಾರು?

(ಎಂಬತ್ತರ ದಶಕದಲ್ಲಿ ಭದ್ರಾವತಿ ಆಕಾಶವಾಣಿಯಲ್ಲಿ ಉದ್ಘೋಷಕಿಯಾಗಿದ್ದ ಪ್ರಭಾವತಿಯವರು ನಂತರ ಶಾಲಾ ಅಧ್ಯಾಪಕಿಯಾಗಿ, ಕಾಲೇಜು ಉಪನ್ಯಾಸಕಿಯಾಗಿ ಸೇವೆ ಸಲ್ಲಿಸಿ ಈಗ ಶಿವಮೊಗ್ಗದಲ್ಲಿ ನಿವೃತ್ತ ಜೀವನ ನಡೆಸುತ್ತಿದ್ದಾರೆ.)



ಆಕಾಶವಾಣಿ ಎಂಬ ಸವಿನೆನಪು...

–ಬಿ.ಎಸ್. ದಿವಾಕರ್

ರೇಡಿಯೋ ಎಂದರೆ ಆಕಾಶವಾಣಿ ಎಂದು ನಂಬಿ ಬೆಳೆದ ಬಾಲ್ಯ ನನ್ನದಾಗಿತ್ತು. ಮನೆಯಲ್ಲಿರುವ ಅಜ್ಜನಂತೆ ಮೂಲೆಯೊಂದರಲ್ಲಿ ಗಂಭೀರವಾಗಿ ಸ್ಥಾಪಿತವಾಗಿತ್ತು. ಆತನ ಸಲೀಸಲ್ಲದ ಉಸಿರಾಟ, ಬೀಡಿ ಹೊಗೆಯ ಕೆಮ್ಮು, ಕಫದ ಗೊರ ಗೊರ ಸದ್ದುಗಳೊಂದಿಗೆ ಮೂಡಿಬರುತ್ತಿದ್ದ ಅಶರೀರವಾಣಿ ಅದಾಗಿತ್ತು. ಪುಟ್ಟ ಪೆಟ್ಟಿಗೆಯೊಳಗೆ ಅದೆಷ್ಟು ಜನ, ದನಿ ಎಂದು ಬೆಪ್ಪಾಗಿ ಬೆರಗಾಗುವುದು, ಮುಂಜಾನೆಯ ಚುಮು ಚುಮು ಬೆಳಕಿನಲ್ಲಿ, ಅದೆಲ್ಲಿಂದಲೋ ನಾನಾಸ್ವರದಲ್ಲಿ ಕುಂಯೀ ಗುಟ್ಟುವುದರೊಂದಿಗೆ.... ವಂದೇ ಮಾತರಂ.... ಏಳಲೊಲ್ಲದ ಮನಸ್ಸಿಗೆ ಅಲಾರಾಂ ನೀಡುತ್ತಿತ್ತು. ರಾತ್ರಿ ೮.೪೫. ಏ ಆಕಾಶವಾಣಿ ಹೈ.... ಅಬ್ ಸಮಾಚಾರ್.... ಎಂಬುದನ್ನು ಕೇಳಿದರೆ, ಅಂದು ರಾತ್ರಿ ಬಹಳ ಹೊತ್ತು ಎಚ್ಚರಾಗಿದ್ದೆ ಎಂಬ ಹೆಮ್ಮೆ.

ಕರೆಂಟು ಇದ್ದರೆ ಉಸಿರಾಡುತ್ತಿದ್ದ ಪೆಟ್ಟಿಗೆಯ ಮುಂದಿನ ಸುಧಾರಿತ ತಳಿಯಾಗಿ ಬಂದ ಬ್ಯಾಟರಿಯ ಟ್ರಾನ್ಸಿಸ್ಟರ್, ಟೇಪ್ ರೆಕಾರ್ಡರ್ ಎಲ್ಲವೂ ಅಚ್ಚರಿಗಳೇ. ಕಾಲೇಜಿನಲ್ಲಿ ಓದುತ್ತಿದ್ದ ಸೋದರ ಮಾವಂದಿರ ಷೋಕಿಯ ಅವಿಭಾಜ್ಯ ಅಂಗಗಳೇ. ಅದೆಲ್ಲ ಅದೆಷ್ಟು ಬೇಗ ಬದಲಾಗಿ ಹೋಯಿತು! ನಂತರದ ದಿನಗಳಲ್ಲಿ ಆಳರಸರು ಹೇಳಿದಂತೆ ಬೊಗುಳುವ ನಾಯಿ, ಸರ್ಕಾರದ ತುತ್ತೂರಿ, ಸುದ್ದಿ ಬಿತ್ತರದಲ್ಲಿ ಬಲು ನಿಧಾನ, ನೀರಸ ಎಂದೆಲ್ಲಾ BBC ಎಂಬ ಮಿಂಚಿನ ಕನ್ಯೆಯ ಚಾಲಾಕು, ಬೆಡಗುಗಳಿಗೆ ಹೋಲಿಸಲ್ಪಡುತ್ತಾ ಹೀಗಳಿಕೆ, ತಿರಸ್ಕಾರಕ್ಕೆ ಒಳಗಾದ ಆಕಾಶವಾಣಿ ಕೇವಲ ಕ್ರಿಕೆಟ್ ಕಾಮೆಂಟರಿ ಕೇಳುವುದಕ್ಕೆ ಸೀಮಿತಗೊಂಡಿತು.



ಆಹ್ವಾನಿತ ಶ್ರೋತೃಗಳ ಸಮ್ಮುಖದ ಒಂದು ಕವಿಗೋಷ್ಠಿ

'ನಮ್ಮ ತಂತ್ರಜ್ಞಾನ ಮಾನವತೆಯನ್ನು ಮೀರಿ ಹೋಗಿದೆ ಎಂಬುದು ಗಾಬರಿ ಹುಟ್ಟಿಸುವ ವಿಷಯ' ಎಂಬ ಐನ್‌ಸ್ಟೈನ್ ಮಾತನ್ನು ಧ್ಯಾನಿಸುವಂತಾಗುತ್ತದೆ. "ಸರ್ವಜನ ಸುಖಾಯ.... ಸರ್ವಜನ ಹಿತಾಯ" ಎಂಬ ಘೋಷವಾಕ್ಯದ ಆಕಾಶವಾಣಿಯಿಂದ ಕ್ರಮೇಣ ದೂರಾಗುತ್ತ ಬಂದೆ. ಟಿ.ವಿ., ಇಂಟರ್‌ನೆಟ್, ಮೊಬೈಲ್, ಎಫ್.ಎಂ. ರೇಡಿಯೋ ಎನ್ನುವ ನವನವೀನ ಚಮತ್ಕಾರದ ಮಾಯಾಂಗನೆಯರ ಮಿಂಚಿನ ಓಟದಲ್ಲಿ.... ಜಿಂಕು ಜಿನ್ನಾಣ,

ವೈಯ್ಯಾರಗಳಿಂದ ದೂರವೇ ಉಳಿದ ಆಕಾಶವಾಣಿ ಕ್ಷೀಣಿಸುತ್ತಿದೆ ಎಂದೆನ್ನಿಸುತ್ತಿದ್ದರೂ ಅದುವೇ ಅಂತರಂಗದ ಆಪ್ತವಾಣಿಯಾಗಿ ಉಳಿದಿರುವದಂತೂ ನಿಜ.

ನಿರಂತರ ಬದಲಾವಣೆ, ಚಲನಶೀಲತೆ ಎಲ್ಲವೂ ಸಹಜ, ಅನಿವಾರ್ಯ. ಹೊಸದನ್ನು ಸ್ವಾಗತಿಸಬೇಕು, ಅದನ್ನು ಅರಗಿಸಿಕೊಳ್ಳಬೇಕು. ಆಧುನಿಕತೆಯ ಧನತ್ಮಾಕ ಕೊಡುಗೆಯನ್ನು ಸ್ವೀಕರಿಸಬೇಕು.... ಎಂದೆಲ್ಲಾ ಅಂದು ಕೊಂಡರೂ.... ಅದೆಷ್ಟು ಬೇಗ ಬಳಲಿ ಬೆಂಡಾಗಿ ಸುಸ್ತಾಗಿ ಹೋಗಿದ್ದೇನೆ ಇದೆಲ್ಲದರಿಂದ! ತಂತ್ರಜ್ಞಾನ ಒಂದು ಕೈಯಿಂದ ಅಪೂರ್ವ ವರಗಳನ್ನು ಕೊಟ್ಟರೆ ಇನ್ನೊಂದು ಕೈಯಿಂದ ಬೆನ್ನಲ್ಲಿ ಇರಿಯುತ್ತದೆ' ಎನ್ನುವ ಮಾತು ನಮ್ಮೆಲ್ಲರ ಇಂದಿನ ಬದುಕಿನಿಂದ ಸ್ಪಷ್ಟವಾಗುತ್ತಿದೆ. ಮನರಂಜನೆ, ಜನಾಕರ್ಷಣೆ, ಜಾಹೀರಾತಿನ ಆದಾಯದ ಮಾಯಾಜಾಲದ ಒಟ್ಟು ಪರಿಣಾಮವಾಗಿ ನಮ್ಮ ದೃಶ್ಯ ಹಾಗೂ ಶ್ರವಣೇಂದ್ರಿಯಗಳಿಗೆ ಆಗುತ್ತಿರುವ ಚಿತ್ರಹಿಂಸೆಯ ಬಗೆಗೆ ನಾನೇನು ಪ್ರಸ್ತಾಪಿಸುವ ಅವಶ್ಯಕತೆಯಿಲ್ಲ. ಬೆದೆಗೆ ಬಂದ ಪಶುಗಳಂತೆ ಉದ್ವಿಗ್ನತೆ, ಉನ್ಮಾದಕ್ಕೆ ಒಳಗಾದಂತಿರುವ ಕಾರ್ಯಕ್ರಮ ನಿರೂಪಕರು, ಉದ್ಘೋಷಕರು ನಮ್ಮ ಸೊಗಸಾದ ಭಾಷೆಗಳನ್ನ ವಿರೂಪಗೊಳಿಸಿ, ಕುರೂಪಗೊಳಿಸಿ ಕೊಲ್ಲುತ್ತಿರುವ ಬಗೆಗಿನ ನನ್ನ ಹಳವಳಿಕೆ, ನನಗೇನೋ ವಯಸ್ಸಾಯಿತೇನೋ..... ನನಗೆ ಒಗ್ಗಲೊಲ್ಲದ ಸದ್ದುಗದ್ದಲಗಳಲ್ಲಿ ನರಳುತ್ತಿದ್ದೇನೇನೋ...ಎನ್ನಿಸುವಂತೆ ಮಾಡಿದೆ. ಒಟ್ಟಾರೆ ನನ್ನ ನೆನಪಿನ ಲೋಕದ ರೇಡಿಯೋ ಜಗತ್ತು ಹೀಗೆ ಘಾಸಿಗೊಂಡಿದೆ.

ತೀರಾ ಹಿಂದಿನ ಕಾಲವಲ್ಲ. ೭೦ರ ದಶಕದಲ್ಲಿ ಭಾನುವಾರ ಮಧ್ಯಾಹ್ನ ಚಿತ್ರವಾಹಿನಿಯಲ್ಲಿ ಗಂಧದ ಗುಡಿ ಕೇಳಬೇಕೆಂಬ ಆಸೆ ಕರೆಂಟ್ ಇಲ್ಲದೇ ಭಗ್ನಗೊಂಡಿದ್ದು, ೧೯೮೪ರಲ್ಲಿ ಗಗನಯಾತ್ರಿ ರಾಕೇಶ್ ಶರ್ಮಾ ಅಂತರಿಕ್ಷದಿಂದ "ಸಾರೇ ಜಹಾಂಸೇ ಅಚ್ಛಾ... ಹಿಂದೂಸ್ತಾನ್ ಹಮಾರಾ" ಎಂದಾಗ ಆದ ಸಂತೋಷ, ೮೪ರ ಇಂದಿರಾ ಹತ್ಯೆಯ ದಾರುಣ ಸುದ್ದಿಯನ್ನು ಮಾರ್ಕ್ ಟುಲಿಯವರ ಬಿ.ಬಿ.ಸಿ. ವರದಿಯಿಂದ ಕೇಳಿ ತಲ್ಲಣಿಸಿದ್ದು, ೧೯೯೨ರಲ್ಲಿ ನನ್ನ ಹಳ್ಳಿಯಲ್ಲಿ ಅಜ್ಜ ಹಾಗೂ ನಮ್ಮ ಹೊಲದ ದೇಖರಿಕೆ ಮಾಡುತ್ತಿದ್ದ ರಹೀಂಸಾಬ್‌ನೊಡನೆ ಬಾಬ್ರಿ ಮಸೀದಿಯ ಧ್ವಂಸದ ಸುದ್ದಿ ಕೇಳಿ ನಿಟ್ಟುಸಿರು ಬಿಟ್ಟಿದ್ದು ಈಗ ಅದಾವುದೋ ಜನ್ಮದ ನೆನಪುಗಳಾಗಿ ಹೋಗಿವೆ. ಡಿ.ವಿ.ಜಿ, ರಾಜರತ್ನಂರವರ ಚಿಂತನ... ಕೃಷಿ ರಂಗದ ಸಲಹೆಗಳನ್ನು ಛೇಡಿಸುತ್ತಿದ್ದ ನನ್ನಜ್ಜನ ದೇಸಿ ಗತ್ತು... ನನ್ನ ಕೈಯಲ್ಲಿ ಅಸಾಧ್ಯವಾಗುತ್ತಿದ್ದ ಷಾರ್ಟ್‌ವೇವ್ ಟ್ಯೂನಿಂಗ್ ಮರೆಯಲು ಸಾಧ್ಯವೇ ಇಲ್ಲ. ಇರಲಿ, ಬದಲಾವಣೆ ಬೇಡವೆನ್ನಲು ನಾನ್ಯಾರು? ಬೇಕಿದ್ದರೆ ನಾನೇ ಬದಲಾಗಬೇಕು. ನನ್ನ ಬೇರುಗಳಿಗೆ ಮರಳಲು ಆಕಾಶವಾಣಿಯಂತು ಇದ್ದೇ ಇದೆ. ಆಕಾಶವಾಣಿ ಈಗ ನನಗೊಂದು ಸಾವಯವ ಜೀವನ ಕ್ರಮದ ಆಧುನಿಕ ರಸಾಯನಿಕಗಳಿಂದ, ರೋಗಗಳಿಂದ ಮುಕ್ತವಾದ ನಿರ್ಮಲ, ಪ್ರಶಾಂತ ಮಾಧ್ಯಮವಾಗಿಯೇ ಉಳಿದಿರುವುದು ಸಂತಸ ನೀಡುತ್ತಿದೆ.



(ವೃತ್ತಿಯಿಂದ ಇಂಜಿನಿಯರ್ ಆದ ಕಾರಿಗನೂರಿನ ದಿವಾಕರ್ ಅಟೋಮೊಬೈಲ್ ಉದ್ಯಮಿಯೂ ಆಗಿದ್ದು, ಸಾಹಿತ್ಯ-ಸಂಸ್ಕೃತಿ ಕ್ಷೇತ್ರಗಳಲ್ಲಿ ತೀವ್ರ ಆಸಕ್ತಿ ಹೊಂದಿದವರು)


ಎಫ್.ಎಂ. ವರಸೆ : ಹಾಳಾಗುತ್ತಿರುವ ಚಿತ್ರಗೀತೆ ಆಲಿಸುವ ಸುಖ...

–ಜಯಂತ ಕಾಯ್ಕಿಣಿ

ನಾವುಗಳೆಲ್ಲ ಚಿತ್ರಗೀತೆಗಳನ್ನು ಕೇಳಿಕೊಂಡು ಬಂದಿದ್ದೇ ಬಾನುಲಿಯಿಂದ. 'ವಿವಿಧ ಭಾರತಿ'ಯ *ಪಂಚರಂಗಿ* ಕಾರ್ಯಕ್ರಮಗಳಲ್ಲಿ ಬರುತ್ತಿದ್ದ ಜಯಮಾಲಾ, *ಬೇಲಾ ಕೆ ಫೂಲ್*, *ಛಾಯಾಗೀತ್*, *ಮಧುರಗೀತಂ*, ರೇಡಿಯೋ ಸಿಲೋನಿನ *ಬಿನಾಕಾ ಗೀತ್ ಮಾಲಾ*, *ಭೂಲೇ ಬಿಸರೇ ಗೀತ್*, ನಮ್ಮ ಧಾರವಾಡ, ಬೆಂಗಳೂರು, ಮಂಗಳೂರು ನಿಲಯಗಳ *ಚಿತ್ರಪಟ ಸಂಗೀತ* , *ಅಭಿಲಾಷಾ*, *ಕೋರಿಕೆ*, *ನಿಮ್ಮ ಮೆಚ್ಚಿನ ಗೀತೆಗಳು*... ಇವೆಲ್ಲ ಕಾರ್ಯಕ್ರಮಗಳು ನಮ್ಮ ನಿತ್ಯದ ಭಾವಾವರಣವನ್ನು ಇಂಪಾಗಿ, ಸೊಂಪಾಗಿ ರೂಪಿಸುತ್ತ ಬಂದವು.

ನಮಗೆ ಒಂದು ಹಾಡಿನ ಹಿಂದೆ ಎಂತೆಂಥ ಕಸುಬುಗಾರರ ಕೊಡುಗೆ ಇರುತ್ತದೆ ಎನ್ನುವುದು ಖಂಡಿತ ಗೊತ್ತಿದ್ದರೆ ಅದರ ಶ್ರೇಯಸ್ಸು ಸಲ್ಲಬೇಕಾದದ್ದು ಆಕಾಶವಾಣಿಗೆ ಮತ್ತು ಬಾನುಲಿಯ ನಿರೂಪಕರಿಗೆ. ಏಕೆಂದರೆ, "ಈ ಗೀತೆಗೆ ಸಂಗೀತ ನೀಡಿದವರು ರಾಜನ್ ನಾಗೇಂದ್ರ, ಗೀತರಚನೆ– ಆರ್. ಎನ್. ಜಯಗೋಪಾಲ್, ಹಾಡಿದವರು–ಪಿ.ಬಿ.ಶ್ರೀನಿವಾಸ್ ಮತ್ತು ಎಸ್. ಜಾನಕಿ". ಹೀಗೆ ಒಂದು ಹಾಡಿನ ಹಿಂದಿನ ಕುಟುಂಬವನ್ನೇ ನಚ್ಚುಗೆಯಿಂದ, ಮೆಚ್ಚುಗೆಯಿಂದ ಪರಿಚಯಿಸುತ್ತಿದ್ದ ನಿರೂಪಕರ ದನಿಯಲ್ಲೆ ಆ ಹಾಡಿನ ಕಂಪನ ವಿಸ್ತಾರವೂ ಇದ್ದಂತೆ ಭಾಸವಾಗುತ್ತಿತ್ತು. ಸಿನೆಮಾ ಹಾಡು ಅನ್ನೋದು ಒಂದು ಕೂಟ ಕಲಾಪ ಎಂಬ ಅಂಶವನ್ನು ಮನಗಾಣಿಸಿದ ಹೆಗ್ಗಳಿಕೆ ಬಾನುಲಿಯದು.

ಇದರ ಒಟ್ಟಾರೆ ಮಥಿತಾರ್ಥ ಏನೆಂದರೆ ಸಂಗೀತ ನಿರ್ದೇಶಕ, ಕವಿ ಮತ್ತು ಗಾಯಕರ ಪರಿಚಯದೊಂದಿಗೇ ಹಾಡು ನಮ್ಮೊಳಗೆ ಉಳಿಯುತ್ತಿತ್ತು. ಈ ಪ್ರಸ್ತಾಪ ಈಗ ಮಾಡುವ ಪ್ರಮೇಯ ಏಕೆ ಬಂತು ಅಂದರೆ, ಕಳೆದ ನಾಕಾರು ವರ್ಷಗಳಿಂದ ಭರಭರಾಟೆಯಿಂದ ಹೊಸ ಹುರುಪು, ಆವಿರ್ಭಾವಗಳಿಂದ ನಗರಗಳಲ್ಲಿ ನವಜನಾಂಗದ ಕಿವಿಮಾತಾಗಿರುವ ಎಫ್.ಎಂ. ರೇಡಿಯೋ ವಾಹಿನಿಗಳು ಈ ಒಂದು ಸಾಂಸ್ಕೃತಿಕ ಮೌಲ್ಯವನ್ನು ಧಡ್ಡ ಠೇಂಕಾರದೊಂದಿಗೆ ನಾಶಮಾಡಿಬಿಟ್ಟಿವೆ! ಬೆರಳೊತ್ತಿದರೆ ಪಟಪಟ ಸಾಸಿವೆ ಸಿಡಿದಂತೆ ಮಾತನಾಡುವ ಚುರುಕು ಚಿನಕುರುಳಿ ವಾಕ್ ಚಾತುರ್ಯದ ಹೊಸ ಪೋರ–ಪೋರಿಯರ ಹರಟೆ, 'ಕಾಲೆಳೆ', ಮುಕ್ತ ಸ್ನೇಹ ಸಲುಗೆಯ ಮಾತುಗಳು ಹೊಸ ಆಪ್ತತೆಯನ್ನು ಲಹರಿಯನ್ನು ಬಾನುಲಿಗೆ ತಂದಿವೆ. ಅದು ತುಂಬಾ ಸ್ವಾಗತಾರ್ಹ. ಏಕೆಂದರೆ ಆಕಾಶವಾಣಿಗಿದ್ದ ಒಂದು ಒಣ ಗಾಂಭೀರ್ಯ ಮುರಿಯುವ ಒಂದು ಸಾಂಸ್ಕೃತಿಕ ಅವಶ್ಯಕತೆ ಖಂಡಿತ ಇತ್ತು. ಈ ದೃಷ್ಟಿಯಿಂದ ಕೇಳುಗರನ್ನು ನೇರ ಒಳಗು ಮಾಡಿಕೊಳ್ಳುವ, ಅವರ ಜತೆ ನೇರ ಸಂಪರ್ಕದಲ್ಲಿರುವ ಈ ಎಫ್.ಎಂ. ರೇಡಿಯೋ ವಾಹಿನಿಗಳ ವರಸೆ ಹಠಾತ್ತನೆ ಯುವ ಕಿವಿಗಳಿಗೆ ಒಂದು ಹಿತವಾದ, ಮುಕ್ತವಾದ ಬದಲಾವಣೆಯನ್ನು ತಂದುಕೊಟ್ಟದ್ದರಲ್ಲಿ ಅಚ್ಚರಿಯೇ ಇಲ್ಲ.



ಖಾಸಗಿ ಎಫ್.ಎಂ.ವೊಂದರಲ್ಲಿ ನಿರೂಪಕಿ


ಆದರೆ, ಇಪ್ಪತ್ನಾಲ್ಕು ಗಂಟೆಗಳೂ ಸಿನೆಮಾ ಹಾಡುಗಳನ್ನೇ ಅವಲಂಬಿಸಿ, ಅವುಗಳ ಪುನರ್ ಪುನರ್ ಪುನರ್ ಬಿತ್ತರದಿಂದಲೇ ಅಪಾರ ಧನ ಸಂಪಾದಿಸಿ ಮೆರೆಯುತ್ತಿರುವ ಈ ಎಫ್.ಎಂ. ವಾಹಿನಿಗಳಿಗೆ ಆ ಹಾಡುಗಳ ಹಿಂದಿರುವ ಸಂಗೀತ ನಿರ್ದೇಶಕ, ಕವಿ, ಹಾಡುಗಾರರ ಹೆಸರನ್ನು ಹೇಳಬೇಕು ಎನ್ನುವ ಮೂಲಭೂತ ಸೌಜನ್ಯವೇ ಹೊರಟು ಹೋಗಿದೆ! ಕೇವಲ "ಮೂರು ಹಾಡುಗಳು ಬ್ಯಾಕ್ ಟು ಬ್ಯಾಕ್", ಸಾವರಿಯಾ, ಮಿಲನ, ಧೂಮ್–ಎಂದು ಬೊಬ್ಬೆ ಹೊಡೆಯುವ ಈ ಎಫ್.ಎಂ. ನಿರೂಪಕ/ಕಿಯರಿಗೆ ಈ ಹಾಡುಗಳು ಬೇಕು; ಆದರೆ, ಅವುಗಳನ್ನು ರೂಪಿಸಿದವರ ಹೆಸರು ಬೇಡ.

ಮೊನ್ನೆ ಒಂದು ಎಫ್.ಎಂ ವಾಹಿನಿಗೆ ನನ್ನನ್ನು ಸಂದರ್ಶನಕ್ಕೆ ಕರೆದಿದ್ದರು. ಮೂರು ಗಂಟೆ ಕೂರಿಸಿಕೊಂಡು ಇಪ್ಪತ್ತು ನಿಮಿಷಕ್ಕೊಂದು ಸಲ ನಲ್ವತ್ತು ಸೆಕೆಂಡು ಮಾತಾಡಿಸಿದರು. ಕಾಫಿ, ಹೂಗುಚ್ಛ ಕೊಟ್ಟು ಕಳಿಸಿದರು! ನಮ್ಮ ಆಕಾಶವಾಣಿಯಲ್ಲಿ ಒಂದು ಹನಿಗವನ ಓದಿದರೂ ಅದಕ್ಕೊಂದು ಸಾಂಕೇತಿಕ ಗೌರವಧನ ನೀಡುತ್ತಾರೆ. ಅದೊಂದು ಲೇಖಕನಿಗೆ, ಅತಿಥಿಗೆ ಸಲ್ಲಬೇಕಾದ ಮೂಲಭೂತ ಗೌರವ. ಅದರ ಮೌಲ್ಯ ರೋಖಡಾ ಅಲ್ಲ. ಅದು ಘನತೆಯದು! ಆದರೆ, ಎಫ್.ಎಂ.ನವರನ್ನು ನೀವೇಕೆ ನಿಮ್ಮ ಅತಿಥಿಗಳಿಗೆ ಸಾಂಕೇತಿಕ ಗೌರವಧನವನ್ನೂ ಕೊಡುವುದಿಲ್ಲ ಎಂದು ಕೇಳಿದರೆ– "ಅವರಿಗೆ ನಾವು ಪಬ್ಲಿಸಿಟಿ ಕೊಡ್ತೀವಲ್ಲ ಸಾರ್" ಎಂದು ಉತ್ತರ ಬಂತು. ಯಾರಿಗೆ ಯಾರು ಪಬ್ಲಿಸಿಟಿ ಕೊಡ್ತಿದಾರೆ ಇಲ್ಲಿ? ಈ ಖಾಸಗಿ ಚಾನೆಲ್‌ಗಳು ಕೊಳ್ಳೆ ಹೊಡೆಯುತ್ತಿರುವ ಗಳಿಕೆಗೇನೂ ಕಡಿಮೆಯಿಲ್ಲ. ಆದರೆ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವವರ ಕುರಿತು ಮೂಲಭೂತ ಗೌರವ, ಕೃತಜ್ಞತಾ ಭಾವ ಇಲ್ಲದೆ–ಎಲ್ಲವನ್ನೂ ಬಳಕೆಯ ವಸ್ತುಗಳನ್ನಾಗಿ ನೋಡುತ್ತಿರುವ ಈ ಹೊಸ 'ಮಾಧ್ಯಮ ಅಹಂಕಾರ', ಸೂಕ್ಷ್ಮವಾಗಿ ನಮ್ಮ ಕೆಲವು ಮೌಲ್ಯಗಳನ್ನೇ

ನಾಶ ಮಾಡುತ್ತಿವೆಯಲ್ಲ. ಅದಕ್ಕೆ ಪರಿಹಾರ ಏನು?

ಆಕಾಶವಾಣಿಗೂ ಮೆಲ್ಲ ಮೆಲ್ಲನೆ ಈ ಎಫ್.ಎಂ.ನ ಗಾಳಿ ತಾಕಿದರೆ ಆಶ್ಚರ್ಯವಿಲ್ಲ. ಮೊದಲೆಲ್ಲ ಗೋಲಾಕಾರದ ರೆಕಾರ್ಡುಗಳನ್ನು ಕಣ್ಣಿಗೆ ಸಮೀಪ ಹಿಡಿದು ಅಲ್ಲಿ ಮುದ್ರಿತವಾಗಿರುವ ಹೆಸರುಗಳನ್ನು ನೋಡಬೇಕಿತ್ತು. ಈಗ ಹಾಗಲ್ಲ. ಎಲ್ಲ ಒಂದೆರಡು ಕ್ಲಿಕ್‌ನಲ್ಲಿ ಎದುರಿನ ಕಂಪ್ಯೂಟರ್ ತೆರೆಯಲ್ಲಿ ಮಿನುಗುತ್ತದೆ! ನೋಡಿ ಹೇಳಬೇಕು ಅಷ್ಟೆ! ಈ ಹೆಸರುಗಳನ್ನು ಹೇಳುವುದರಿಂದ ನಿರೂಪಕ/ಕಿಯರಿಗೆ ಆಗಬಹುದಾದ ಒಂದು ಅನುಕೂಲ ಅವರಿಗಿನ್ನೂ ಹೊಳೆದಂತಿಲ್ಲ! ಏನಿಲ್ಲ, ಸಂಗೀತ ನಿರ್ದೇಶಕ, ಕವಿ, ಹಾಡುಗಾರರ ಹೆಸರು ಹೇಳಿದರೆ ಅಷ್ಟು ಹೊತ್ತು ತಾವು ಏನು ವಟಗುಡಬೇಕು ಎನ್ನುವುದರ ಕಿರಿಕಿರಿ ಕಡಿಮೆ ಆಗುತ್ತದೆ. ಹಿಂದೆಲ್ಲಾ ಹಾಡು ಪ್ರಸಾರವಾದಾಗೆಲ್ಲ ಒಂದಾಣೆಯೋ ಎರಡಾಣೆಯೋ ಹಾಡುಗಾರನಿಗೆ ಹೋಗುವಂಥ ಒಡಂಬಡಿಕೆ ಇತ್ತಂತೆ. ಈಗ ಅದೆಲ್ಲ ಇಲ್ಲ! ಹಾಡುಗಳನ್ನೇ ಬಂಡವಾಳ ಮಾಡಿಕೊಂಡ ಎಫ್.ಎಂ.ಗಳು ಕವಿಗಳಿಗೆ, ಸಂಗೀತ ನಿರ್ದೇಶಕರಿಗೆ, ಹಾಡುಗಾರರಿಗೆ – ಸಂಭಾವನೆ ಕೊಡುವುದಂತೂ ಆಗದ ಮಾತು. ಕನಿಷ್ಠ ಸಂಭಾವನೆಯನ್ನಾದರೂ ಸಲ್ಲಿಸುವ ಕನಿಷ್ಠ ಚಾರಿತ್ರ್ಯವನ್ನಾದರೂ ತೋರುವಂತಾದರೆ ಚೆನ್ನ.

"ಹೆಸರು ಹೇಳುತ್ತಾ ಕೂರುವುದು ಕಾಲಹರಣ" ಎನ್ನುವ ಅವರ ಸಮರ್ಥನೆ, "ಜಾಗ ಹಾಳಾಗುತ್ತದೆ, ಹೀಗಾಗಿ ಪತ್ರಿಕೆಯಲ್ಲಿ ಲೇಖಕರ ಹೆಸರು ಹಾಕುವುದಿಲ್ಲ." ಎನ್ನುವಂತಿದೆ. ಅಥವಾ "ಪೇಯಿಂಟಿಂಗ್‌ಗಳಲ್ಲಿ ಕಲಾವಿದನ ಸಹಿ ಏಕೆ ಬೇಕು" ಎಂದು ಕೇಳುವಂತಿದೆ. ಆದರೆ, ಅವರ ಕಾರ್ಯವೈಖರಿ ವರಸೆಗಳ ಬಗ್ಗೆ ಅವರ ಉತ್ತರದಾಯಿತ್ವ ಅಥವಾ ಜವಾಬುದಾರಿ ಎಲ್ಲಿದೆ? ಅವರಿಗೆ ಹೇಳುವವರು ಕೇಳುವವರು ಯಾರೂ ಇಲ್ಲವೆ?




(ಜಯಂತ ಕಾಯ್ಕಿಣಿ ಕನ್ನಡದ ಪ್ರಸಿದ್ಧ ಲೇಖಕರೇ ಅಲ್ಲದೆ ಇತ್ತೀಚಿನ ವರ್ಷಗಳಲ್ಲಿ ಕನ್ನಡದ ಜನಪ್ರಿಯ ಚಲನಚಿತ್ರ ಗೀತಕಾರರೂ ಹೌದು)

(ಈ ಬರಹ ಇದೇ ಲೇಖಕರ 'ಟೂರಿಂಗ್ ಟಾಕೀಸ್" ಎಂಬ ಅಂಕಣ ಬರಹಗಳ ಸಂಗ್ರಹದ ಲೇಖನವೊಂದರ ಸಂಪಾದಿತ ರೂಪ)

ಸಾಹಿತ್ಯ-ಸಂಸ್ಕೃತಿ-ರಾಜಕಾರಣ ಇತ್ಯಾದಿ ಎರಡು ಟಿಪ್ಪಣಿಗಳು

ಪ್ರಸನ್ನರದ್ದು ಈಗ ರಾಷ್ಟ್ರೀಯ ಹಸಿರು ಸಮಾಜವಾದ!



ಪ್ರಸನ್ನ

ನಮ್ಮ ಹೆಗ್ಗೋಡಿನ ಚರಕದ ಪ್ರಸನ್ನ ಅವರು ಸದಾ ರಾಷ್ಟ್ರ ಮಟ್ಟದಲ್ಲೇ ಯೋಚನೆ ಮಾಡುವವರು. ಏಕೆಂದರೆ ಅವರ ವ್ಯಕ್ತಿತ್ವ 'ಸಿದ್ಧ'ವಾಗಿ ಬಂದದ್ದು ಅಲ್ಲಿಂದಲೇ. ಅವರು ಹೆಗ್ಗೋಡಿನಲ್ಲಿ 'ಚರಕ' ಮಾಡಿದ ಮೇಲೂ ಪದೇ ಪದೇ ದೆಹಲಿ, ಕಲ್ಕತ್ತಾ, ಹೈದರಾಬಾದ್ ಎಂದು ಓಡಾಡುತ್ತಿರುವಾಗ ಆಗಾಗ್ಗೆ ನಾನು ಅವರಿಗೆ 'Rolling mass does not gain weight' ಎಂಬ ಮಾತನ್ನು ಹೇಳುತ್ತಲೇ ಇರುತ್ತಿದ್ದೆ. ಇತ್ತೀಚೆಗೆ ಅವರು ನೇಕಾರರ ಸಮಸ್ಯೆ, ಬದನವಾಳು ಚಳುವಳಿ ಇತ್ಯಾದಿ ಸ್ಥಳೀಯ ಕಾರ್ಯಕ್ರಮಗಳಲ್ಲಿ ತೊಡಗಿಕೊಂಡಾಗ ಅವರ ಈ 'ಖಾಯಿಲೆ' ವಾಸಿಯಾಗಿದೆ ಎಂದುಕೊಂಡಿದ್ದೆ. ಆದರೆ ಮೊನ್ನೆ ಜನವರಿ ೧೧ರಂದು ಹೆಗ್ಗೋಡಿನಲ್ಲಿ ನಡೆದ 'ಚರಕೋತ್ಸವ'ದ ಗೋಷ್ಠಿಯಲ್ಲಿ ಅದು ದೊಡ್ಡ ರೀತಿಯಲ್ಲೇ ಮರುಕಳಿಸಿದ್ದನ್ನು ಕಂಡು ಗಾಬರಿಯಾದೆ.

ಪ್ರಸನ್ನ ಅವರ ಸುಸ್ಥಿರ ಅಭಿವೃದ್ಧಿ ಚಳುವಳಿಯ ತಂಡ ಈಗ ರಾಷ್ಟಮಟ್ಟದ ಸ್ವರೂಪ ಪಡೆದು 'ಹಸಿರು ಸಮಾಜವಾದ'ದ ಚಳುವಳಿಯಾಗಿ ಮಾರ್ಪಟ್ಟಿದೆಯಂತೆ! ಅದರ ರಾಷ್ಟ್ರೀಯ ಸಮಾವೇಶಕ್ಕೆಂದು ರಾಷ್ಟ್ರೀಯ ಲಾಂಛನವೊಂದನ್ನು ಅವರು ಅಂದು ತಮ್ಮ ಸಹಚಳುವಳಿಕಾರ ಮಿತ್ರ ಹಿರಿಯ ಸಮಾಜವಾದಿ ಪ. ಮಲ್ಲೇಶ್‌ರಿಂದ ಬಿಡುಗಡೆ ಮಾಡಿಸಿದರು. ಅದರಲ್ಲಿ ಚರಕಾ ಮಹಿಳೆಯೊಬ್ಬರ ಚಿತ್ರದ ಕೆಳಗೆ 'ಹರಿತ್ ಸಮಾಜವಾದ್' ಎಂಬ ಹಿಂದಿ ಲಿಪಿಯ ಶೀರ್ಷಿಕೆ ಇದೆ. ಅದನ್ನು ನೋಡಿ ನನಗೆ ರೇಗಿ ಹೋಯಿತು. ಜೊತೆಗೆ ಅಲ್ಲಿ ಓದಲಾದ ಈ ರಾಷ್ಟೀಯ ಸಮಾವೇಶದ ಘೋಷಣಾ ಪತ್ರ ಪೂರ್ಣ ಇಂಗ್ಲಿಷ್‌ನಲ್ಲಿದ್ದು ಅದರ ಕನ್ನಡ ಅನುವಾದ ಇನ್ನೂ ಸಿದ್ಧವಾಗಬೇಕಿದೆಯಂತೆ! ನಾನು ಪ್ರಸನ್ನರನ್ನು ಸ್ವಲ್ಪ ಕೋಪದಿಂದಲೇ ಕೇಳಿದೆ, ಸ್ಥಳಿಯವಾಗಿ ಕಟ್ಟಿದ ಚಳುವಳಿಯನ್ನು ಯಾವ ಸಾರ್ವಜನಿಕ ಸುಳಿವೂ ಇಲ್ಲದೆ ರಾಷ್ಟಮಟ್ಟಕ್ಕೆ ಒಯ್ದು ಅದನ್ನೇಕೆ ಹೀಗೆ ಬಲಿಗೊಡುತ್ತೀರಿ? ಅದನ್ನು ಅದರ ಕಾರ್ಯಕರ್ತರಿಂದಲೇ ಏಕೆ ಹೀಗೆ ಇಂಗ್ಲಿಷ್-ಹಿಂದಿಗಳ ಮೂಲಕ ದೂರ ಮಾಡುತ್ತೀರಿ?

ಸದಾ ರಾಷ್ಟ್ರ ಮಟ್ಟದಲ್ಲೇ ಹರಿದಾಡುವ ಪ್ರಸನ್ನರ ಮನಸ್ಸಿಗೆ ಇವೆಲ್ಲ ಅರ್ಥವಾಗದ 'ಅಧಿಕ ಪ್ರಸಂಗ'! ಇನ್ನು ಈ ರಾಷ್ಟ್ರೀಯ ಲಾಂಛನವನ್ನು ಬಿಡುಗಡೆ ಮಾಡಿದ ಕನ್ನಡ ಹೋರಾಟಗಾರರೂ ಆದ ಮಲ್ಲೇಶ್‌ರನ್ನು ಕೇಳಿದರೆ, ಅವರು ವಿಷಾದದಿಂದ 'ಅಯ್ಯೋ ನಾನು ಈ ಲಾಂಛನವನ್ನು ನೋಡಿದ್ದು ಅದನ್ನು ಬಿಡುಗಡೆ ಮಾಡಿದ ಮೇಲೆ' ಎಂದು ಪೇಚಾಡಿಕೊಂಡರು! ಪಕ್ಕದಲ್ಲೇ ನಿಂತಿದ್ದ ಪ್ರಸನ್ನರ ಸದ್ಯದ ಸಹಚರಿ ಜಿ.ಎಸ್. ಜಯದೇವ ಅವರು ಕೂಡ ಇದನ್ನೆಲ್ಲ ಕಂಡು ಗಾಬರಿಯಾದಂತಿದ್ದರು!

ಪ್ರಸನ್ನ ಅವರ ಶೈಲಿಯೇ ಹಾಗೆ. ತಮಗೆ ಬೇಕಾದ್ದನ್ನು ಇತರಿಂದ ಮಾಡಿಸುವ 'ಪ್ರಜಾಪ್ರಭುತ್ವ' ಶೈಲಿ ಅವರಿಗೆ ಕರಗತವಾದಂತಿದೆ.

ಕಲ್ಬುರ್ಗಿಯವರಿಗೆ ಮಿತ್ರರ 'ಸಂಭ್ರಮ'ದ ಶ್ರದ್ಧಾಂಜಲಿ!



'ಧಾರವಾಡ ಸಾಹಿತ್ಯ ಸಂಭ್ರಮ-೨೦೧೬' ಈ ಹಿಂದಿನ ವರ್ಷಗಳಂತೆಯೇ, ಬಹು ಯಶಸ್ವಿಯಾಗಿ ಮುಗಿದಿದೆಯಂತೆ! ನನಗೆ ನಿಜವಾಗಿಯೂ ಈಗ ಕಲ್ಬುರ್ಗಿಯವರ ಬಗ್ಗೆ ಮರುಕವಾಗುತ್ತಿದೆ. ಅವರ ಕೊಲೆಯ ಬಗ್ಗೆ ಅವರ ಸುತ್ತಮುತ್ತಲಿನ ಸಾಹಿತಿ-ಮಿತ್ರರು ವ್ಯಕ್ತಪಡಿಸಿದ ಶೋಕ, ಖಂಡನೆ, ಪ್ರತಿಭಟನೆಗಳ ಬಗ್ಗೆ ತೀವ್ರ ಅಪನಂಬಿಕೆ ಶುರುವಾಗಿದೆ.

ಕಲ್ಬುರ್ಗಿಯವರು 'ಧಾರವಾಡ ಸಂಭ್ರಮ'ದ ರೂವಾರಿಗಳಲ್ಲೊಬ್ಬರು. ಕಳೆದೆರಡೂ ಸಂಭ್ರಮಗಳಲ್ಲಿ ಅದರ ಸಹ ಸಾರಥ್ಯ ವಹಿಸಿ ಸಕ್ರಿಯವಾಗಿ ಭಾಗವಹಿಸಿ ಅದಕ್ಕೊಂದು ಹಿರಿತನದ ಘನತೆ ಒದಗಿಸಿದವರು ಅವರು. ಅವರೀಗ ಕೊಲೆಯಾಗಿ ಆರು ತಿಂಗಳೂ ಆಗಿಲ್ಲ. ಅಲ್ಲದೆ ಆ ಕೊಲೆ ಆಗಿರುವುದು ಅವರ ಸಾಹಿತ್ಯಿಕ-ಸಂಶೋಧನೆಗಳಲ್ಲಿ ವ್ಯಕ್ತವಾದ ವಿಶಿಷ್ಟ ನಿಲುವಿಗಳಿಗಾಗಿ ಎಂಬುದೀಗ ಹೆಚ್ಚೂಕಡಿಮೆ ಖಚಿತವಾಗಿದೆ. ಸಾಹಿತ್ಯ ಮಿತ್ರರೆಲ್ಲ ಈ ಕೊಲೆಯ ಬಗ್ಗೆ ವಿವಿಧ ರೀತಿಗಳಲ್ಲಿ ತಮ್ಮ ದುಃಖಾವೇಶಗಳನ್ನೆಲ್ಲ ವ್ಯಕ್ತಪಡಿಸಿದ್ದು ಈ ನೆಲೆಯಲ್ಲೇ. ಆದರೆ ಈ ಕೊಲೆಯ ಹಿಂದಿರುವವರು ಯಾರು ಎಂಬುದರ ಸುಳಿವನ್ನಾದರೂ ಪಡೆಯಲು ನಮ್ಮ ಸರ್ಕಾರಕ್ಕೆ ಇನ್ನೂ ಸಾಧ್ಯವಾಗಿಲ್ಲ. ಹಾಗಿರುವ ಸಂದರ್ಭದಲ್ಲಿ ಅವರ ಸಾಹಿತ್ಯ ಮಿತ್ರರು ಈ ಸಾಹಿತ್ಯ 'ಸಂಭ್ರಮ'ವನ್ನು ಏನು ಮಾಡಬಹುದಿತ್ತು?

ಕನಿಷ್ಠ ಅದನ್ನು ಈ ವರ್ಷದ ಮಟ್ಟಿಗಾದರೂ ರದ್ದು ಮಾಡುವ ಮೂಲಕ ಸರ್ಕಾರಕ್ಕೆ ತನ್ನ ನಿಷ್ಠುರ ಪ್ರತಿಭಟನೆಯನ್ನು ಸಲ್ಲಿಸಿ, ಕೊಲೆಯ ತನಿಖೆಯ ವೇಗದ ಬಗ್ಗೆ ತನ್ನ ಅಸಮಧಾನವನ್ನು ದಾಖಲಿಸಬಹುದಿತ್ತು. ಅಷ್ಟೇ ಮುಖ್ಯವಾಗಿ ಕಲ್ಬುರ್ಗಿಯವರ ಕೊಲೆಯನ್ನು ಮತ್ತು ಅದರ ಹಿಂದಿನ ರಾಜಕಾರಣವನ್ನು ಕರ್ನಾಟಕದ ಸಾಹಿತ್ಯಲೋಕ ಯಾವುದೇ ಕಾರಣಕ್ಕೂ ಕ್ಷಮಿಸುವುದಿಲ್ಲ ಎಂಬ ಸಾರ್ವಜನಿಕ ಸಂದೇಶವನ್ನು ನೀಡಬಹುದಿತ್ತು. ಆದರೆ ಅದುದು ಏನು?

ಸರ್ಕಾರಿ ಅನುದಾನವನ್ನೂ ಪಡೆದು, ಕಲ್ಬುರ್ಗಿ ಅವರ ನೆನಪಿಗೆ ಈ ಬಾರಿಯ ಸಾಹಿತ್ಯ ಸಂಭ್ರಮವನ್ನು ಅರ್ಪಿಸಿ ಕೈತೊಳೆದುಕೊಳ್ಳಲಾಯಿತು. ನಂತರ ಮೂರು ದಿವಸದ ಬೌದ್ಧಿಕ ವಿಲಾಸ-ವಿಹಾರ! ಈ ವಿಲಾಸ-ವಿಹಾರಗಳಿಗೆ ಒಂದು ವರ್ಷ ಕಡಿವಾಣ ಬಿದ್ದಿದ್ದರೆ ಕನ್ನಡ ಸಾಹಿತ್ಯದ ಯಾವ ಸಂಪತ್ತು ಸೂರೆ ಹೋಗುತ್ತಿತ್ತು? ಅಥವಾ ಯಾವ ಮಹಾಪ್ರಯಾಣ ನಿಂತು ಹೋಗುತ್ತಿತ್ತು?


ನಿಜವಾಗಿಯೂ ನಾಚಿಕೆಯಾಗಬೇಕು, ತಮ್ಮನ್ನು ಕಲ್ಬುರ್ಗಿಯವರ ಮಿತ್ರರೆಂದು ಕರೆದುಕೊಳ್ಳುವ ಈ ಸಾಹಿತ್ಯೋಪಜೀವಿಗಳಿಗೆ.

–ಡಿಎಸ್ಸೆನ್

ಪುಸ್ತಕಾವಲೋಕನ

ಪು: ರಾಮಮನೋಹರ ಲೋಹಿಯಾ ಲೇ: ಡಿ.ಎಸ್.ನಾಗಭೂಷಣ ಪ್ರ: ಸಮತಾ ಪ್ರಕಾಶನ, ಚಾಮರಾಜನಗರ ಪು: ೧೦೮ ಬೆಲೆ: ರೂ. ೯೦/-

ಲೋಹಿಯಾಗೊಂದು ಪುಟ್ಟ ಪ್ರವೇಶಿಕೆ



೨೦೦೬ರಲ್ಲಿ ಪ್ರಕಟವಾಗಿದ್ದ ಇದೇ ಲೇಖಕರ 'ಲೋಹಿಯಾ ಸಮಾಜವಾದ ದರ್ಶನ' ಕೃತಿ ಮೂರು ಅಧ್ಯಯನಶೀಲ ಅನುಬಂಧಗಳೊಂದಿಗೆ ಈಗ 'ರಾಮಮನೋಹರ ಲೋಹಿಯಾ' ಎಂಬ ಶೀರ್ಷಿಕೆಯಲ್ಲಿ ಪರಿಷ್ಕೃತಗೊಂಡು ಪ್ರಕಟವಾಗಿದೆ. ಲೋಹಿಯಾ ಬಗ್ಗೆ ಈವರೆಗೆ ಅನೇಕ ಮಾಹಿತಿಪೂರ್ಣ ಪುಸ್ತಕಗಳು ಹೊರ ಬಂದಿವೆಯಾದರೂ ಲೋಹಿಯಾ ಸಮಾಜವಾದಕ್ಕೆ ಹಾಗು ದೇಶಕ್ಕೆ ನೀಡಿದ ಆಯಾಮಗಳನ್ನು ಸಂಗ್ರಹಿಸಿ ಅಚ್ಚುಕಟ್ಟಾಗಿ ಹೇಳಿರುವ ನಾಗಭೂಷಣರ ಈ ಪುಸ್ತಕ ಸಮಾಜವಾದವನ್ನು ಪ್ರವೇಶಿಸುವವರಿಗೆ ಕೈದೀವಿಗೆಯಂತಿದೆ.

ರಾಜಕಾರಣದ ಬಗ್ಗೆ ತಿಳಿವಳಿಕೆ ಮಾತ್ರ ಹೊಂದಿ ಮಾತನಾಡುವ ಸಮಾಜವಾದ ಯಾವುದೋ ಪಕ್ಷದ ಪ್ರಣಾಳಿಕೆಯಂತೆ ಕಾಣುತ್ತದೆ. ಆದರೆ ಲೋಹಿಯಾ ಪ್ರಣೀತ ಸಮಾಜವಾದವು ಸಾಂಸ್ಕೃತಿಕ ಆಯಾಮವನ್ನೂ ವ್ಯಕ್ತಿಗೌರವವನ್ನೂ ಜೊತೆಗಿಟ್ಟುಕೊಂಡು ವಿಸ್ತರಿಸಿಕೊಂಡಿದೆ. ಇದರಿಂದ ಮಾರ್ಕ್ಸ್‌ವಾದ ಹಾಗು ಸಾಂಸ್ಥಿಕ ರಾಜಕಾರಣಗಳಿಂದ ದೂರ ಕಾಯ್ದುಕೊಂಡ ಹೊಸ ತಾತ್ವಿಕತೆಯು ರೂಪುಗೊಳ್ಳಲು ಕಾರಣವಾಯಿತು. ಇದು ಸಮಾಜವಾದಿ ಸಂಕಥನದಲ್ಲಿಯೇ ಅಪರೂಪವಾದ ಹೊರಳು.

ಲೋಹಿಯಾ ವ್ಯಕ್ತಿತ್ವ ಹಾಗು ಸಮಾಜವಾದಗಳು ಅಭಿನ್ನವಾಗಿದ್ದವು. ಈ ಪಾರದರ್ಶಕತೆಯೇ ನಮಗೆ ಲೋಹಿಯಾರ ಮೇಲಿನ ಆಕರ್ಷಣೆಯನ್ನು ಉಂಟು ಮಾಡುವಂತಿವೆ. ಇದನ್ನು ಅರ್ಥ ಮಾಡಿಕೊಂಡಂತೆ 'ರಾಮಮನೋಹರ ಲೋಹಿಯಾ' ಪುಸ್ತಕವು ಸಮಾಜವಾದ ಹಾಗು ಲೋಹಿಯಾ ಅವರ ಜೀವನ ವಿವರಗಳ ಚರಿತ್ರೆಯನ್ನು ಒಟ್ಟಾಗಿ ನಿರ್ವಹಿಸಿದೆ. ಲೋಹಿಯಾ ತಮ್ಮ ಜೀವನ ಸಾವುಗಳ ಸಂದರ್ಭಗಳೆರಡರಲ್ಲಿಯೂ ತಮ್ಮ ಸಮಾಜವಾದದ ಬದ್ಧತೆಯನ್ನು ಬಿಟ್ಟುಕೊಡದ ಒಬ್ಬ ಅಪ್ಪಟ ಸಮಾಜವಾದಿಯಾಗಿದ್ದರು. ತಮ್ಮ ಈ ಬದ್ಧತೆಯ ಕಾರಣದಿಂದಲೇ ಭಾರತದ ಸಾಂಸ್ಥಿಕ ರಾಜಕಾರಣವನ್ನು ಹೋರಾಟದ ಮೂಲಕ ಎದುರಿಸಲು ಅವರಿಗೆ ಸಾಧ್ಯವಾಗಿದ್ದು.

ಈ ಪುಸ್ತಕದ ಮೊದಲ ಅಧ್ಯಾಯವು ಸಮಾಜವಾದದ ಬೆಳವಣಿಗೆಯನ್ನು ಜಾಗತಿಕ ನೆಲೆಯಲ್ಲಿ ಜನಸಾಮಾನ್ಯರಿಗೂ ಅರ್ಥವಾಗುವಷ್ಟು ಸರಳ ಭಾಷೆಯಲ್ಲಿ ವಿವರಿಸುತ್ತದೆ. ಲೋಹಿಯಾ ಅವರ ಸಮಾಜವಾದದ ಬಗೆಗಿನ ಆಸಕ್ತಿಯನ್ನು ವಿವರಿಸುವುದಕ್ಕೆ ಹಿನ್ನೆಲೆಯಾಗಿ ಬರುವ ಈ ವಿವರಣೆಗಳು ಸಮಾಜವಾದದ ಉದಯದ ಸಂಧಿಕಾಲವನ್ನು ನಿರೂಪಿಸುತ್ತವೆ. ಗಾಂಧಿ, ಅಂಬೇಡ್ಕರ್, ಅರವಿಂದ ಮುಂತಾದವರು ಇಂಗ್ಲೆಂಡ್-ಅಮೆರಿಕಾಗಳಿಂದ ರಾಜಕೀಯ ಪಾಠಗಳನ್ನು ಕಲಿತು ಭಾರತದ ರಾಜಕೀಯವನ್ನು ನಿರ್ಮಿಸುವ ಪ್ರಯತ್ನ ಮಾಡುತ್ತಿದ್ದಾಗ ಲೋಹಿಯಾ ತಮ್ಮಿಚ್ಛೆಯಂತೆ ಇಂಗ್ಲಿಷರ ನಾಡನ್ನು ತೊರೆದು ಜರ್ಮನಿಯಲ್ಲಿ ರಾಜಕೀಯವನ್ನು ಕಲಿತು ಬರುತ್ತಾರೆ. ಇದರಿಂದ ಲೋಹಿಯಾರ ಚಿಂತನೆಗಳು ಮಾರ್ಕ್ಸ್‌ವಾದ ಹಾಗು ನಾಜಿವಾದಗಳ ರಾಜಕೀಯ ಮಾದರಿಗಳನ್ನು ನೋಡಿ ಅನೇಕ ಬಗೆಯ ಮುನ್ನೋಟಗಳನ್ನು ಕಂಡುಕೊಳ್ಳಲು ಸಾಧ್ಯವಾಯಿತು ಎನ್ನಿಸುತ್ತದೆ. ಲೋಹಿಯಾರ ಸಮಾಜವಾದಿ ವ್ಯಕ್ತಿತ್ವದ ಬೆಳವಣಿಗೆಯಲ್ಲಿ ಜರ್ಮನಿಯ ಪ್ರಭಾವವನ್ನು ಈ ಪುಟ್ಟ ಪುಸ್ತಕ ಗುರುತಿಸಿದೆ.


ಲೋಹಿಯಾ ಕಂಡ ಭಾರತೀಯ ರಾಜಕಾರಣವು ಸ್ವಾತಂತ್ರ್ಯ ಹೋರಾಟ ಕಾಲದಿಂದ ಸ್ವಾತಂತ್ರ್ಯೋತ್ತರ ಕಾಲದವರೆಗೂ ಹರಡಿದೆ. ವಸಾಹತುಕಾಲ ಹಾಗು ವಸಾಹತೋತ್ತರ ಕಾಲಗಳ ಅವಸ್ಥಾಂತರಗಳೆರಡರಲ್ಲಿಯೂ ಲೋಹಿಯಾ ಒಂದು ಬಗೆಯ ಭ್ರಮನಿರಸನವನ್ನು ಅನುಭವಿಸಿದ್ದರು. ಸ್ವಾತಂತ್ರ್ಯಕಾಲದ ಗಾಂಧಿಯವರ ನೈತಿಕ ಗುರುವಿನ ಸ್ಥಾನವನ್ನು ಅವರು ನಿರಾಕರಿಸದಿದ್ದರೂ ಕಾಂಗ್ರೆಸ್ಸಿನ ಅನೇಕ ಧೋರಣೆಗಳು ಅಲ್ಲಿದ್ದ ವ್ಯಕ್ತಿಗಳ ಸ್ವಹಿತಾಸಕ್ತಿಯನ್ನು ಕಾಯುತ್ತಿವೆ ಎನ್ನುವುದನ್ನು ಅವರ ಸೂಕ್ಷ್ಮ ಮನಸ್ಸು ಗ್ರಹಿಸಿತ್ತು. ಲೋಹಿಯಾರ ಈ ನಿಲುವು ಅವರನ್ನು ವ್ಯವಸ್ಥೆ ರಾಜಕಾರಣಿಗಳು ದೂರವಿಡುವಂತೆ ಮಾಡಿತು ಎನ್ನುವುದನ್ನು ಇಲ್ಲಿ ಲೇಖಕರು ಗುರುತಿಸಿದ್ದಾರೆ. ಈ ನಡುವೆ ಕಮ್ಯುನಿಸ್ಟರ ರಾಜಕೀಯ ಧೋರಣೆಗಳು ಹೊಸ ರಾಷ್ಟ್ರದ ಉದಯಕ್ಕೆ ಇನ್ನಷ್ಟು ಮಾರಕವಾಗುತ್ತ ಸಾಗಿದ್ದನ್ನು ಲೋಹಿಯಾ ವಿಷಾದದಿಂದಲೇ ಗಮನಿಸುತ್ತಾರೆ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಲೋಹಿಯಾ ಗಮನಿಸಿದ್ದೇನೆಂದರೆ ಅಧಿಕಾರಶಾಹಿ ಪಾಠಗಳನ್ನು ಬ್ರಿಟಿಷರಿಗಿಂತ ಚೆನ್ನಾಗಿ ಕಲಿತ ಭಾರತೀಯರ ಧೋರಣೆ. ಇದು ಅವರಿಗೆ ಹೆಚ್ಚಿನ ಆಘಾತವನ್ನು ಉಂಟು ಮಾಡಿದೆ. ಇದಕ್ಕೆ ಅವರು ನೆಹರೂರೊಂದಿಗೆ ಸಂಘರ್ಷಕ್ಕಿಳಿದ ರಾಜಕೀಯ ಚರಿತ್ರೆಯೇ ಸಾಕ್ಷಿ. ಈ ಸಂದರ್ಭವನ್ನು ಗ್ರಹಿಸಿದ ಲೋಹಿಯಾ ವಸಾಹತೋತ್ತರ ಕಾಲದ ಭ್ರಮನಿರಸನಗಳನ್ನು ಸಮಾಜವಾದಿ ಯುಟೋಪಿಯಾದೊಂದಿಗೇ ಇಟ್ಟು ಪರಿಶೀಲಿಸಿಕೊಳ್ಳುವುದು ಅವರ ಚಿಂತನೆಗಳನ್ನು ಪ್ರಖರಗೊಳಿಸಿದೆ.

ಲೋಹಿಯಾ ಚಿಂತನೆಗಳು ಏಕೆ ಪ್ರಸ್ತುತ ಎನ್ನಿಸುತ್ತವೆ ಎನ್ನುವುದನ್ನು ಈ ಪುಸ್ತಕ ಅನೇಕ ಬಾರಿ ಕೇಳಿಕೊಂಡಿದೆ. ಅದಕ್ಕೆ ಉತ್ತರವನ್ನು ಸಹ ಇದೇ ನಿಟ್ಟಿನಲ್ಲಿ ಗ್ರಹಿಸಲು ಯತ್ನಿಸಿದೆ. ಲೋಹಿಯಾ ಅವರ ಸಮಾಜವಾದಿ ರಾಜಕಾರಣ ಕ್ರಿಯಾತ್ಮಕ ರೂಪ ಪಡೆದುಕೊಳ್ಳುತ್ತಿದ್ದವು. ಇದಕ್ಕೆ ಅವರು ಜಾಡಮಾಲಿಯಾದ ಸುಖೋರಾಣಿಯನ್ನು ಚುನಾವಣೆಯಲ್ಲಿ ನಿಲ್ಲಿಸಿದ್ದು, ಸೇರಿದಂತೆ, ರೈತರ ಚಳವಳಿ, ನೇಪಾಳ ಹಾಗು ಗೋವಾ ಜನತೆಯ ಸಂಕಷ್ಟಗಳತ್ತ ಗಮನ ಹರಿಸಿದ್ದನ್ನು ಇಲ್ಲಿ ಉದಾಹರಿಸಬಹುದು. ಅವರ ಚಿಂತನೆಗಳಲ್ಲಿ ನಾಗಭೂಷಣರು ಗುರುತಿಸಿರುವಂತೆ ಮಾರ್ಕ್ಸ್‌ವಾದದ ಅರ್ಥಶಾಸ್ತ್ರೀಯ ನೆಲೆಗಳನ್ನು ದಾಟಿ ವಿಸ್ತರಿಸಿಕೊಳ್ಳಬೇಕಾದ ಆಯಾಮಗಳಿವೆ. ಲೋಹಿಯಾ ಅವರು ರಾಷ್ಟ್ರೀಯತೆಯನ್ನು ಒಂದು ಅರ್ಥಶಾಸ್ತ್ರೀಯ ನೆಲೆಯಲ್ಲಿಯೂ ಗುರುತಿಸಿದ್ದರು. ಹಾಗಾಗಿಯೇ. ಲೋಹಿಯಾರ ಮುಂಗಾಣ್ಕೆಯಲ್ಲಿ ಜಾಗತೀಕರಣದ ದರ್ಶನವೂ ಇತ್ತು. ವಸಾಹತೋತ್ತರ ಸಂದರ್ಭಗಳ ಬಗ್ಗೆ ಅರಿವಿದ್ದ ಈ ಚಿಂತಕ ಸಾಮ್ರಾಜ್ಯಶಾಹಿ ನೆಲೆಗಳು ಹೇಗೆ ಆಧುನಿಕ ಬಂಡವಾಳಶಾಹಿ ಪದ್ಧತಿಯನ್ನು ನವೀಕರಿಸಿಕೊಳ್ಳುತ್ತವೆ ಎನ್ನುವುದನ್ನು ಊಹಿಸಿದ್ದರು. ಆದರೆ ವಿಷಾದ ಎಂದರೆ ಲೋಹಿಯಾರ ಮಾತು, ಚಿಂತನೆಗಳು ಅವರ ಕಾಲದವರಿಗಿಂತ ಮುಂದಿದ್ದ ಕಾರಣ ಅವುಗಳಿಗೆ ತಕ್ಕ ಮನ್ನಣೆ ದೊರೆಯಲಿಲ್ಲವೋ ಏನೋ ಎನ್ನಿಸುತ್ತದೆ. ಲೋಹಿಯಾರ ನಿಷ್ಠುರ ಜೀವನ ನಿಲುವು ಸಹ ಇದಕ್ಕೆ ಒಂದು ಕಾರಣವಾಗಿರಬಹುದು.

ಪ್ರಸ್ತುತ ಪುಸ್ತಕವು ಲೋಹಿಯಾರ ಬದುಕು ಹಾಗು ಸಮಾಜವಾದಿ ತತ್ವಗಳನ್ನು ವಿವೇಚಿಸುವುದರ ಜೊತೆಗೆ ಸಮಾಜವಾದಕ್ಕೆ ಭವಿಷ್ಯವಿಲ್ಲವೇ? ಅದರ ಕಾಲ ಮುಗಿದು ಹೋಗಿದೆಯೇ? ಎಂಬ ಮುಖ್ಯವಾದ ಪ್ರಶ್ನೆಗಳನ್ನು ಕೇಳಿಕೊಳ್ಳುತ್ತದೆ. ಸಮಾಜವಾದವನ್ನು ಪುನರ್ನವೀಕರಿಸಿಕೊಳ್ಳುವ ಅವಕಾಶ ಮುಕ್ತವಾಗಿಯೇ ಇದೆ ಎನ್ನುವುದು ಸ್ವತ: ಸಮಾಜವಾದಿಯಾದ ಲೇಖಕರ ನಿಲುವು. ಈ ಪ್ರಶ್ನೆಗಳು ಅವರ ವಿರೋಧಿಗಳು ಕೂಡ ಕೇಳುವಂತವೇ. ಇದಕ್ಕೆ ಉತ್ತರ ಎಂದರೆ ಈ ಪುಸ್ತಕದಲ್ಲಿ ಅನುಬಂಧಗಳಾಗಿ ನೀಡಿರುವ ಅನೇಕ ಸ್ವಂತ/ಅನುವಾದಿತ ಲೇಖನಗಳು ಲೋಹಿಯಾರನ್ನು ಸಾಮಯಿಕಗೊಳಿಸುವುದು. ಆದರೆ ಈ ಪುಸ್ತಕ ಲೋಹಿಯಾರ ಅಮೂರ್ತ ಚಿಂತನಾ ಪ್ರವೃತ್ತಿಯ ಬಗ್ಗೆ, ಸಮಾಜವಾದಿ ರಾಜಕಾರಣದ ಸೋಲುಗಳ ಬೇರುಗಳ ಬಗ್ಗೆ ಇನ್ನಷ್ಟು ಹೊಳಹುಗಳನ್ನು ನೀಡಿದ್ದರೆ ಚೆನ್ನಿತ್ತು ಅನಿಸುತ್ತದೆ. ಹಾಗೇ ಈ ಪುಸ್ತಕದಲ್ಲಿನ ಮುದ್ರಣ ದೋಷಗಳನ್ನು ಪ್ರಕಾಶಕರು ಇನ್ನಷ್ಟು ಜವಾಬ್ದಾರಿಯಿಂದ ನಿರ್ವಹಿಸಬಹುದಿತ್ತು ಎನ್ನಿಸದಿರದು.

-ಆರ್.ತಾರಿಣಿ ಶುಭದಾಯಿನಿ

ತಿಂಗಳ ಸಾಲುಗಳು...



ಎಲ್ಲರಲ್ಲೂ ದೇವರಿದ್ದಾನೆ. ಆದರೆ ಎಲ್ಲರೂ ದೇವರಲ್ಲಿಲ್ಲ. ಹಾಗಾಗಿಯೇ ಲೋಕದಲ್ಲಿ ದುಃಖವಿದೆ.

-ರಾಮಕೃಷ್ಣ ಪರಮಹಂಸ

ಪತ್ರಿಕೆಗೆ ಶುಭ ಕೋರುವ...

-ಪಿ. ಪ್ರಶಾಂತ್
ದೀಪಾ
ಕು. ಅನಘ

ಬೆಂಗಳೂರು

HOSA MANUSHYA, a kannada Socialist monthly solely owned, edited, published and printed by D.S. Nagabhushana, at HIG-5,Kallahally Extn.,Vinoba Nagara, SHIVAMOGGA-577204. Printed at Replica Offset Printers, No.14/1, 1st Main, Industrail Town, Rajaji Nagara, Bengaluru-560 044 Ph: 08023357963

Regd. News Paper RNI No. KARKAN/2012/47568
Rgd No. KA/SK/SMG-1209/2013-15

ಇವರಿಗೆ \ To

If undelivered, please return to D.S. Nagabhushana, Editor, 'Hosa Manushya', 'HIG-5, 'Nudi', Kallahalli Extension, Vinoba Nagara, Shivamogga -577204(Karnataka)